ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ರಂಗನಾಥ ದಿವಾಕರ

## ಮನೋಜ್ ಪಾಟೀಲ

ಕನ್ನಡ ಪುಸ್ತಕ ಪ್ರಾಧಿಕಾರ

# ರಂಗನಾಥ ದಿವಾಕರ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ರಂಗನಾಥ ದಿವಾಕರ

ಮನೋಜ್ ಪಾಟೀಲ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**R.R DIVAKAR** A Monograph on R.R. Divakar in kannada Written by: Manoja Patil Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2011
Pages : xvi + 88
Copies : 1000
Price : ₹ 70

ಮೊದಲ ಮುದ್ರಣ : ೨೦೧೧
ಪುಟಗಳು : xvi + ೮೮
ಪ್ರತಿಗಳು : ೧೦೦೦
ಬೆಲೆ : ರೂ.೭೦

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ


ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಿಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**
ಸಂಪಾದಕ

# ಲೇಖಕರ ಮಾತು

ಕರ್ಮಯೋಗಿ ದಿವಾಕರ ಎಂಬ ಪುಸ್ತಕವನ್ನು ಕನ್ನಡಿಗರ ಮುಂದೆ ಇಡಲು ಹರ್ಷ ಎನಿಸುತ್ತದೆ. ಕನ್ನಡ ಅಭಿವೃದಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿದಲಿಂಗಯ್ಯ ಅವರು ಮೂಲಭೂತವಾಗಿ ಈ ಪುಸ್ತಕಕ್ಕೆ ಪ್ರೇರಣೆ ನೀಡಿದವರು. ಬೆಂಗಳೂರಿನಿಂದ ಹುಬ್ಬಳ್ಳಿಯಷ್ಟು ಇರುವ ದೂರವನ್ನು ನಾನು ಬೆಂಗಳೂರಿನ ಸರ್ಕಾರಿ ಅಧಿಕಾರ ವರ್ಗದವರ ಸಂಗಡ ಹೊಂದಿದ್ದೆ. ಹೀಗಾಗಿ ಪುಸ್ತಕ ಬರೆಯಬೇಕೆಂಬ ಅವರ ಆಮಂತ್ರಣ ನನಗೆ ಅಚ್ಚರಿಯನ್ನುಂಟು ಮಾಡಿದ್ದು ಸುಳ್ಳೇನಲ್ಲ. ಇದರ ಜೊತೆಗೆ ಆನಂದದ ಸಂಗತಿ ಎಂದರೆ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಸ್ಥಾನದಲ್ಲಿದ್ದ ಹಿರಿಯ ಜೀವ ರಂಗನಾಥ ದಿವಾಕರ ಅವರು ಕುಳಿತ ಸ್ಥಾನದಲ್ಲಿಯೇ ಅಂದರೆ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಸ್ಥಾನವನ್ನು ನಾನು ವಹಿಸಿದ್ದು ಇಲ್ಲಿ ಯೋಗಾಯೋಗ ಎನ್ನಬಹುದು. ಏನೇ ಆಗಲಿ ಮರೆತು ಹೋದ ಈ ಮಹಾ ಜೀವಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರ ಮರುಜೀವ ತಂದಿದೆ. ಈ ಪುಸ್ತಕ ಕನ್ನಡಿಗರಿಗೆ ಒಳ್ಳೆಯ ಓದು ತರಲೆಂದು ಹಾಗೂ ತರುಣರಿಗೆ ದಿವಾಕರರ ಜೀವನ ಮಾರ್ಗದರ್ಶಿ ಆಗಲೆಂದು ಹಾರೈಸುವೆ. ಪುಸ್ತಕದ ಡಿ.ಟಿಪಿ. ಅಕ್ಷರ ಜೋಡಣೆ ಮಾಡಿದ ಹುಬ್ಬಳ್ಳಿಯ ಭೂಮಿಕಾ ಪ್ರಿಂಟರ್ಸ್‌ನ ಸನ್ಮಿತ್ರ ಶ್ರೀ ಮೃತ್ಯುಂಜಯ ಶಾಂತಪೂರಮಠ ಇವರಿಗೆ ನನ್ನ ಕೃತಜ್ಞತೆಗಳು.

ಮನೋಜ್ ಪಾಟೀಲ
ಶ್ರೀ ಮಹಾಲಕ್ಷ್ಮಿ ಸನ್ಮತಿ ಮಾರ್ಗ,
ಧಾರವಾಡ - ೫೮೦೦೦೧.

# ಪರಿವಿಡಿ


| | | |
|---|---|---|
| ೧. | ಜನ್ಮ, ಬಾಲ್ಯ | ೧ |
| ೨. | ಕರ್ಮವೀರ ಮತ್ತು ಕರ್ಮವೀರರು | ೯ |
| ೩. | ಧಾರವಾಡದ ಗೋಳಿಬಾರ | ೧೩ |
| ೪. | ಭೂ ರಕ್ಕಸಾಯ ಸ್ವಾಹಾಃ | ೧೯ |
| ೫. | ಸ್ವರಾಜ್ಯ "ಆಶ್ರಮ" ದಲ್ಲಿ.... | ೨೨ |
| ೬. | ಸಂಯುಕ್ತ ಕರ್ನಾಟಕದ ಕಥೆ | ೩೦ |
| ೭. | ಸೆರೆಮನೆಯ ವಿಚಿತ್ರಗಳು | ೪೩ |
| ೮. | ಚಲೇಜಾವ್ ಚಳುವಳಿ | ೪೯ |
| ೯. | ಸ್ವಾತಂತ್ರ್ಯ ಉದಯ ಮತ್ತು ಅಧಿಕಾರ | ೫೯ |
| ೧೦. | ಕರ್ನಾಟಕ ಏಕೀಕರಣ | ೬೩ |
| ೧೧. | ಲೇಖಕರಾಗಿ ರಂ.ರಾ. ದಿವಾಕರ | ೬೯ |
| ೧೨. | ಲೋಕ ಶಿಕ್ಷಣ ಟ್ರಸ್ಟ | ೭೬ |
| ೧೩. | ಅಂತಿಮ ಪಯಣ | ೮೧ |
| ೧೪. | ದಿವಾಕರ ಅವರ ಜೀವನದ ಮಹತ್ವದ ಮೈಲುಗಲ್ಲುಗಳು | ೮೪ |



# ಜನ್ಮ, ಬಾಲ್ಯ

ಧಾರವಾಡದ ಅತೀ ದೊಡ್ಡ, ಕರ್ನಾಟಕ ವಿಶ್ವವಿದ್ಯಾಲಯದ ಕಟ್ಟಡದ ನೆರಳು ನೆತ್ತಿಯ ಮೇಲೆ ಬೀಳುವಷ್ಟು ಸನಿಹಕ್ಕಿದೆ ಮದಿಹಾಳ. ನೂರು ವರ್ಷದ ಹಿಂದಿನ ಧಾರವಾಡದ ಕೊನೆಯ ಹದ್ದು ಹಾವೇರಿ ಪೇಟೆಯಿಂದ ಎರಡು ಕಿ.ಮೀ. ದೂರದಲ್ಲಿದ್ದ ಮದಿಹಾಳ ಈಗಲೂ ಗ್ರಾಮವಾಗಿಯೇ ಉಳಿದಿದೆ. ಆದರೆ ಧಾರವಾಡಕ್ಕೆ ಕೊಂಡಿಯಾಗಿ ಜೋಡಿಸಿಕೊಂಡಿದೆ.

ಮದಿಹಾಳದ ಕೊನೆಯ ಮನೆಯ ಬದಿಗೆ ಹೊಲಗಳಿವೆ. ಬೆಳಿಗ್ಗೆ ರೈತರು ಹೊಲಕ್ಕೆ ಎತ್ತುಗಳ ಸಂಗಡ ಹೋಗುವಾಗ ಹಾಗೂ ಸಂಜೆ ಆತುರದಿಂದ ಬರುವಾಗಿನ ದೃಶ್ಯ ಹಳ್ಳಿಯ ನೆನಪೇ ತರುತ್ತದೆ. ನಳಗಳು ಬಂದಿದ್ದರೂ ಅವು ಸಾಕಷ್ಟು ನೀರನ್ನು ನೀಡುತ್ತಿಲ್ಲ ಎಂದು ಜರೆದು ನೆಲದಲ್ಲಿ ನಾಲ್ಕೈದು ಅಡಿ ಹಳ್ಳ ತೆಗೆದು ಅಲ್ಲಿ ಕೊಳಾಯಿಗಳಿಂದ ಬರುವ ನೀರಿಗೆ ಬಲ ಬಂದೀತೆಂಬ ಆಶಯವನ್ನಿನ್ನೂ ಮದಿಹಾಳ ವಾಸಿಗಳು ಇಟ್ಟುಕೊಂಡಿದ್ದಾರೆ. ನೂರು ವರ್ಷಗಳ ಹಿಂದಿನ ಕರೆ, ನಾಡ ಹಂಚುಗಳನ್ನು ಹೊದಿಸಿದ ಮನೆಗಳಿನ್ನೂ ಮದಿಹಾಳದಲ್ಲಿವೆ. ಕಪ್ಪು ಕೂದಲಲ್ಲಿಯ ಬಿಳಿ ಕೂದಲುಗಳಂತೆ ಅಲ್ಲಲ್ಲಿ ಕಾಂಕ್ರಿಟ್ ಕಟ್ಟಡಗಳೂ ಕಾಣುತ್ತಿವೆ !

ಹಾಗೆ ನೋಡಿದರೆ ಧಾರವಾಡ, ಏಳು ಗಿರಿ (ಗುಡ್ಡ)ಗಳ ಮೇಲೆ ಹಬ್ಬಿದ ನಗರವೆಂದು ಈ ನೆಲದಲ್ಲಿ ಹುಟ್ಟಿದ ಹಲವು ಸಾಹಿತಿಗಳು ವರ್ಣಿಸಿದ್ದಾರೆ. ಧಾರವಾಡದಲ್ಲಿ ಸೈಕಲ್ ಹೊಡೆಯುವವ ''ಮೂರ್ಖ'' ಎಂಬ ಇನ್ನೊಂದು ಆಧುನಿಕ ಗಾದೆಯೂ ಇದಕ್ಕೆ ಸೇರ್ಪಡೆಯಾಗಿ ಪರ್ವತಗಳ ಏರಿಯನ್ನೇ ಜರಿಯಲಾಗುತ್ತಿದೆ.

ಧಾರವಾಡ ಏಳು ಗುಡ್ಡಗಳ ನಗರ ಆದಂತೆ ಏಳು ಹಳ್ಳಿಗಳನ್ನು ಆಪೋಷನ ತೆಗೆದುಕೊಂಡ ನಗರ ಎಂದರೂ ನಡೆದೀತು. ಮದಿಹಾಳ, ಸಪ್ತಾಪುರ, ಹೊಸಯಲ್ಲಾಪುರ, ಕಮಲಾಪೂರ, ನಾರಾಯಣಪುರ, ಲಕಮನಹಳ್ಳಿ, ಸೈದಾಪೂರ ಇವುಗಳೀಗ ಧಾರವಾಡದಲ್ಲಿ ಸೇರಿದ್ದರೂ ಇನ್ನೂ ಗ್ರಾಮಗಳಾಗಿಯೇ ಇರುವ ಸ್ಥಿತಿಯನ್ನು ಇಟ್ಟುಕೊಂಡ ಹಳ್ಳಿಗಳೇ ಹೌದು.

ಮದಿಹಾಳದ ಒಂದು ಚಿಕ್ಕ ಮನೆಯ ಕತ್ತಲು ಕೋಣೆಯಲ್ಲಿ ೧೮೯೪ ಸೆಪ್ಟೆಂಬರ್ ತಿಂಗಳ ೩೦ ನೇ ದಿನದ ರಾತ್ರಿ, ಕೋಣೆಯಲ್ಲಿ ಇಳಿಯುತ್ತಿದ್ದ ಚಿಕ್ಕ ಚಿಮಣಿ ದೀಪಕ್ಕೆ ಗಾಢಾಂಧಕಾರವನ್ನು ಹೊಡೆದೋಡಿಸುವ ಶಕ್ತಿ ಇರಲಿಲ್ಲ. ಆದ್ದರಿಂದ ಅಲ್ಲಿ ದೀಪವೂ ಇತ್ತು, ಜೊತೆಗೆ ಕತ್ತಲೂ ಇತ್ತು, ಎಂದೆನ್ನಬಹುದು. ತಾಯಿ ಸೀತಾಬಾಯಿ ಪ್ರಸವ ವೇದನೆಯಿಂದ ಬಳಲುತ್ತಿದ್ದಾಳೆ.

೧೯೭೩ ರಲ್ಲಿ ರಂ.ರಾ. ದಿವಾಕರರವರಿಗೆ ೮೦ ವರ್ಷ ತುಂಬುವ ನಿಮಿತ್ತ ಸಮಾರಂಭ ಏರ್ಪಾಡಾಗಿತ್ತು. ಆಗ ಪ್ರಸಿದ ಲೇಖಕರೂ ಆಗಿದ್ದ ಅವರಿಗೆ ಅಭಿಮಾನಿಗಳು, ಸ್ನೇಹಿತರು ಅವರ ಆತ್ಮ ಕಥೆ ಬರೆಯಲು ಸತತವಾಗಿ ಒತ್ತಾಯಿಸುತ್ತಲೇ ಇದ್ದರು. ಆದರೇನು ವಯಸ್ಸು ಎಂಬತ್ತಾದರೂ ಅವರ ಚಟುವಟಿಕೆಗಳಿಗೆ ಬರವೇ ? ಆ ಎಡಬಿಡದ ದಿನಗಳಲ್ಲೇ ಕಡ್ಡಾಯವಾಗಿ ಅವರಿಗೆ ಹದಿನೈದು ದಿನಗಳ ವಿಶ್ರಾಂತಿ. ಅದು ನಾಮ್ಕೆ ವಾಸ್ತೆ ಆಗಿರಲಿಲ್ಲ. ಹದಿನೈದು ದಿನಗಳ ಕಾಲ ಕಣ್ಣುಮುಚ್ಚೇ ಇರುವ ಪ್ರಸಂಗ ಬಂದಿತ್ತು ! ರಂ.ರಾ. ಅವರ ಬಲಗಣ್ಣಿಗೆ ಮೇಲೆ ಶಸ್ತ್ರಕ್ರಿಯೆ ಆಗಿತ್ತು. ಹೀಗಾಗಿ ಅದಕ್ಕೆ ಕಡ್ಡಾಯದ ವಿಶ್ರಾಂತಿ. ಇನ್ನುಳಿದ ಒಂದೇ ಕಣ್ಣಾದ ಎಡಗಣ್ಣಿಗೆ ದಿನಕ್ಕೆ ಒಂದೇ ಗಂಟೆ ಮಾತ್ರ ನೋಡುವ ಕೆಲಸ ಮಾಡ ಬೇಕೆಂಬ ವೈದ್ಯರ ಶರತ್ತು !.

ಇದರಿಂದ ದಿನದ ೨೪ ಗಂಟೆ ಬಲಗಣ್ಣು ಹಾಗೂ ೨೩ ಗಂಟೆ ಕಾಲ ಎಡಗಣ್ಣು ಕಡ್ಡಾಯದ ವಿಶ್ರಾಂತಿಯಲ್ಲಿರುತ್ತಿದ್ದವು. ಹೀಗಾಗಿ ಮನದ ಪರದೆಯ ಮೇಲೆ ಭವಿಷ್ಯದ ಕಾಲಕ್ಕಿಂತಲೂ ಭೂತಕಾಲದ ವಿಚಾರಗಳೇ ಹೆಚ್ಚು ಬರುತ್ತಿದ್ದವು. ಇಂಥ ಬಿಗುವಿನ ಪಹರೆಯಲ್ಲಿಯೇ ಅವರು ತಮ್ಮ ಬಗ್ಗೆ ೨೨ ಪುಟಗಳ ಚಿಕ್ಕ ಪುಸ್ತಿಕೆಯನ್ನು ಬರೆದರು. ಅವರ ಮಾತುಗಳಲ್ಲಿಯೇ ಅವರ ಜನನದ ಬಗ್ಗೆ ಕೇಳಿ.

''ಶಾಲಿವಾಹನಶಕೆ ೧೮೧೬, ಕ್ರಿಸ್ತಶಕ ೧೮೯೪ ಸಪ್ಟೆಂಬರ ತಿಂಗಳ ೩೦ ನೇ ದಿನದ ರಾತ್ರಿ ಲಕ್ಷಾಂತರ, ಕೋಟ್ಯಾಂತರ ಮಾನವ ಪಿಳ್ಳೆಗಳಂತೆ ಒಂದು ಗಂಡು ಮಗು ಆ ದಿನ ಜನ್ಮತಾಳಿತು. ಒಂಬತ್ತು ತಿಂಗಳು ದೇವ - ದೈವಗಳಿಂದ ರಕ್ಷಿಸಲ್ಪಟ್ಟು ಗರ್ಭದಿಂದ ಲೋಕದ ಅನುಭವ ಪಡೆಯಲು ಚಿಟ್ಟನೇ ಚೀರಿ ಒಂದು ನವ ಜೀವ ಉಸಿರಾಡಲಾರಂಭಿಸಿತು. ಮೆಲ್ಲ ಮೆಲ್ಲನೇ ಪಂಚಭೂತಗಳ, ಪಂಚಭೂತಾತ್ಮಕ ಮಾನವ ದೇಹವೊಂದು ಪಂಚೇಂದ್ರಿಯಗಳ ಮೂಲಕ ತನ್ನ ಜೀವನ ಯಾತ್ರೆ ಪ್ರಾರಂಭಿಸಿತು.

ತಾಯಿಯ ಹೊಟ್ಟೆಯಲ್ಲಿ ತಾಯಿಯೊಡನೆ ಅದ್ವೈತ ಸ್ಥಿತಿಯಲ್ಲಿದ್ದ ಜೀವವೊಂದು ದ್ವೈತದ ಅನುಭವವನ್ನು ಪಡೆಯಲು ಮೊದಲು ಮಾಡಿತು. ಶೀತೋಷ್ಣ, ಸುಖ ದುಃಖ, ರಾಗ ದ್ವೇಷ, ಲಾಭ ಹಾನಿ, ಮಾನಾಪಮಾನ, ಒಳಿತು ಕೆಡಕು ಇತ್ಯಾದಿ ದ್ವಂದ್ವಗಳಿಂದ ಕೂಡಿದ ಈ ಬಾಹ್ಯ ವಿಶ್ವದಲ್ಲಿ ಚಿದ್ಘನದ ಒಂದು ಚಿದಂಶ ಕಾಲಿಟ್ಟಿತು.

ಆ ದಿನ ರಾತ್ರಿ ಹುಟ್ಟಿದ ಕೂಸಿಗೆ ನಂತರ 'ರಂಗ' ಎಂಬ ಹೆಸರಿಟ್ಟಾಯಿತು. ರಂಗ್ಯಾ, ರಂಗಣ್ಣ, ರಂಗಪ್ಪ, ರಂಗರಾವ್, ರಂಗರಾವ್ ಜೀ ಇವು ಆ ಹೆಸರಿನ ಪರ್ಯಾಯಗಳು. ಆದರೆ

ರಂಗನಾಥ ಇದೇ ಅವನು ತಾನಾಗಿ ಆರಿಸಿಕೊಂಡ ಹೆಸರು. ಆದುದರಿಂದ ರಂಗನಾಥ ರಾಮಚಂದ್ರ ದಿವಾಕರ ಇದೇ ಅಭಿದಾನವಾಗಿ ನಿಂತಿತು.

ತಂದೆ ರಾಮಚಂದ್ರರಾಯರು ಆಗಿನ ದಕ್ಷಿಣ ಮರಾಠಾ ರೇಲ್ವೆಯ ಓರ್ವ ಚಿಕ್ಕ ನೌಕರರು. ೧೮೭೦ ಸುಮಾರು ಸ್ಥಾಪಿಸಲ್ಪಟ್ಟಿದ್ದ ಈ ಬ್ರಿಟಿಷ್ ಕಂಪನಿಯ ಪ್ರಧಾನ ಕಛೇರಿ ಧಾರವಾಡವೇ ಆಗಿತ್ತು. ಅಲ್ಲಿ ಈಗಿರುವ ಕರ್ನಾಟಕ ಕಾಲೇಜಿನ ಮನಮೋಹಕ ಸುಂದರ ಕಟ್ಟಡ ಮೂಲತಃ ದಕ್ಷಿಣ ಮರಾಠಾ ರೇಲ್ವೆಗೆ ಸೇರಿದ ಪ್ರಧಾನ ಕಛೇರಿಯ ಕಟ್ಟಡವೇ ಆಗಿತ್ತು. ಈ ಕಂಪನಿಯ ಮುಖ್ಯ ಕಾರ್ಯವೆಂದರೆ ಧಾರವಾಡದಿಂದ ಹೊಸಪೇಟೆಯವರೆಗೆ ರೇಲ್ವೆ ಮಾರ್ಗ ನಿರ್ಮಿಸುವುದು. ೧೮೮೫ ರ ಸುಮಾರು ಈ ಕಾರ್ಯ ಪ್ರಾರಂಭಗೊಂಡಿತ್ತು.

ಧಾರವಾಡದಿಂದ ಮದಿಹಾಳ, ನಂತರ ಸವದತ್ತಿ ಆಮೇಲೆ ಬೆಳಗಾವಿವರೆಗೆ ರೇಲ್ವೆ ಮಾರ್ಗ ನಿರ್ಮಿಸುವ ಯೋಜನೆಯನ್ನು ಈ ಕಂಪನಿ ಹೊಂದಿತ್ತು. ಆದ್ದರಿಂದಲೇ ರಾಮಚಂದ್ರ ದಿವಾಕರ ಅವರೂ ಸೇರಿದಂತೆ ಹೆಚ್ಚಿನ ನೌಕರರು ಮದಿಹಾಳದಲ್ಲಿಯೇ ನೆಲೆಸಿದ್ದರು. ಆದರೆ ಆಗ ಗೋವೆಯನ್ನು ಆಳುತ್ತಿದ್ದ ಪೋರ್ತುಗೀಸರ ಒತ್ತಾಯಕ್ಕೆ ಮಣಿದ ಬ್ರಿಟಿಷರ ಮಾಲೀಕತ್ವದ ಈ ದಕ್ಷಿಣ ಮರಾಠಾ ಕಂಪನಿಯು ಧಾರವಾಡದಿಂದ, ಮದಿಹಾಳ, ಸವದತ್ತಿವರೆಗೆ ನಿರ್ಮಿಸಬೇಕೆಂದಿದ್ದ ರೇಲ್ವೆ ಹಳಿ ನಿರ್ಮಾಣ ಕೈಬಿಟ್ಟು ಧಾರವಾಡದಿಂದ ಲೋಂಡಾ, ನಂತರ ಬೆಳಗಾವಿವರೆಗೆ ಈಗಿರುವ ಹಾಗೆಯೇ ರೇಲ್ವೆ ಮಾರ್ಗ ನಿರ್ಮಿಸಿತು. ಹಾಗೂ ಲೋಂಡಾದಿಂದ ಗೋವೆಯ ವಾಸ್ಕೋ - ಡಿ - ಗಾಮಾದ ವರೆಗೆ ಮಾರ್ಗ ನಿರ್ಮಿಸಲು ಗೋವೆಯ ಪೋರ್ತುಗೀಸರ ಅಧಿಪತ್ಯದ ರೇಲ್ವೆ ಕಂಪನಿಗೆ ನೆರವು ನೀಡಿತು. ಅಂದಿನಿಂದ ಇಲ್ಲಿಯವರೆಗೆ ಅಂದರೆ ೧೨೫ ವರ್ಷಗಳವರೆಗೂ ಧಾರವಾಡದಿಂದ ಬರೀ ೭೦ ಕಿ.ಮಿ. ರಸ್ತೆಯ ಮೂಲಕ ಅಂತರದಲ್ಲಿರುವ ಬೆಳಗಾವಿ, ಈಗ ರೇಲ್ವೆ ಮಾರ್ಗದ ಮೂಲಕ ಸುಮಾರು ೪೦ ಕಿ.ಮೀ.ನಷ್ಟು ದೂರವಾಗಿದೆ. ಹಾಗೂ ಧಾರವಾಡ ಸವದತ್ತಿ ಬೆಳಗಾವಿಯ ರೈಲು ಮಾರ್ಗ ಈಗಲೂ ಅತ್ಯಂತ ಬೇಡಿಕೆಯ ಹಾಗೂ ಹೋರಾಟದ ವಿಷಯವಾಗಿದೆ !

ಕಳೆದ ಶತಮಾನದ ಪ್ರಾರಂಭದಲ್ಲಿ ಖ್ಯಾತ ಶಿಕ್ಷಣ ಪ್ರೇಮಿ ಆಗಿದ್ದ ರೊದ್ದ ಶ್ರೀನಿವಾಸ ರಾಯರು ಈ ವಿಷಯವನ್ನು ಆಗಿನ ಮುಂಬೈ ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪಿಸಲು ಯತ್ನಿಸಿದರು. ಆದರೆ ಸಭಾಪತಿಗಳು ಇದು ''ವಿದೇಶಾಂಗ ನೀತಿಗೆ'' ಸಂಬಂಧಿಸಿದ ಪ್ರಶ್ನೆಯಾಗಿದ್ದು ಇದನ್ನು ತಿರಸ್ಕರಿಸಿದ್ದೇನೆ ಎಂದು ಹೇಳಿಬಿಟ್ಟರು ! ಅಂದಿನಿಂದ ಈ ಪುಸ್ತಕ ಪ್ರಕಟವಾಗುವವರೆಗೂ ಕನ್ನಡಿಗರ ''ಕ್ಷೀಣ ಧ್ವನಿ'' ರಾಜ್ಯ ವಿಧಾನ ಮಂಡಳ, ಸಂಸತ್ತಿನಲ್ಲಿ ಪ್ರತಿಕ್ರಿಯಿಸುತ್ತಲೇ ಇದೆ. ಆದರೆ ಸಂಪಾದನೆ ಮಾತ್ರ ಶೂನ್ಯವಾಗಿದೆ !

೧೯೦೮ ದಲ್ಲಿ ದಕ್ಷಿಣ ಮರಾಠಾ ರೇಲ್ವೆಯು ಮದ್ರಾಸ ರೇಲ್ವೆಯಲ್ಲಿ ವಿಲೀನವಾಯಿತು. ಧಾರವಾಡದ ರೇಲ್ವೆ ಕಛೇರಿಯು ಬಂದಾಯಿತು. ಮುಂದೆ

೧೯೧೬ದಲ್ಲಿ ಕರ್ನಾಟಕ ಕಾಲೇಜು ಪ್ರಾರಂಭವಾದಾಗ ಈ ಸುಂದರವಾದ ಕಟ್ಟಡ ರೇಲ್ವೆಯಿಂದ ಆ ಕಾಲೇಜಿಗೆ ಹಸ್ತಾಂತರಗೊಂಡಿತು. ಆಗಿನ ಮದಿಹಾಳ ಗ್ರಾಮದಲ್ಲಿ ನೆಲೆಗೊಂಡಿದ್ದ ರೇಲ್ವೆ ಸಿಬ್ಬಂದಿಯು ಬೇರೆ ಬೇರೆ ಕಡೆಗೆ ತೆರಳುವುದು ಇದರಿಂದ ಅನಿವಾರ್ಯವಾಯಿತು. ರಾಮಚಂದ್ರ ದಿವಾಕರ ರೇಲ್ವೆಯಲ್ಲಿ ಚಿಕ್ಕ ಹುದ್ದೆಯಲ್ಲಿದ್ದರು. ಅದಕ್ಕೆಂದೆ ದೂರದ ವಿಜಾಪೂರ ಜಿಲ್ಲೆ ಬೀಳಗಿ ಬಿಟ್ಟು ಧಾರವಾಡಕ್ಕೆ ವಲಸೆ ಬಂದಿದ್ದರು. ಆಗ ಅವರಿಗೆ ಸಿಗುತ್ತಿದ್ದ ಸಂಬಳ ಆದರೂ ಎಷ್ಟು ? ಬರೀ ಹದಿನೈದು ರೂಪಾಯಿಗಳು. ಆದರೆ ಇಷ್ಟು ಮೊತ್ತ ಆಗ ದೊಡ್ಡ ಸಂಪತ್ತಾಗಿತ್ತು. ಏಕೆಂದರೆ ಆಗ ಬಂಗಾರ ಒಂದು ತೊಲೆಗೆ (ಈಗಿನ ೧೧.೫ ಗ್ರಾಂ) ಬರೀ ೨೦ ರೂಪಾಯಿಗಳಾಗಿತ್ತು.

ರಂಗನಾಥ ದಿವಾಕರರು ರಾಮಚಂದ್ರರಾಯರಿಗೆ ಎರಡನೇ ಮಗ. ಒಟ್ಟು ಅವರಿಗೆ ನಾಲ್ವರು ಗಂಡು ಇಬ್ಬರು ಹೆಣ್ಣುಮಕ್ಕಳು.

ಆರೂ ಜನರ ಸಂಸಾರ, ಬರು ಹೋಗುವ ಜನರಿಂದ ಮನೆ ತುಂಬಿದ್ದರೂ ರಾಮಚಂದ್ರ ದಿವಾಕರರು ಬಹುದೊಡ್ಡ ಆಶಾವಾದಿ ಆಗಿದ್ದರು. ತಮ್ಮ ಪರಿಸ್ಥಿತಿ ಹೇಗೆ ಇದ್ದರೂ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂಬ ಉದ್ದೇಶ ಈಡೇರಿಸಿದ್ದರು. ಹಿರಿಯ ಮಗ ಶ್ರೀನಿವಾಸ ಹುಬ್ಬಳ್ಳಿಯಲ್ಲಿ ಶಿಕ್ಷಕತಿಯಾಗಿದ್ದ, ಕಿರಿಯ ಮಗ ಗೋವಿಂದ ರೇಲ್ವೆಯಲ್ಲಿ ನೌಕರಿ ಮಾಡುತ್ತಿದ್ದ. ಮೂರನೇ ಮಗ ಬೋಧರಾವ್ ಎಂ.ಬಿ.ಬಿ.ಎಸ್. ಪದವಿ ಪಡೆದು ಹುಬ್ಬಳ್ಳಿಯಲ್ಲಿ ಪ್ರಾಕ್ಟೀಸು ಮಾಡುತ್ತಿದ್ದ. ಎರಡನೇಯವರಾದ ರಂಗನಾಥ ಎಂ.ಎ.ಎಲ್.ಎಲ್.ಬಿ. ಪದವಿಗಳನ್ನು ಮುಗಿಸಿದ್ದ. ರಾಮಚಂದ್ರರಾಯರು ದೇಶಪ್ರೇಮಿ ಮನೋಭಾವದವರಾಗಿದ್ದರು. ಆಯುರ್ವೇದದ ಬಗ್ಗೆ ಆಸಕ್ತಿಯೂ ಇತ್ತು. ರಂಗನಾಥರವರು ಜನಿಸಿದ ನಂತರ ಅವರಿಗೆ ಬೆಳಗಾವಿಗೆ ವರ್ಗವಾಯಿತು. ೧೯೦೫ - ೧೯೦೬ ದಲ್ಲಿ ಅಲ್ಲಿಯ ಕನ್ನಡ ಶಾಲೆಗೆ ಹೋಗತೊಡಗಿದರು. ಅಲ್ಲಿ ನಾಲ್ಕನೇ ವರ್ಗದಲ್ಲಿ ದೇವರು ಇದ್ದಾನೆ ಎಂಬ ಒಂದು ಪಾಠ ಇತ್ತಂತೆ. ಆಗ ಮಂಡಗಿ ಎಂಬ ಶಿಕ್ಷಕರು ಪಾಠ ಮಾಡುತ್ತಿದ್ದರು. ಮನೆಗೆ ದಿವೇಕರ ಎಂಬ ಶಿಕ್ಷಕರು ಟ್ಯೂಶನ್ ಹೇಳಲು ಬರುತ್ತಿದ್ದರು. ''ದೇವರು ಇದ್ದಾನೆ'' ಎಂಬ ಪಾಠ ಬಹುಶಃ ಅವರ ಎಳೆಯ ಮನದ ಮೇಲೆ ಪರಿಣಾಮ ಬೀರಿರಲೇಬೇಕು. ಇದರಿಂದ ಆಧ್ಯಾತ್ಮದ ಕಡೆಗೆ ಅವರು ಹೆಚ್ಚು ವಾಲಲೂ ಸಹ ಇದು ಪ್ರಭಾವ ಹೆಚ್ಚಿಸಿರಲೇಬೇಕು.

''ನಿರ್ಭಯತೆ'' ರಂಗನಾಥ ದಿವಾಕರ ಅವರ ಒಂದು ಅಪೂರ್ವ ಗುಣ. ಅವರು ಬರೀ ನಾಲ್ಕು ವರ್ಷದ ಕೂಸಾಗಿದ್ದಾಗ ಒಂದು ರಾತ್ರಿ ಸಮಯದಲ್ಲಿ ತುಂಬಾ ಹಠ ಮಾಡುತ್ತಿದ್ದರಂತೆ. ಏನಾದರೂ ಮಾಡಿ ಹೆದರಿಸಿ ಅವರನ್ನು ಸುಮ್ಮನಿರಿಸಲು ಅವರ ಹನ್ನೆರಡು ವರ್ಷದ ಅಕ್ಕ ಪ್ರಯತ್ನ ಪಡುತ್ತಲೇ ಇದ್ದಳು. ಕೊನೆಗೆ ಬೇಸತ್ತು, ಕೈಯಲ್ಲಿ ಚಿಮಣಿ ದೀಪವನ್ನು ಹಿಡಿದು ಬಾಗಿಲು ಹೊರಗೆ ಅವರನ್ನು ಎಸೆಯುವ ನಟನೆ ಮಾಡುತ್ತ ಭಯ ಹುಟ್ಟಿಸಲು ನಿನ್ನನ್ನು ''ಕರೆ ಬಾವಾನಿಗೆ'' ಕೊಡುವೆ ಎಂದಳು. ಆದರೆ ಇದಕ್ಕೆ ಹೆದರದ ಅವ

ತಾನೇ ದೀಪವನ್ನು ಉಫ್ ಎಂದು ಊದಿ ನಂದಿಸಿ ಬಿಟ್ಟ. ಎಲ್ಲೆಡೆಯಲ್ಲೂ ಗಾಢಾಂಧಕಾರವೇ ಕವಿಯಿತು. ರಂ.ರಾ.ರನ್ನು ಹೆದರಿಸಲು ಹೋಗಿದ್ದ ಅಕ್ಕ ತಾನೇ ಗಡಗಡ ನಡಗುತ್ತ ಭೀತಿಯಿಂದ ಅವನನ್ನು ಅಪ್ಪಿಕೊಂಡು ಬಿಟ್ಟಳು !

ಬೆಳಗಾವಿಯಲ್ಲಿ ರಂಗನಾಥ ಅವರಿಗೆ ಪ್ರಿಪರೇಟರಿ ಸ್ಕೂಲ್ ಎಂಬ ಖಾಸಗಿ ಇಂಗ್ಲಿಷ ಶಾಲೆಗೆ ಕಳಿಸಲಾಗಿತ್ತು. ಆಗ ಸ್ವದೇಶಿ ಚಳುವಳಿಯೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ತಂದೆ ರಾಮಚಂದ್ರ ರಾಯರು ಮನೆಗೆ ಲೋಕಮಾನ್ಯ ಟಿಳಕರ ಕೇಸರಿ, ಇದಲ್ಲದೆ ಕಾಳ, ಭಾವಾ ಎಂಬ ಮರಾಠಿ ಪತ್ರಿಕೆಗಳನ್ನು ತರಿಸುತ್ತಿದ್ದರು. ನಂತರ ಮಹರ್ಷಿ ಅರವಿಂದರ ವಂದೇ ಮಾತರಂ, ಕರ್ಮಯೋಗಿನ್ ಪತ್ರಿಕೆಗಳನ್ನು ತರಿಸಲಾರಂಭಿಸಿದರು. ಇವುಗಳನ್ನೆಲ್ಲ ರಂಗನಾಥರು ನೋಡುತ್ತಿದ್ದರು, ಓದುತ್ತಿದ್ದರು ಹಾಗೆಯೇ ಅರ್ಥವನ್ನು ಮಾಡಿಕೊಳ್ಳುತ್ತಿದ್ದರು. ಕಾಲಕ್ರಮೇಣ ಅವರ ಮಿತ್ರ ಮಂಡಳಿ ಹೆಚ್ಚಾಗತೊಡಗಿತ್ತು. ಛತ್ರಪತಿ ಶಿವಾಜಿ ಮಹಾರಾಜರ ಮತ್ತು ರಾಮದಾಸರ ಜೀವನ ಚರಿತ್ರೆಯನ್ನು ಓದತೊಡಗಿದರು. ಹೊರಗೆ ಸ್ವದೇಶಿ ಆಂದೋಲನ, ದೇಶಪ್ರೇಮಿ ಅಪ್ಪ ಇದರ ಜೊತೆಗೆ ದಕ್ಷಿಣ ಮಹಾರಾಷ್ಟ್ರ ಎಂದು ಕರೆಸಿಕೊಳ್ಳುತ್ತಿದ್ದ ಬೆಳಗಾವಿ, ವಿಜಾಪೂರ, ಧಾರವಾಡ, ಕಾರವಾರ ಜಿಲ್ಲೆಗಳ ಮೇಲೆ ಲೋಕಮಾನ್ಯ ಬಾಳ ಗಂಗಾಧರ ಟಿಳಕರ ಅತೀವ ಪ್ರಭಾವ ಇದರಿಂದಾಗಿ ದಿವಾಕರರ ತಲೆಯಲ್ಲಿ ಒಂದು ನಿರ್ದಿಷ್ಟ ವಿಚಾರ ರಾಷ್ಟ್ರೀಯತೆ ಬಗ್ಗೆ ಹಾಗೂ ಸ್ವಾತಂತ್ರ್ಯದ ಬಗ್ಗೆ ಗರಿಗಟ್ಟತೊಡಗಿದವು.

ತಿಳುವಳಿಕೆ ಕಡಿಮೆ ಇದ್ದರೂ ಸಹ ದೇಶಪ್ರೇಮದ ಭಾವೋದ್ವೇಗ ಬಾಲಕನ ಮನಸ್ಸಿನಲ್ಲಿ ಆಗಾಗ ಆಗುತ್ತಲೇ ಇತ್ತು. ಇದು ರಂಗನಾಥರ ಮಿತ್ರಮಂಡಳಿಗೆ ಸಹಪಾಠಿಗಳಿಗೆ ಅಳಿಸಲಾಗದ ಪ್ರಭಾವ ಬೀರತೊಡಗಿತ್ತು. ಹೀಗಾಗಿ ಪರದೇಶಿ ಸಕ್ಕರೆ, ಚಹಾ ಸೇವನೆ, ಪರದೇಶಿ ಆಟ ನೋಟಗಳು ಇವುಗಳ ಮೇಲೆ ಬಹಿಷ್ಕಾರವನ್ನು ಹಾಕಲಾಯಿತು. ಬೆಳಗಾವಿಯಲ್ಲಿ ಈಗಲೂ ಸಹ ಕಂಟೋನ್ಮೆಂಟ್ ಎಂಬ ಮಿಲಿಟರಿ ಠಾಣೆ ಇದೆ. ಮರಾಠಾ ಲೈಟ್ ಇನ್‌ಫಂಟರಿಯ ಪ್ರಧಾನ ಕಛೇರಿ ಮತ್ತು ತರಬೇತಿ ಕೇಂದ್ರವೂ ಸಹ ಈಗ ಇದಾಗಿದೆ. ಈ ಹಿಂದೆಯೇ ಅಲ್ಲಿ ಬ್ರಿಟಿಷರ ಸೈನಿಕ ಪಡೆ ಇರುತ್ತಿತ್ತು. ಅವರು ಅಲ್ಲಿಂದ ಸಾಯಂಕಾಲ ಹೊತ್ತು ಸನಿಹದ ರೇಲ್ವೆ ನಿಲ್ದಾಣಕ್ಕೆ ವಾಕಿಂಗ್‌ಗಾಗಿ ಬರುತ್ತಿದ್ದರು. ಇವರನ್ನು ನೋಡಿ ಇವರೆಲ್ಲ ನಮ್ಮನ್ನು ಆಳುವವರೆಂಬ ಭಾವನೆ ಮಕ್ಕಳಲ್ಲಿ ಬರತೊಡಗುತ್ತಿತ್ತು. ಕೂಡಲೇ ಅವರು ''ವಂದೇ ಮಾತರಂ'' ಎಂದು ಗಟ್ಟಿಯಾಗಿ ಕೂಗುತ್ತಿದ್ದರು. ಇದನ್ನು ಆ ಪರಂಗಿ ಸೈನಿಕರು ಸಹಿಸುತ್ತಿರಲಿಲ್ಲ. ಆರಡಿ ಎತ್ತರದ ಆ ಬ್ರಿಟಿಷ್ ಸೈನಿಕರು ಈ ರೀತಿ ಕೂಗಿದ ಪುಟ್ಟ ಮಕ್ಕಳ ಮೇಲೆ ಬೀಸಿ ಬೀಸಿ ಕಲ್ಲು ಎಸೆಯುತ್ತಿದ್ದರು. ಕಲ್ಲೇಟಿನಿಂದ ತಪ್ಪಿಸಿಕೊಳ್ಳುತ್ತ ಈ ಮಕ್ಕಳು ಮರೆಯಾಗುತ್ತಲೇ ಮತ್ತೆ ವಂದೇ ಮಾತರಂ ಘೋಷಣೆ ಕೂಗುತ್ತಿದ್ದರು. ಹೀಗಾಗಿ ಆ ವಯದಿಂದಲೇ ರಂಗನಾಥ ದಿವಾಕರರಿಗೆ ಪ್ರತಿಭಟನೆಯ ಸ್ವರೂಪ ಮತ್ತು ಅದರ ರೂಪರೇಷೆ ಗೋಚರವಾಗತೊಡಗಿತು. ಆಗಲೇ

ಭಾರತೀಯ ಆಟಗಳಾದ ಮಲ್ಲಕಂಬ, ಕುಸ್ತಿ ಮುಂತಾದ ಸಾಹಸ ಆಟಗಳು ಅವರಲ್ಲಿ ಪಸರಿಸಿದ್ದವು. ಇದರ ಜೊತೆಗೆ ಭಾರತೀಯತ್ವವನ್ನೇ ಆಚರಿಸಬೇಕೆಂದೇ ಬಯಸಿ ಆಧ್ಯಾತ್ಮ ಮತ್ತು ವೀರರಸಗಳಲ್ಲಿ ರಂಗನಾಥರು ತಲ್ಲೀನರಾಗುತ್ತಿದ್ದರು. ಹೀಗಾಗಿ ಭೌತಿಕ ಮತ್ತು ಮಾನಸಿಕ ಶರೀರಗಳೆರಡು ಪರಿಶುದ ಮತ್ತು ಪರಿಪಕ್ವತೆಗೆ ಒಳಗಾಗಿದ್ದವು.

೧೯೦೮ ರಲ್ಲಿ ತಂದೆ ರಾಮರಾಯರು ಬೆಳಗಾವಿಯಿಂದ ಹುಬ್ಬಳ್ಳಿಗೆ ವರ್ಗಾಯಿಸಲ್ಪಟ್ಟರು. ಹಾಗೂ ಅಲ್ಲಿಯೇ ನಿವೃತ್ತಿಯನ್ನೂ ಪಡೆದು ವಾಸ ಮಾಡಲು ತೊಡಗಿದರು. ಹೀಗಾಗಿ ತಮ್ಮ ಮಾಧ್ಯಮಿಕ ಅಭ್ಯಾಸವನ್ನು ರಂಗನಾಥರು ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಮುಂದುವರಿಸಬೇಕಾಯಿತು. ಅದೇ ವರ್ಷ ಲೋಕಮಾನ್ಯ ಬಾಳಗಂಗಾಧರ ತಿಲಕರನ್ನು ಬ್ರಿಟಿಷ್ ಸರ್ಕಾರ ದೇಶದ್ರೋಹದ ಆರೋಪದ ಮೇರೆಗೆ ಬ್ರಹ್ಮದೇಶದ (ಮೈನ್‌ಮಾರ್) ಮಂಡಾಲೆ ಜೈಲಿಗೆ ಕಳಿಸಿ ಕೊಟ್ಟಿತು. ಈ ದೇಶದಲ್ಲಿದ್ದರೆ ಅವರು ಪುನಃ ಸ್ವಾತಂತ್ರ್ಯದ ಕಿಡಿಯನ್ನು ಇನ್ನಷ್ಟು ಪ್ರಜ್ವಲಿಸುವಂತೆ ಮಾಡಿಯಾರೆಂಬ ಭೀತಿ ಆ ಸರಕಾರಕ್ಕೆ ಇತ್ತು. ಯಾಕೆಂದರೆ ತಿಲಕರು ''ಸ್ವರಾಜ್ಯವೇ ನನ್ನ ಜನ್ಮಸಿದ ಹಕ್ಕು'' ಎಂದು ಘೋಷಿಸಿ ಅದರಂತೆ ನಡೆದುಕೊಂಡಿದ್ದರು. ತಿಲಕರನ್ನು ಮಂಡಾಲೆ ಜೈಲಿಗೆ ಕಳಿಸಲಾಯಿತೆಂಬ ವಾರ್ತೆ ದೇಶಪ್ರೇಮಿ ಭಾರತೀಯರಿಗೆಲ್ಲ ಆಘಾತವನ್ನೇ ತಂದಿತು. ಅದರಲ್ಲೂ ಬೆಳಗಾವಿಯಲ್ಲಿದ್ದಾಗ ಖುದ್ದಾಗಿ ನೋಡಿ ಅವರಿಂದ ಪ್ರಭಾವಿತರಾಗಿದ್ದ ರಂಗನಾಥರಿಗೆ ಈ ವಿಷಯ ಹೊಟ್ಟೆಯಲ್ಲಿ ತಳಮಳವನ್ನೇ ಎಬ್ಬಿಸಿತು. ಒಂದು ದಿನ ಲ್ಯಾಮಿಂಗ್ಟನ್ ಹೈಸ್ಕೂಲಿನ ಹುಡುಗರೆಲ್ಲ ಸೇರಿ ತಿಲಕರಿಗೆ ಜೈಲು ಶಿಕ್ಷೆ ಆಗಿದ್ದಕ್ಕೆ ಪ್ರತಿಭಟಿಸಿ ಶಾಲಾ ತರಗತಿಗಳನ್ನೇ ಬಹಿಷ್ಕರಿಸಿದರು. ಇದರ ಪರಿಣಾಮವೆಂದರೆ ರಂಗನಾಥ ದಿವಾಕರ ಅವರಿಗೆ ಶಾಲಾ ಆಡಳಿತ ನಾಲ್ಕಾಣೆ (ಈಗಿನ ೨೫ ಪೈಸೆ) ದಂಡವನ್ನು ವಿಧಿಸಿತು. ಇದರಂತೆ ರಾಮೂ ಶೆವಡೆ, ವಿಷ್ಣು ಬೆಂಜಿ ಮತ್ತು ಎಂ.ಬಿ. ಕಬ್ಬೂರ ಅವರಿಗೂ ದಂಡ ವಿಧಿಸಲಾಗಿತ್ತು. ೧೯೧೧ ರಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ರಂಗನಾಥರು ಕುಳಿತರು ಮತ್ತು ಅದರಲ್ಲಿ ತೇರ್ಗಡೆಯೂ ಆದರು. ಈ ಪರೀಕ್ಷೆಗಾಗಿ ಅವರು ಬೆಳಗಾವಿಗೆ ತೆರಳಿದರು. ಆಗ ಅವರ ಕೈಗೆ ಸ್ವಾಮಿ ವಿವೇಕಾನಂದರು ತಮ್ಮ ಗುರು ರಾಮಕೃಷ್ಣ ಪರಮಹಂಸರ ಮೇಲೆ ಬರೆದ ಪುಸ್ತಕ ರಂಗನಾಥರ ಕೈಯಲ್ಲಿ ಸಿಕ್ಕಿತು. ಚೋದ್ಯದ ವಿಷಯವೆಂದರೆ ಹಗಲು ಪರೀಕ್ಷೆಗೆ ಕುಳಿತು ಪೇಪರಗಳನ್ನು ಅವರು ಬರೆಯುತ್ತಿದ್ದರು. ರಾತ್ರಿ ವಿವೇಕಾನಂದ ಪುಸ್ತಕವನ್ನು ಪಠ್ಯ ಪುಸ್ತಕಗಳ ಬದಲು ಓದುತ್ತಿದ್ದರು ! ಕೊನೆಗೆ ಪರೀಕ್ಷೆಯಲ್ಲೂ ಪಾಸಾದರೂ ಆ ಪುಸ್ತಕದ ಓದೂ ಮುಗಿದಿತ್ತು! ಆ ವಯಸ್ಸಿನಲ್ಲಿಯೇ ಆಧ್ಯಾತ್ಮ ರಂಗನಾಥರ ಬಾಳಸಂಗಾತಿಯಾಗಿ ಬಿಟ್ಟಿತು. ಕೊನೆಯವರೆಗೂ ಅದು ಅವರ ಮನದಲ್ಲಿ ತನ್ನ ಸಹಸ್ರಾರು ಶಾಖೆ ಉಪಶಾಖೆಗಳನ್ನು ಬಿಟ್ಟು ರಂಗನಾಥರನ್ನು ಕರ್ಮಯೋಗಿಯನ್ನಾಗಿ ಮಾಡಲು ಸಂಪದ್ಭರಿತ ತಳಪಾಯವನ್ನು ಹಾಕಿತು.

ಬೆಳಗಾವಿಯಲ್ಲಿ ಅವರಿಗೆ ಕೃಷ್ಣರಾವ್ ಕಬ್ಬೂರ ಎಂಬ ಅವರದೇ ವಯಸ್ಸಿನ ಮಿತ್ರರೊಬ್ಬರ ಪರಿಚಯವಾಯಿತು. ತುಂಬಾ ಬಡತನದಿಂದ ಪ್ರಾರಂಭಗೊಂಡ ಅವರ

ಜೀವನ ನಂತರ ಖ್ಯಾತ ಉದ್ದಿಮೆದಾರರನ್ನಾಗಿ ಮಾರ್ಪಾಡು ಮಾಡಿತು. ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಕಛೇರಿ ಆವರಣದಲ್ಲಿ ಈಗಲೂ ಕೃಷ್ಣರಾವ್ ಕಬ್ಬೂರ ಸ್ಮಾರಕ ಸಭಾ ಭವನ ಇದೆ ಎಂಬುದು ಇಲ್ಲಿ ಉಲ್ಲೇಖನಾರ್ಹ. ಒಂದು ಹಂತದಲ್ಲಿ ಇಬ್ಬರೂ ಸೇರಿ ಬೆಳಗಾವಿಯಿಂದ ಹತ್ತು ಕಿ.ಮೀ. ದೂರದ ಎಳ್ಳೂರು ಕೋಟೆಗೆ ತೆರಳಿ ಅಲ್ಲಿ ಅದಕ್ಕೆ ಬೆಂಕಿ ಹಚ್ಚಬೇಕೆಂಬ ನಿರ್ಧಾರವನ್ನು ಕೈಕೊಂಡಿದ್ದರು. ಮೆಟ್ರಿಕ್‌ನಲ್ಲಿ ತೇರ್ಗಡೆಯಾದ ನಂತರ ರಂಗನಾಥರು ಕಾಲೇಜ ಶಿಕ್ಷಣಕ್ಕೆ ಪುಣೆಗೆ ತೆರಳಿದರು. ಆಗ ಉತ್ತರ ಕರ್ನಾಟಕದ ಪ್ರಮುಖ ಪಟ್ಟಣಗಳಲ್ಲಿ ಕಾಲೇಜುಗಳೇ ಇರಲಿಲ್ಲ. ಅಲ್ಲಿ ಅವರು ಫರ್ಗ್ಯೂಸನ್ ಕಾಲೇಜಿಗೆ ಸೇರಿಕೊಂಡರು. ಅದೊಂದು ದೇಶಪ್ರೇಮಿ ವಿದ್ಯಾರ್ಥಿಗಳೇ ಹೆಚ್ಚಿದ್ದ ಕಾಲೇಜಾಗಿತ್ತು. ಲೋಕಮಾನ್ಯ ತಿಲಕರ ಪ್ರಭಾವ ವಿದ್ಯಾರ್ಥಿಗಳ ಮೇಲೆ ಬಹಳಿತ್ತು. ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳಿಗಿಂತಲೂ ಹೆಚ್ಚಾಗಿ ಸ್ವಾತಂತ್ರ್ಯ ಚಳುವಳಿಯ ವಿವರಗಳನ್ನು ಪ್ರಕಟಿಸುತ್ತಿದ್ದ ವೃತ್ತ ಪತ್ರಿಕೆಗಳನ್ನೇ ಓದುತ್ತಿದ್ದರು. ಸ್ವಾಭಾವಿಕವಾಗಿಯೇ ರಂಗನಾಥರು ಈ ಪ್ರಭಾವಕ್ಕೆ ಒಳಗಾದರು. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದಲ್ಲಿ ಕಿಡಿಯಾಗಿದ್ದ ಸ್ವಾತಂತ್ರ್ಯದ ಕನಸು ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಜ್ವಾಲೆಯಾಗಿ ಮಾರ್ಪಟ್ಟಿತು.

೧೯೧೪ ಕ್ಕೆ ತಿಲಕರನ್ನು ಮಂಡಾಲೆ ಜೈಲಿನಿಂದ ಬಿಡುಗಡೆ ಮಾಡಲಾಯಿತು. ಆದರೆ ಅವರನ್ನು ಪುಣೆಗೆ ಅವರ ಮನೆಗೆ ಸೇರಿಸುವ ವಿಷಯವನ್ನು ಬ್ರಿಟಿಷ್ ಸರ್ಕಾರ ರಹಸ್ಯವಾಗಿ ಇಟ್ಟಿತ್ತು. ಮಂಡಾಲೆಯಿಂದ ಅವರನ್ನು ಆಗಿನ ಮದ್ರಾಸ (ಚೆನ್ನೈ) ಬಂದರಕ್ಕೆ ರಹಸ್ಯವಾಗಿ ಕರೆತರಲಾಗಿತ್ತು ಹಾಗೂ ವಿಶೇಷ ರೈಲಿನ ಮೂಲಕ ಅಲ್ಲಿಂದ ಪುಣೆಗೆ ಬ್ರಿಟಿಷ್ ಪೋಲೀಸರು ಅವರ ಮನೆಗೆ ಉದ್ದೇಶ ಪೂರ್ವಕವಾಗಿಯೇ ನಡುರಾತ್ರಿಯಲ್ಲಿ ತಂದಿಳಿಸಿದರು. ತಿಲಕರು ಪುಣೆಗೆ ಬಂದ ಸುತಾವ್ಯಾಪಕವಾಗಿ ಪ್ರಚಾರವಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರಬಾರದೆಂಬುದೆ ಪೋಲೀಸರ ಇಚ್ಛೆಯಾಗಿತ್ತು. ಆದರೆ ಮರುದಿನದ ಬೆಳಗು ಇನ್ನೂ ಪೂರ್ತಿಯಾಗಿ ಹರಿದಿರಲಿಲ್ಲ. ಮೊಗ್ಗ ಗತ್ತಲಿನ ಸೂರ್ಯ ಉದಯ ಆಗುವ ಮೊದಲೇ ಸಹಸ್ರ ಸಹಸ್ರ ಸಂಖ್ಯೆಯ ಪುಣೆಯ ಸ್ವಾತಂತ್ರ್ಯ ಪ್ರೇಮಿ ಜನ ಅವರ ಮನೆಗೆ ದಾಂಗುಡಿ ಇಟ್ಟರು. ಅವರಲ್ಲಿ ರಂಗನಾಥ ದಿವಾಕರ ಅವರೂ ಒಬ್ಬರಾಗಿದ್ದಾರೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

೧೯೧೬ ರಲ್ಲಿ ರಂಗನಾಥರು ಇಂಗ್ಲೀಷ್ ಮತ್ತು ಸಂಸ್ಕೃತದಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಪಡೆದರು. ಹಾಗೂ ತಿಲಕರ ವೈಯಕ್ತಿಕ ಸಂಪರ್ಕಕ್ಕೂ ಬಂದರು. ಅಲ್ಲಿಂದ ಧಾರವಾಡಕ್ಕೆ ವಾಪಸ್ಸಾದ ಅವರು ವಿಕ್ಟೋರಿಯಾ ಹೈಸ್ಕೂಲಿನಲ್ಲಿ (ಈಗಿನ ವಿದ್ಯಾರಣ್ಯ ಹೈಸ್ಕೂಲು) ಶಿಕ್ಷಕರಾಗಿ ನಿಯುಕ್ತಗೊಂಡರು. ಆಗಿನ ವಿಕ್ಟೋರಿಯಾ ಹೈಸ್ಕೂಲು ರಾಷ್ಟ್ರಪ್ರೇಮಿಗಳ ಹೈಸ್ಕೂಲು ಎಂದೇ ಪ್ರಸಿದಿಗೊಂಡಿತ್ತು. ಪುಣೆಯ ಫರ್ಗ್ಯೂಸನ್ ಕಾಲೇಜಿನ ಮಾದರಿಯಲ್ಲಿ ಇದು ತಯಾರಾಗುತ್ತಿತ್ತು. ಕನ್ನಡ ಕುಲ ಪುರೋಹಿತರೆಂದೇ

ನಂತರ ಪ್ರಸಿದ್ಧಿ ಪಡೆದ ಆಲೂರು ವೆಂಕಟರಾಯರು ಪುಣೆಯ ಹಾಗೆ ಧಾರವಾಡದಲ್ಲಿಯೂ ಸ್ವಾತಂತ್ರ್ಯ ಯೋಧರ ಪಡೆಯೊಂದನ್ನು ನಿರ್ಮಿಸಿದ್ದರು. ಈ ಪಡೆಗೆ ಸೇರಿದ ಪ್ರಮುಖರೆಂದರೆ ಗುತ್ತಲ ರಂಗಾಚಾರ್ಯರು, ಹುಕ್ಕೇರಿಕರ ರಾಮರಾಯರು ನಂತರ ರಂಗನಾಥ ದಿವಾಕರರು. ಈ ಹಂತದಲ್ಲಿಯೇ ರಂಗನಾಥರು ೧೯೧೬ ರಲ್ಲಿ ಎಂ.ಎ. ಪದವಿಯನ್ನು ಪಡೆದರು. ಮರುವರ್ಷವೇ ಎಲ್‌ಎಲ್‌ಬಿ ಪದವಿಯನ್ನು ಪಡೆದರು.

ಮುಂಬೈಯಿಂದ ಎಂ.ಎ., ಎಲ್.ಎಲ್.ಬಿ. ಪದವಿಗಳನ್ನು ಪಡೆದುಕೊಂಡು ಬಂದ ನಂತರ ಕೊಲ್ಲಾಪುರ ರಾಜಾರಾಮ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಸೇರಿದರು. ಒಂದು ವರ್ಷ ಅಲ್ಲಿ ಕಾರ್ಯ ನಿರ್ವಹಿಸಿದರು. ನಂತರ ಧಾರವಾಡದ ರಾಷ್ಟ್ರೀಯವಾದಿ ಜನರೆಲ್ಲ ಸೇರಿ ಕರ್ನಾಟಕ ಎಜ್ಯುಕೇಶನ್ ಬೋರ್ಡ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದೇ ಹೆಸರಿನಿಂದ ೧೯೨೦ ರಲ್ಲಿ ವಿಕ್ಟೋರಿಯಾ ಹೈಸ್ಕೂಲಿನ ಆವರಣದಲ್ಲಿಯೇ ಕಾಲೇಜೊಂದನ್ನು ಸ್ಥಾಪಿಸಿದರು. ರ್‍ಯಾಂಗ್ಲರ್ ಕಟ್ಟಿಯವರು ಅದರ ಪ್ರಾಚಾರ್ಯರಾಗಿದ್ದರು. ರುಕ್ಮಾಂಗದರರಾವ್ ದೇಶಪಾಂಡೆ, ಬಲವಂತರಾವ ದಾತಾರ ಇವರೂ ಸಹ ಈ ಕಾಲೇಜಿನಲ್ಲಿ ಶಿಕ್ಷಕರಾಗಿದ್ದರು. ರಂಗನಾಥರು ಈ ತಂಡವನ್ನು ಸೇರಿಕೊಳ್ಳಲು ತಡಮಾಡಲಿಲ್ಲ. ಆದರೆ ಸವಿನಯ ಕಾನೂನು ಭಂಗ ಚಳುವಳಿಯಿಂದಾಗಿ ಈ ಕಾಲೇಜು ಹಾಗೂ ವಿಕ್ಟೋರಿಯಾ ಹೈಸ್ಕೂಲು ಸಹ ಮುಚ್ಚಲ್ಪಟ್ಟವು. ಸರಕಾರಿ ಸೇವೆ ಮತ್ತು ವಕೀಲಿ ವೃತ್ತಿಗೆ ಬಹಿಷ್ಕಾರ ಹಾಕಬೇಕೆಂಬ ಕರೆಯ ಹಿನ್ನೆಲೆಯಲ್ಲಿ ತಮ್ಮ ಸೇವೆಗೆ ರಾಜೀನಾಮೆಯನ್ನು ಎಲ್ಲರಂತೆ ರಂಗನಾಥರು ಸಲ್ಲಿಸಿದ್ದರು. ಇದೇ ಹಂತದಲ್ಲಿ ರಾಷ್ಟ್ರೀಯ ಶಾಲೆ ಧಾರವಾಡದಲ್ಲಿ ಸ್ಥಾಪನೆಗೊಂಡಿತು. ಅದರಲ್ಲಿ ಅವರು ಶಿಕ್ಷಕರಾಗಿ ಸೇರಿಕೊಂಡರು.

೧೯೧೬ ರಲ್ಲಿ ರಂಗನಾಥ ದಿವಾಕರರ ವಿವಾಹ ವಿಜಾಪೂರದ ಶಿರಗುಪ್ಪಿ ಕುಟುಂಬದ ರಾಧಾಬಾಯಿಯವರೊಂದಿಗೆ ನೆರವೇರಿತು.

■

## 'ಕರ್ಮವೀರ' ಮತ್ತು 'ಕರ್ಮವೀರರು'

೧೯೨೦ ರಂಗನಾಥ ದಿವಾಕರ ಅವರ ಜೀವನದಲ್ಲಿ ರಾಜಕೀಯ ಪಕ್ವತೆ ತಂದ ವರ್ಷ. ಅದೇ ವರ್ಷದ ಅಗಸ್ಟ ೧ ನೇ ತಾರೀಖು ಅವರ ರಾಜಕೀಯ ಜೀವನದ ಮಾರ್ಗದರ್ಶಕ, ಪ್ರವರ್ತಕ ಲೋಕಮಾನ್ಯ ಬಾಳಗಂಗಾಧರರಾಯರ ತಿಲಕರು ನಿಧನ ಹೊಂದಿದರು. ಹೀಗಾಗಿ ಕೆಲ ಕಾಲ ದಿವಾಕರರಿಗೆ ಶೂನ್ಯತ್ವ ಆವರಿಸಿದ್ದೂ ಉಂಟು. ಆದರೆ ಆಗಲೇ ಅವರು ವಿವಾಹಿತರೂ ಆಗಿದ್ದರು. ಅಧ್ಯಾಪಕ ಹುದ್ದೆಗೆ ರಾಜೀನಾಮೆಯನ್ನೂ ನೀಡಿದ್ದರು. ಅಂಥ ಶ್ರೀಮಂತ ಹಿನ್ನೆಲೆಯೂ ಅವರಿಗಿರಲಿಲ್ಲ. ನಾಳೆಯ ಊಟ ಹೋಗಲಿ ಮಧ್ಯಾಹ್ನ ಉಂಡರೆ ಸಂಜೆಯ ಊಟ ಸಿಕ್ಕೀತೆಂಬ ಭರವಸೆ ಮತ್ತು ಆರ್ಥಿಕ ಭದ್ರತೆಯೂ ಅವರಿಗಿರಲಿಲ್ಲ. ಇಂಥ ಜೀವನ ಕ್ರಮದಲ್ಲಿಯೇ ಅವರು ಆರಿಸಿಕೊಂಡಿದ್ದು ದೇಶದ ಸ್ವಾತಂತ್ರ್ಯ ವಿಷಯದ ಹೋರಾಟದ ಮಾರ್ಗವನ್ನು. ತಿಲಕರು ಅಸ್ತಂಗತರಾದ ಮೇಲೆ ಕೆಲ ಕಾಲದ ಮಾನಸಿಕ ಅಸ್ಥಿರತೆಯ ನಂತರ ದಿವಾಕರರು ಮಹಾತ್ಮಾ ಗಾಂಧೀಜಿಯವರನ್ನು ತಮ್ಮ ರಾಜಕೀಯ ಗುರುವನ್ನಾಗಿ ಸ್ವೀಕರಿಸಿದರು. ಆಧ್ಯಾತ್ಮಿಕ ಗುರುವಾಗಿ ಅರವಿಂದರಂತೂ ಇದ್ದೇ ಇದ್ದರು.

ಇವೆಲ್ಲವೂ ಕ್ರಮೇಣವಾಗಿ ಅವರ ಜೀವನದಲ್ಲಿ ಮಹತ್ವದ ಪಾತ್ರವಹಿಸ ತೊಡಗಿದವು. ಆ ಕಾಲಕ್ಕೆ ಉತ್ತರ ಕರ್ನಾಟಕ ಹೆಚ್ಚೇನು ಸುಶಿಕ್ಷಿತವಾಗಿರಲಿಲ್ಲ. ತಿಲಕರ ಕೇಸರಿ ಹಾಗೂ ಅರವಿಂದರ ವಂದೇ ಮಾತರಂ, ಗಾಂಧೀಜಿಯವರ ನವಜೀವನ ಇವೆಲ್ಲ ಪತ್ರಿಕೆಗಾಗಿ ದೇಶದಲ್ಲಿ ಸ್ವಾತಂತ್ರ್ಯದ ಸೈನಿಕರನ್ನು ಸಜ್ಜುಗೊಳಿಸುವಲ್ಲಿ ನವ ಮನ್ವಂತರವನ್ನೇ ಮಾಡಿದ್ದವು. ಇಂಥದರಲ್ಲಿಯೇ ದಿವಾಕರರಿಗೆ ಪತ್ರಿಕಾ ಮಾಧ್ಯಮದ ಅವಶ್ಯಕತೆ ಉತ್ತರ ಕರ್ನಾಟಕದ ಭಾಗದಲ್ಲಿ ಬಲವಾಗಿರಬೇಕೆಂಬ ಬಯಕೆ ಹೆಚ್ಚಾಗತೊಡಗಿತು. ನಿರ್ಭೀತ ಬರವಣಿಗೆಯಿಂದ ಜನತೆಯನ್ನು ಎಚ್ಚರಿಸಿ ಅವರಲ್ಲಿ ಸ್ವಾತಂತ್ರ್ಯ ಪ್ರೀತಿಯನ್ನು ವರ್ಧಿಸುವ ಅವಶ್ಯಕತೆ ಬೇಕೆಂಬುದು ಅವರ ಹಾಗೂ ಅವರ ಓರಿಗೆಯ ಸ್ವಾತಂತ್ರ್ಯ ಯೋಧರಲ್ಲಿ ಹೆಚ್ಚಾಗತೊಡಗಿತು. ಏಕೆಂದರೆ ಪುಣೆಯಲ್ಲಿ ಕೇಸರಿ ಪತ್ರಿಕೆ ಇಂಥ ಕಾರ್ಯವನ್ನು ಸುಶಿಕ್ಷಿತರಲ್ಲಿ ಕೈಕೊಂಡಿದ್ದನ್ನು ಹಾಗೂ ತನ್ನ ಪ್ರಭಾವ ವಲಯಕ್ಕೆ ಅವರೆಲ್ಲರನ್ನು ಸೆಳೆದಿದ್ದನ್ನು ಕಣ್ಣಾರೆ ಕಂಡಿದ್ದರು ಮತ್ತು ಅನುಭವಿಸಿದ್ದರು. ಹೊಸ ಪತ್ರಿಕೆ ಪ್ರಾರಂಭಿಸುವ ವಿಚಾರ ಅವರಂತೆಯೇ ವಿಚಾರ ಮಾಡುತ್ತಿದ್ದ ಆಲೂರು ವೆಂಕಟರಾಯರು, ಹುಕ್ಕೇರಿಕರ ರಾಮರಾಯರು ಮುಂತಾದವರಲ್ಲಿಯೂ ಇತ್ತು.

ಈ ವಿಚಾರ ಬಲವತ್ತರವಾಗತೊಡಗಿದಂತೆಯೇ ಹೊಸ ವಾರ ಪತ್ರಿಕೆಗೆ 'ಕರ್ಮವೀರ' ಎಂಬ ಹೆಸರು ಸೂಕ್ತವಾದೀತೆಂದು ದಿವಾಕರರಿಗೆ ಅನಿಸಿತು. ಹೀಗಾಗಿ ಅವರು ಆ ಪತ್ರಿಕೆಗೆ ಹೆಸರಿಟ್ಟವರು. ಇದಕ್ಕೆ ಮೂಲ ಕಾರಣವೆಂದರೆ ತಿಲಕರ ಗೀತಾ ರಹಸ್ಯ ಹಾಗೂ ಭಗವದ್ಗೀತೆಯ ಮೇಲೆ ದಿವಾಕರರು ಹೊಂದಿದ್ದ ಅಪಾರ ವಿಶ್ವಾಸ. ೧೯೨೧ ರ ಫೆಬ್ರುವರಿ ೧೫, ರಥಸಪ್ತಮಿ ದಿನದಂದು 'ಕರ್ಮವೀರ' ವಾರಪತ್ರಿಕೆ ಜನ್ಮತಾಳಿತು. ರಥಸಪ್ತಮಿ ದಿನದಂದು ಸೂರ್ಯ ರಥವೇರುತ್ತಾನೆಂಬ ನಂಬಿಕೆ ಇದೆ. ದಿವಾಕರ ಎಂಬ ಹೆಸರೂ ಸಹ ಸೂರ್ಯನದೇ. ಕರ್ಮವೀರ ಎಂದರೆ ಒಂದು ದೃಷ್ಟಿಯಲ್ಲಿ ಅರ್ಜುನನೇ. ಭಗವದ್ಗೀತೆಯ ಕರ್ಮಯೋಗ ಸಿದ್ಧಾಂತವನ್ನು ಶ್ರೀಕೃಷ್ಣ ಪರಮಾತ್ಮ ಮಹಾಭಾರತ ಕುರುಕ್ಷೇತ್ರ ಸಂಗ್ರಾಮದಲ್ಲಿ ಬೋಧಿಸಿದ ನಂತರ ಅರ್ಜುನ ಕರ್ಮ ಮಾಡಲು ಸಿದ್ಧನಾಗುತ್ತಾನೆ ಮತ್ತು ವೀರನಂತೆ ನಡೆಯುತ್ತಾನೆ. ಶಸ್ತ್ರ ಸನ್ಯಾಸ ಮಾಡಿದ್ದ ಅವನ ರೀತಿಯೆಲ್ಲ ಪರಿವರ್ತನೆಗೊಂಡು ನಿಜವಾದ ದೃಷ್ಟಿಯಲ್ಲಿ ಆತ ಕರ್ಮವೀರನೇ ಆಗುತ್ತಾನೆ. ಸ್ವಾತಂತ್ರ್ಯ ಹೋರಾಟವನ್ನು ದಿವಾಕರರು ಕುರುಕ್ಷೇತ್ರದ ಸಂಗ್ರಾಮಕ್ಕೆ ಹೋಲಿಸಿದ್ದಾರೆ.

ಈಗ ೮೯ ವರ್ಷಗಳಷ್ಟು ಹಳೆಯದಾಗಿರುವ ಕರ್ಮವೀರ ವಾರಪತ್ರಿಕೆಯ ಮೂಲ ಪ್ರೇರಣೆ ಇದು. ರಾಷ್ಟ್ರೀಯತೆ ಅದರ ಮೂಲ ಬೇರು. ಹಲವಾರು ಏಳು ಬೀಳುಗಳನ್ನು ಕಂಡಿದ್ದರೂ ಕಾಲಧರ್ಮಕ್ಕೆ ಅನುಸಾರವಾಗಿ ರೂಪಾಂತರ ಹೊಂದುತ್ತ ಬೆಳೆಯುತ್ತ ಬಂದಿದ್ದರೂ ತನ್ನ ಮೂಲಭೂತ ಧ್ಯೇಯ ಆದರ್ಶ, ನಂಬಿಕೆ ಸಿದ್ಧಾಂತಗಳನ್ನು ಬಿಟ್ಟುಕೊಡದೆ ಪ್ರಲೋಭ ಮತ್ತು ಪ್ರಭೋದಗಳಿಂದ ಕನ್ನಡಿಗರಿಗೆ ಉತ್ಕೃಷ್ಟ ಸಾಹಿತ್ಯವನ್ನು ನೀಡುತ್ತ ಅವರ ಹೃದಯ ಗೆದ್ದಿರುವುದು ಕರ್ಮವೀರದ ಸಾಧನೆಯೂ ಹೌದು. ಆ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ರಾಜಹಂಸ, ಕರ್ನಾಟಕ ಪತ್ರ, ಧಾರವಾಡ ವೃತ್ತ ಎಂಬ ಪತ್ರಿಕೆಗಳು ಇದ್ದವು. ಅವು ಬ್ರಿಟಿಷರ ವಿರುದ್ಧ ಬರೆಯುತ್ತಿದ್ದರೂ ಶಿಸ್ತುಬದ್ಧವಾಗಿ ವಿಶ್ಲೇಷಣೆ ಮಾಡಿ ಸ್ವಾತಂತ್ರ್ಯ ಹೋರಾಟದ ಉದ್ದೇಶವನ್ನೇ ಗುರಿಯಾಗಿಟ್ಟುಕೊಂಡು ನಿರ್ಭಯದಿಂದ ಬರೆಯುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಕರ್ಮವೀರ ಮೊದಲ ಸಂಚಿಕೆಯ ಸಂಪಾದಕೀಯವೇ ಈಗಲೂ ಅಮೂಲ್ಯವಾಗಿದೆ.

''ಸ್ವರಾಜ್ಯವು ನಮ್ಮ ದೇಶದ ಉಳಿವಿಗೆ ಅಮೃತದಂತಿದೆ. ಅದು ನಮಗೆ ತೀವ್ರವಾಗಿ ಲಭಿಸಬೇಕಾದರೆ ದೇಶದ ತುಂಬಾ ಹಳ್ಳಿ ಹಳ್ಳಿಗಳಲ್ಲಿ ಮೂಲೆ ಕೊಂಪೆಗಳಲ್ಲಿ ಸ್ವರಾಜ್ಯಕ್ಕಾಗಿ ಪ್ರಯತ್ನಗಳು ನಡೆಯಲಿಕ್ಕೇ ಬೇಕು. ಹಾಗಾಗಬೇಕಾದರೆ ನಾಡಿನ ಪ್ರತಿಯೊಬ್ಬರಿಗೆ ದೇಶದ ಪರಿಸ್ಥಿತಿ ತಿಳಿಯಲೇಬೇಕು. ಈ ಪರಿಸ್ಥಿತಿ ಹೋಗಲಾಡಿಸಲಿಕ್ಕೆ ಏನೇನು ಮಾಡಬೇಕೆಂಬ ಜಾಗೃತಿಯೂ ಅವನಲ್ಲಿ ಆಗಲಿಕ್ಕೇ ಬೇಕು. ಈ ಲೋಕ ಜಾಗೃತಿ ಅಥವಾ ಲೋಕ ಶಿಕ್ಷಣದ ಕೆಲಸವನ್ನು ಈ ಪತ್ರಿಕೆಯ ದ್ವಾರ ಮಾಡಬೇಕೆನ್ನುತ್ತೇವೆ. ಇಡೀ ಹಿಂದುಸ್ಥಾನದ ಸ್ವರಾಜ್ಯವು ನಮ್ಮ ಧ್ಯೇಯ ಇರುವುದು. ಆದರೆ ನಾವು ಕನ್ನಡದಲ್ಲಿ ಬರೆಯುತ್ತಿರುವುದರಿಂದ ಕರ್ನಾಟಕವೇ ಸದ್ಯಕ್ಕೆ ನಮ್ಮ ಕಾರ್ಯಕ್ಷೇತ್ರವಿರುವುದು. ಕರ್ನಾಟಕದ ಮುಖಾಂತರವಾಗಿ ಭರತಭೂಮಿಯ ಸೇವೆಯನ್ನು ಯಥಾಶಕ್ತಿ ಮಾಡಿ ಅದನ್ನು ಕೃಷ್ಣಾರ್ಪಣ ಮಾಡುವುದು ನಮ್ಮ ಕರ್ತವ್ಯವೆಂದು ನಾವು ನಂಬುತ್ತೇವೆ.''

ರಂಗನಾಥ ದಿವಾಕರರವರು ಕರ್ಮವೀರದ ಸ್ಥಾಪಕರೂ ಹೌದು. ಹಾಗೂ ಅದರ ಸಂಪಾದಕರೂ ಆಗಿದ್ದರು. ಈ ಹುದ್ದೆಗಳೆಲ್ಲಾ ಅವರು ಶಾಶ್ವತ ಎಂದು ನಂಬಿರಲಿಲ್ಲ. ಆದರೆ ಕಾರ್ಯ ಸಾಧನೆ ಮಾತ್ರ ಆಗಬೇಕೆಂಬುದು ಅವರ ಗುಂಪಿನ ಉಪ್ಷ ಆಗಿತ್ತು. ಜೈಲಿಗೆ ಹೋಗುವ ಭಯ ಸದಾ ಕಾಲವೂ ಇರುತ್ತಿದ್ದರಿಂದ ಅದಕ್ಕೆ ಆ ಪತ್ರಿಕೆ ಮುದ್ರಣಕ್ಕೆ ಲೇಖನಗಳ ವಿತರಣೆಯ ಮತ್ತಿತರ ಅತ್ಯಗತ್ಯ ಸೌಕರ್ಯಗಳ ಕೊರತೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಸಹ ಈ ತಂಡದಲ್ಲಿತ್ತು. ಒಂದು ನಿಟ್ಟಿನಲ್ಲಿ ಸ್ವಾತಂತ್ರ್ಯ ಯೋಧರು ಅವರ ಸನ್ಮಿತ್ರರೆಲ್ಲ ಕರ್ಮವೀರದ ಸಂಪಾದಕರೂ ಆಗಿದ್ದರು ಹಾಗೂ ಕಾರ್ಯಕರ್ತರೂ ಆಗಿದ್ದರು.

ಬ್ರಿಟಿಷ್ ಆಳ್ವಿಕೆಯನ್ನು ಕಟುವಾಗಿ ಟೀಕಿಸುವಲ್ಲಿ ಧಾರವಾಡದಿಂದ ಆಗ ಪ್ರಕಟವಾಗುತ್ತಿದ್ದ ಕರ್ಮವೀರ ಅಗ್ರಪಾತ್ರ ವಹಿಸತೊಡಗಿತ್ತು. ಈ ಕರ್ಮವೀರನ ಕೂರಂಬುಗಳಿಗೆ ಬ್ರಿಟಿಷ್ ಆಡಳಿತ ಒದ್ದಾಡತೊಡಗಿತು. ಅದರ ಕೆಂಗಣ್ಣು ಸಹ ಪತ್ರಿಕೆಯ ಮೇಲೆ ಕೂಡಲೇ ಬಿದ್ದುಬಿಟ್ಟಿತು. ಮೊದಲ ಸಂಪಾದಕೀಯದಿಂದಲೇ ದಿವಾಕರರು ಬ್ರಿಟಿಷರಿಗೆ ತಮ್ಮ ಸರ್ಪಾಸ್ತ್ರವನ್ನೇ ಬಿಟ್ಟಿದ್ದರು. ಹಂತ ಹಂತವಾಗಿ ಧಾರವಾಡ ಜಿಲ್ಲೆಯಲ್ಲಿ ನೂರಾರು ಚರಕಗಳು ನೂಲನ್ನು ತೆಗೆಯತೊಡಗಿದ್ದವು. ೨೫ ಸಹಸ್ರ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಹೆಸರನ್ನು ನೋಂದಾಯಿಸಿದರು. ಹತ್ತು ವಕೀಲರು ತಮ್ಮ ವೃತ್ತಿಗೆ ತಿಲಾಂಜಲಿ ನೀಡಿದರು. ತಿಲಕರ ಸ್ವರಾಜ್ಯ ನಿಧಿಗೆ ೩೮ ಸಹಸ್ರ ರೂಪಾಯಿ ಸಂಗ್ರಹ ವಾಯಿತು. ಈ ಎಲ್ಲ ಕಾರ್ಯಗಳಲ್ಲಿ ಕರ್ಮವೀರದ ಪಾತ್ರ ಅಗ್ರಗಣ್ಯವಾಗತೊಡಗಿತು. ದಿನವೂ ಜ್ವರ ಏರಿದಂತೆ ಬ್ರಿಟಿಷರ ಕಣ್ಣು ಕೆಂಪಾಗುತ್ತಲೇ ತೊಡಗಿದವು.

ಕರ್ಮವೀರ ಆರಂಭವಾದ ನಾಲ್ಕೇ ತಿಂಗಳಿಗೆ ದಿವಾಕರರ ಸತ್ವ ಪರೀಕ್ಷೆಯ ಕಾಲವೂ ಬಂದೇ ಬಿಟ್ಟಿತು. ದಿನಾಂಕ ೩೦.೦೬.೧೯೨೧ ಮಧ್ಯಾಹ್ನ ೨ ಗಂಟೆಯ ಸಮಯ. ಧಾರವಾಡದ ಅಂದಿನ ಕಲೆಕ್ಟರ್ (ಜಿಲ್ಲಾಧಿಕಾರಿ) ಆಗಿದ್ದ ಪೇಂಟರ್, ಕರ್ಮವೀರದ ದಿವಾಕರರಿಗೂ ಹಾಗೂ ಕಬ್ಬೂರರಿಗೂ ತಮ್ಮ ಕಛೇರಿಗೆ ಬರಲು ಸೂಚಿಸಿದರು. ನಿಗದಿತ ಸಮಯಕ್ಕೆ ಇಬ್ಬರೂ ತೆರಳಿದರು. ಕೆಂಪು ಬಣ್ಣದ ಪೇಂಟರ್ ಮತ್ತಿಷ್ಟು ಮುಖಕ್ಕೆ ರಕ್ತವನ್ನು ತಂದುಕೊಂಡು ಕೆಂಗಣ್ಣನ್ನು ಬಿಟ್ಟು ಇವರಿಬ್ಬರನ್ನು ನೋಡುತ್ತ ''ನಿಮ್ಮ ಪತ್ರಿಕೆಯಲ್ಲಿ ಬಂದ ಕೆಲವು ರಾಜದ್ರೋಹದ ಲೇಖನಗಳನ್ನು ಸರಕಾರದವರು ಗಮನಿಸಿದ್ದಾರೆ. ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವ ಮುಂಚೆ ನಿಮಗೆ ಎಚ್ಚರಿಕೆಯನ್ನು ಕೊಡಲು ತಿಳಿಸಿದ್ದಾರೆ'' ಎಂದ.

ಇದಕ್ಕೆ ಇಬ್ಬರೂ ಸರಿ ಎಂದರು.

ಮುಂದುವರೆದ ಪೇಂಟರ್ ಇಷ್ಟೇ ಅಲ್ಲ ತೀರ ಇತ್ತೀಚೆಗೆ ಕರ್ಮವೀರದಲ್ಲಿ ಮತ್ತೆರಡು ರಾಜದ್ರೋಹದ ಲೇಖನಗಳು ಬರೆಯಲಾಗಿದ್ದು ಇದನ್ನು ಸರಕಾರದ ಗಮನಕ್ಕೆ ತರಲಾಗಿದೆ ಎಂದ.

ಇದನ್ನು ಕೇಳಿಸಿಕೊಂಡ ದಿವಾಕರ ಹಾಗೂ ಕಬ್ಬೂರ ಮೌನವಹಿಸಿದರು. ಈ ಮೌನದಿಂದ ಮತ್ತಿಷ್ಟು ಉಗ್ರನಾದ ಪೇಂಟರ್ ತನ್ನ ಮಾತೃಭಾಷೆಯಲ್ಲೇ ಮಾತನಾಡುತ್ತ ''"Look, I thirst for your blood! and nothing would please me better than seeing you in

jail at least for a year !"

""Oh ! Thank you, Thanks for your frankness" ಎಂದರು ದಿವಾಕರ ಮತ್ತು ಕಬ್ಬೂರರು.

""Yes, I am always frank" ಎಂದು ಹೆಮ್ಮೆಯಿಂದ ಬಿಗಿದ ಮುಖದಲ್ಲಿ ತುಂಟ ಕಿರುನಗೆಯನ್ನು ತರುತ್ತ ಹೇಳಿದ ಕಲೆಕ್ಟರ್ ಪೇಂಟರ್.

ಮುಂದೆ ಎರಡು ದಿನಗಳಲ್ಲಿಯೇ ಧಾರವಾಡದ ಇತಿಹಾಸದಲ್ಲಿ ಮರೆಯಲಾಗದ ಘಟನೆ ಸಂಭವಿಸಿತು.

■

# ಧಾರವಾಡದ ಗೋಳಿಬಾರ

ಮಂಡಾಲೆ ಜೇಲಿನಿಂದ ಲೋಕಮಾನ್ಯ ಬಾಲಗಂಗಾಧರ ತಿಲಕರವರು ೧೯೧೬ ರಲ್ಲಿ ಬಿಡುಗಡೆಯಾಗಿ ಬಂದ ನಂತರ ಅದೇ ವರ್ಷ ಧಾರವಾಡ ಹಾಗೂ ಉತ್ತರ ಕರ್ನಾಟಕದ ಹಲವೆಡೆ ಸಂಚರಿಸಿದರು. ಸ್ವಾತಂತ್ರ್ಯದ ಸುನಾಮಿ ಅಲೆಗಳಂತಿದ್ದ ಅವರ ಭಾಷಣಗಳು, ಮಾತುಗಳು, ಪ್ರವಾಸಗಳು ಸೇರಿದ ಜನತೆಯ ಮೇಲೆ ಪ್ರಚಂಡ ಪರಿಣಾಮವನ್ನುಂಟು ಮಾಡುತ್ತಿದ್ದವು. ಸ್ವರಾಜ್ಯದ ವ್ಯಾಖ್ಯೆಯನ್ನು ಅದರ ಪ್ರಾಪ್ತಿಯ ಬಗೆಯನ್ನು, ಅದರ ಲಾಭವನ್ನು ಜನತೆಗೆ ತಿಳಿ ಹೇಳುವುದರ ಜೊತೆಗೆ ಅವರ ಮನದಲ್ಲಿ ಸ್ವಾತಂತ್ರ್ಯದ ಬೀಜ ಮೊಳೆತು ಬೆಳೆ ಬರುವಂತೆ ತಿಲಕರ ಭಾಷಣಗಳು ಇರುತ್ತಿದ್ದವು.

ಕರ್ನಾಟಕ ಪ್ರಾಂತೀಯ ರಾಜಕೀಯ ಸಮ್ಮೇಳನ ೧೯೨೦ ಮೇದಲ್ಲಿ ಧಾರವಾಡದಲ್ಲಿ ಸೇರಿತು. ಮೈಸೂರ ಸಂಸ್ಥಾನದ ದಿವಾನರಾಗಿ ನಿವೃತ್ತರಾಗಿದ್ದ ವಿ.ಪಿ. ಮಾಧವರಾವರವರು ಅಧ್ಯಕ್ಷತೆ ವಹಿಸಿದ್ದರು. ಇದಾದ ನಂತರ ೧೯೨೦ ರಲ್ಲಿ ಗಾಂಧೀಜಿಯವರು ಧಾರವಾಡ, ಹುಬ್ಬಳ್ಳಿ ಸೇರಿದಂತೆ ತಿಲಕರಂತೆಯೇ ಉತ್ತರ ಕರ್ನಾಟಕದ ಹಲವು ನಗರಗಳಿಗೆ ಭೇಟಿ ನೀಡಿದರು. ಖಿಲಾಫತ್ ಆಂದೋಲನದ ಬೆಂಬಲಾರ್ಥವಾಗಿ ಮೌಲಾನಾ ಶೌಕತ್ ಅಲಿಯವರು ಸಹ ಧಾರವಾಡಕ್ಕೆ ಭೇಟಿ ನೀಡಿದ್ದರು. ಹೀಗಾಗಿ ರಾಜಕೀಯವಾಗಿ ತುಂಬಾ ಜಾಗೃತಗೊಂಡಿದ್ದ ಉತ್ತರ ಕರ್ನಾಟಕದ ಹೃದಯ ಭಾಗವಾದ ಧಾರವಾಡ ಮತ್ತು ಹುಬ್ಬಳ್ಳಿ ನಗರಗಳು ಅಸಹಕಾರ ಆಂದೋಲನಕ್ಕೆ ಸಜ್ಜಾಗಿದ್ದವು. ಇದರ ಜೊತೆಗೆ ಕರ್ಮವೀರ ಪತ್ರಿಕೆಯು ಸಹ ತನ್ನ ಪ್ರಖರ ವಿಷಯ, ವಿಚಾರಗಳಿಂದ ಜನತೆಯನ್ನು ಉದ್ದೀಪನಗೊಳಿಸುತ್ತಲೇ ಇತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಆಗಾಗ್ಗೆ ಅದರ ಧುರೀಣರು ಬಿಂಬಿಸುತ್ತಿದ್ದ ವಿಧಾಯಕ ತತ್ವಗಳು ಜನತೆಯ ಮೇಲೆ ಅಪಾರ ಪರಿಣಾಮವನ್ನು ಬೀರಿದ್ದವು. ಇದರ ಜೊತೆಗೆ ಹಿಂದು ಮತ್ತು ಮುಸ್ಲಿಂ ಎರಡೂ ಸಮಾಜದವರು ಜೊತೆ ಜೊತೆಯಾಗಿ ನಿಷ್ಕಲ್ಮಷ ಪ್ರೇಮದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದರು.

೧೯೨೦ ನೇ ಇಸ್ವಿ. ತಿಲಕ, ಗಾಂಧೀಜಿ ಹಾಗೂ ಮೌಲಾನಾ ಶೌಕತ್ ಅಲಿಯವರ ಭೇಟಿ ಭಾಷಣದಿಂದ ಜನತೆಯಲ್ಲಿ ರಾಜಕೀಯ ಪ್ರಖರತೆಯೂ ಮತ್ತು ದಾಸ್ಯತ್ವವನ್ನು ಪ್ರತಿಭಟಿಸಿ ಸೆಟೆದು ನಿಲ್ಲುವ ಕೆಚ್ಚೆದೆಯ ಮನಸ್ಸನ್ನೂ ನೀಡಿದ್ದವು. ೧೯೨೧ ರ ಪೂರ್ವಾರ್ಧ ಕರ್ಮವೀರ ಮತ್ತು ಕರ್ಮವೀರರಾದ ರಂಗನಾಥ ದಿವಾಕರರವರ ಪ್ರವೇಶದಿಂದ ಮತ್ತಿಷ್ಟು ಪ್ರಖರಗೊಂಡಿತು. ಈ ಹಂತದಲ್ಲಿಯೇ ಕರ್ಮವೀರದ ಲೇಖನಗಳ ವಿರುದ ಧಾರವಾಡದ ಜಿಲ್ಲಾಧಿಕಾರಿ ಪೇಂಟರ್ ೩೦.೦೬.೧೯೨೧ ರಂದು I thirst for your blood ಎಂದು ದಿವಾಕರ್ ಹಾಗೂ ಕಬ್ಬೂರ ಅವರನ್ನು ಕರೆಸಿ ಬೆದರಿಕೆ ಹಾಕಿದ್ದು. ಅದಕ್ಕೆ ಅಷ್ಟೇ ತಣ್ಣಗಾಗಿ ಆದರೆ ಕೆಚ್ಚೆದೆಯಿಂದ ಭೀತಿ ರಹಿತವಾಗಿ ಇಬ್ಬರೂ thank you ಎಂದು ಪ್ರತಿಕ್ರಿಯಿಸಿದ್ದು.

ಇದಾಗಿ ಒಂದೇ ದಿನದ ಅಂತರದಲ್ಲಿ ಅಂದರೆ ಜುಲೈ ೧ ರಂದು ಇಬ್ಬರು ಮುಸ್ಲಿಂ ಸ್ವಯಂಸೇವಕರನ್ನು ಪೊಲೀಸರು ಬಂಧಿಸಿದರು. ಯಾಕೆಂದರೆ ಹಿಂದಿನ ದಿನ ಅವರು ಮದ್ಯದ ಅಂಗಡಿಯ ಎದುರು ಪಿಕೆಟಿಂಗ್ ಮಾಡಿದ್ದಕ್ಕೆ. ಜುಲೈ ೧ ರಂದು ಈ ಬಗ್ಗೆ ವಿಚಾರಣೆ ನಡೆದು ಅವರಿಗೆ ಆರುತಿಂಗಳ ಶಿಕ್ಷೆ ವಿಧಿಸಲಾಗಿತ್ತು. ಈ ಸುತಾ ಕಾಳ್ಗಿಚ್ಚಿನಂತೆ ಧಾರವಾಡದ ತುಂಬೆಲ್ಲ ಹಬ್ಬಿತು. ನೂರಾರು ಜನ ನ್ಯಾಯಾಲಯದ ಅಂಗಳದಲ್ಲಿ ಜಮಾಯಿಸತೊಡಗಿದರು. ಜನಜಂಗುಳಿ ನ್ಯಾಯಾಲಯದಿಂದ ಜೈಲಿನವರೆಗೆ



ಧಾರವಾಡದಲ್ಲಿ ಶಹರ ಪೊಲೀಸ್ ಠಾಣೆ ಬಳಿ ಗೋಳಿಬಾರು ನಡೆದ ಸ್ಥಳ.
ಇಲ್ಲಿ ಈಗ ಸ್ವಾತಂತ್ರ್ಯ ಮತ್ತು ಹುತಾತ್ಮ ಸ್ಮಾರಕ ನಿಲ್ಲಿಸಲಾಗಿದೆ.

ಮೆರವಣಿಗೆಯಲ್ಲಿ ಬಂದಿತಲ್ಲದೆ ಮಧ್ಯಾಹ್ನದವರೆಗೂ ಈ ಪ್ರತಿಭಟನೆ ಜೋರಾಗಿಯೇ ನಡೆಯಿತು. ಆದರೆ ಬ್ರಿಟಿಷ್ ಪೊಲೀಸರು ಪ್ರತಿಭಟನೆಕಾರರನ್ನು ಕಂಡು ಮಾತಾಡಿಸುವದಿರಲಿ ಅವರನ್ನು ಬಂಧಿಸಿ ಹಿಂಸಿಸಬೇಕೆಂಬ ಪೊಲೀಸ್ ತತ್ವಕ್ಕೆ ಶರಣಾಗತರಾದಂತೆ ಇದ್ದರು. ತುಂಬಾ ಸ್ಫೋಟಕ ಪರಿಸ್ಥಿತಿ ನಿರ್ಮಾಣವಾಗಿತ್ತು. ಧಾರವಾಡದ ಸುಭಾಸ ರಸ್ತೆಯ ಅಂಚಿನಲ್ಲಿರುವ ಕೆ.ಸಿ.ಸಿ ಬ್ಯಾಂಕ್ ಗೋಪುರದ ಬಳಿ ಒಂದು ಮೈದಾನವಿತ್ತು. ಅದನ್ನು ಆಗ ಖಿಲಾಫತ್ ಮೈದಾನ ಎಂದು ಕರೆಯಲಾಗುತ್ತಿತ್ತು. ಅಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಂಗನಾಥ ದಿವಾಕರ ಸೇರಿದಂತೆ ಹಲವು ಗಣ್ಯರು ಸ್ವರಾಜ್ಯ ನಿಧಿಯ ಸಲುವಾಗಿ ದೇಣಿಗೆಯನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಚರ್ಚೆ ನಡೆಸುತ್ತಿದ್ದರು. ನ್ಯಾಯಾಲಯದಿಂದ ಮರಳಿ ಪೇಟೆಗೆ ಆಗಮಿಸಿದ ಪ್ರತಿಭಟನೆಕಾರರು, ಮೆರವಣಿಗೆಕಾರರು ಎಲ್ಲರೂ ಸೇರಿ ಮದ್ಯದ ಅಂಗಡಿಗಳ ಮುಂದೆ ಪ್ರತಿಭಟನೆ ನಡೆಸಿದರು. ಅಬ್ದುಲ್ ಖಾದರ್ ಎಂಬ ಸ್ವಯಂಸೇವಕ ತನ್ನ ಜೊತೆಗಾರರ ಸಂಗಡ ಸೇರಿ ಮದ್ಯ ಸೇವಿಸಲು ಅಂಗಡಿ ಒಳಗೆ ಹೋಗುತ್ತಿದ್ದ ಜನರನ್ನು ಕಂಡು ಕೈಮುಗಿಯುತ್ತ ಮದ್ಯ ಸೇವಿಸಬೇಡಿ ಎಂದು ವಿನಂತಿಸುತ್ತಿದ್ದ. ಹೀಗಾಗುತ್ತಿದ್ದಂತೆಯೇ ಇದರಿಂದಾಗಿ ಪ್ರಚೋದನೆಗೊಂಡ ಹಲವಾರು ಕಾರ್ಯಕರ್ತರು ಮದ್ಯ ಸೇವಿಸುವುದು ಬೇಡ ಎಂದು ಗ್ರಾಹಕರನ್ನು ಕೇಳಿಕೊಳ್ಳುತ್ತ ಅವರನ್ನು ಮರಳಿ ಕಳಿಸತೊಡಗಿದರು. ಆ ಹೊತ್ತಿನಲ್ಲಿ ೧೦ ರಿಂದ ೧೨ ಜನ ಸಶಸ್ತ್ರ ಪೊಲೀಸರು ಕರ್ತವ್ಯದ ಮೇಲೆ ಇದ್ದರು. ಸಂಜೆ ೭ ಗಂಟೆಯ ಸುಮಾರು ಶಹಾಬುದ್ದೀನ್ ಎಂಬ ಪೇದೆ ಗೊಂದಲ ಪರಿಸ್ಥಿತಿ ನಿರ್ಮಾಣ ಮಾಡತೊಡಗಿದ. ಆತ ಮದ್ಯ ಸೇವಿಸಿದ್ದನೆಂದೂ ಹೇಳಲಾಗುತ್ತಿತ್ತು. ಇದರಿಂದ ರೊಚ್ಚಿಗೆದ್ದ ಜನಜಂಗುಳಿ ಒಂದು ಮದ್ಯದಂಗಡಿಯ ಮೇಲೆ ಕಲ್ಲೆಸೆಯತೊಡಗಿತು. ಕೆಲವೇ ನಿಮಿಷಗಳಲ್ಲಿ ಮದ್ಯದಂಗಡಿಗೆ ಕಟ್ಟಿದ್ದ ಬಿದರಿನ ತಟ್ಟೆಗೆ ಬೆಂಕಿ ಹತ್ತಿಕೊಂಡಿತು. ಸನಿಹದಲ್ಲಿರುವ ಪೊಲೀಸ್ ಠಾಣೆಗೆ ಈ ಸುತಾತಲುಪಿತು. ಸಶಸ್ತ್ರ ಪೊಲೀಸರ ಅಧಿಕಾರಿಯಾಗಿದ್ದ ಶಿವಲಿಂಗಪ್ಪ ಎಂಬುವ ಸುಮಾರು ೨೦ ರಿಂದ ೨೫ ಪೊಲೀಸರನ್ನು ಕರೆದುಕೊಂಡು ಬಂದು ಯಾವುದೇ ಮುನ್ಸೂಚನೆ ನೀಡದೆ ಗುಂಡು ಹಾರಿಸತೊಡಗಿದರು. ನೆಪ ಮಾತ್ರಕ್ಕೆ ಗಾಳಿಯಲ್ಲಿ ಗುಂಡು ಹಾರಿಸಲಾಯಿತಾದರೂ ಬರಬರುತ್ತ ಜನರ ಮೇಲೆಯೇ ಗುರಿ ಇಟ್ಟು ಪೊಲೀಸರು ಗುಂಡು ಹಾರಿಸತೊಡಗಿದರು. ಆಗ ರಾತ್ರಿ ೮ ಗಂಟೆಯ ಸಮಯ ಆಗುತ್ತಿತ್ತು. ಸಂಪೂರ್ಣವಾಗಿ ಕತ್ತಲು ಆವರಿಸಿತ್ತು. ಸರಿಯಾದ ಸಮಯ ತಿಳಿಯದೇ, ಬೆಳಕು ಇಲ್ಲದೇ ಸರಿಯಾಗಿ ಮಾರ್ಗವೂ ಕಾಣದೆ ಜನಜಂಗುಳಿ ಭೀತಿಯಿಂದ ಕಂಡಕಡೆಗೆ ಓಡತೊಡಗಿತು. ಇಷ್ಟಾಗುತ್ತಿದ್ದಂತೆಯೇ ಇಬ್ಬರು

ಸ್ಥಳದಲ್ಲಿಯೇ ಮೃತಪಟ್ಟರೆ, ಓರ್ವ ಆಸ್ಪತ್ರೆಯಲ್ಲಿ ಮೃತಪಟ್ಟ. ಸುಮಾರು ೫೦ ಜನ ಗುಂಡೇಟುಗಳಿಂದ ಗಾಯಗೊಂಡಿದ್ದರು. ಈ ಸುದ್ದಿ ಸನಿಹದಲ್ಲಿರುವ ಖಿಲಾಫತ್ ಮೈದಾನಕ್ಕೆ ತಲುಪುತ್ತಿದ್ದಂತೆಯೇ ಅಲ್ಲಿ ಸೇರಿದ್ದ ದಿವಾಕರರು ತಮ್ಮ ಇತರ ಧುರೀಣರೊಂದಿಗೆ ಹಾಗೂ ವೈದ್ಯರೊಂದಿಗೆ ಘಟನಾ ಸ್ಥಳಕ್ಕೆ ಧಾವಿಸಿದರು. ಸಾಧ್ಯವಿದ್ದ ಪ್ರಥಮ ಚಿಕಿತ್ಸೆಯನ್ನು ನೀಡಿದರು. ಇದಾಗಿ ಒಂದೆರಡು ಗಂಟೆಗಳಲ್ಲಿ ಆ ಪ್ರದೇಶ ನಿರ್ಜನಗೊಂಡಿತ್ತು ಹಾಗೂ ಅನಪೇಕ್ಷಣೀಯ ಸ್ಮಶಾನಮೌನ ಆವರಿಸಿತ್ತು.

ಇಷ್ಟೆಲ್ಲ ಪೊಲೀಸರ ಪೈಶಾಚಿಕ ಕೃತ್ಯ ನಡೆದಿದ್ದರೂ ಕೂಡ ಇನ್ನೂ ಮುಂದುವರೆದ ಪೈಶಾಚಿಕತೆಯ ಭಾಗವಾಗಿ ಬೇಕಾಬಿಟ್ಟಿಯಾಗಿ ಬಂಧನ ಸತ್ರ ನಡೆಯತೊಡಗಿತು. ಅಂದೇ ೨೮ ಜನರನ್ನು ಬಂಧಿಸಲಾಯಿತು. ಇವರಲ್ಲಿ ಪ್ರಮುಖರೆಂದರೆ ಪತ್ರಕರ್ತರಾಗಿದ್ದ ಅಣ್ಣಾಚಾರ ಹೊಸಕೇರಿ, ವಾಮನರಾವ ಜಠಾರ, ವಕೀಲರಾದ ವೆಂಕಟರಾವ ಮುದವೀಡಕರ, ಗೋವಿಂದಾಚಾರ್ಯ ಗುತ್ತಲ, ಮಹ್ಮದಸಾಹೇಬ ಸೌದಾಗರ ಇತರರು. ಮರುದಿನವೇ ರಂಗನಾಥ ದಿವಾಕರ ಹಾಗೂ ಮಧ್ವರಾವ ಕಬ್ಬೂರವರನ್ನು ಬಂಧಿಸಲಾಯಿತು. ಇನ್ನೊಬ್ಬ ಧುರೀಣ ಹಾಗೂ ಘಟನೆ ನಡೆದಾಗ ಊರಲ್ಲಿಯೇ ಇಲ್ಲದಿದ್ದ ಕೃಷ್ಣರಾವ್ ಮುದವೀಡಕರ ಅವರನ್ನು ಸಹ ಬಂಧಿಸಲಾಯಿತು. ಇವರೆಲ್ಲರ ಮೇಲೆ ೧೯ ಗುರುತರ ಕ್ರಿಮಿನಲ್ ಆರೋಪಗಳನ್ನು ಹೊರಿಸಲಾಗಿತ್ತು. ಇವುಗಳಲ್ಲಿ ವಿಚಿತ್ರ ಎನ್ನುವಂತೆ ಕೊಲೆಯತ್ನ, ಪ್ರಭುತ್ವದ ವಿರುದ ಬಂಡಾಯ, ಹಿಂಸಾಚಾರ, ಲೂಟಿ ಇಂಥ ಆರೋಪಗಳನ್ನು ಹೊರಿಸಲಾಗಿತ್ತು. ಧಾರವಾಡದ ಗೋಳಿಬಾರು ಇಡೀ ದೇಶದ ಸ್ವಾತಂತ್ರ್ಯ ಹೋರಾಟದ ಮೇಲೆ ಉಗ್ರ ಪರಿಣಾಮ ಬೀರಿತ್ತು. ಇದರ ಜೊತೆಗೆ ಬ್ರಿಟಿಷ್ ಪ್ರಭುತ್ವಕ್ಕೂ ಜೀರ್ಣಿಸಿಕೊಳ್ಳಲಾಗದ ಪರಿಸ್ಥಿತಿ ನಿರ್ಮಾಣವಾಯಿತು. ನ್ಯಾಯಾಲಯದಲ್ಲಿ ಅದೇ ವರ್ಷ ಅಕ್ಟೋಬರ್ ೮ ರಂದು ತೀರ್ಪು ನೀಡಲಾಯಿತು. ಮೊದಲ ಐದು ಆರೋಪಿಗಳಿಗೆ ಮೂರು ವರ್ಷ ಶಿಕ್ಷೆ, ಹತ್ತು ಜನರಿಗೆ ಎರಡು ವರ್ಷ, ಎಂಟು ಜನರಿಗೆ ಒಂದುವರೆ ವರ್ಷ ಶಿಕ್ಷೆ ವಿಧಿಸಲಾಯಿತು. ನಾಲ್ವರ ಮೇಲೆ ಸಾಕ್ಷಾಧಾರ ಸರಿಯಾಗಿ ಸಿಗದ್ದರಿಂದ ಅವರನ್ನು ಬಿಡುಗಡೆ ಮಾಡಲಾಯಿತು. ಈ ಪೈಕಿ ದಿವಾಕರ ಅವರೂ ಒಬ್ಬರು. ಅವರು ಸಂಪೂರ್ಣ ನಿರಪರಾಧಿಗಳು ಹಾಗೂ ಘಟನೆಗೆ ಒಟ್ಟಾರೆ ಸಂಬಂಧ ಪಡದೇ ಇದ್ದರೂ ಜುಲೈ ೨ ರಿಂದ ಅಕ್ಟೋಬರ್ ೯ ರ ವರೆಗೆ ಅವರನ್ನು ವಿಚಾರಣಾಧೀನ ಖೈದಿ ಎಂದು ಬಂಧಿಸಲಾಗಿತ್ತು. ಇದಕ್ಕೂ ಮೊದಲು ಮುದವೀಡ ಕೃಷ್ಣರಾಯರನ್ನು ಬಿಡುಗಡೆ ಮಾಡಲಾಗಿತ್ತು. ಏಕೆಂದರೆ ಅವರು ಧಾರವಾಡದಲ್ಲಿರದೆ ಹಳಿಯಾಳದಲ್ಲಿದ್ದರೆಂದು ಪೊಲೀಸ್ ತನಿಖೆಯಿಂದ ಸ್ಪಷ್ಟವಾಗಿತ್ತು. ಕಾಂಗ್ರೆಸ್ ಪಕ್ಷದ ನೀತಿಯಂತೆ ಬಂಧಿತರಾರೂ

ತಮ್ಮ ರಕ್ಷಣೆಗಾಗಿ ವಕೀಲರನ್ನು ನೇಮಿಸಿಕೊಳ್ಳುತ್ತಿರಲಿಲ್ಲ. ಆದರೆ ಅವರು ನ್ಯಾಯಾಧೀಶರ ಎದುರು ತಮ್ಮ ಸಾಕ್ಷ್ಯ ಹೇಳಲು ಅನುಮತಿ ಇತ್ತು. ತಮ್ಮ ಸರತಿ ಬಂದಾಗ ದಿವಾಕರವರು ಬ್ರಿಟಿಷ್ ಆಳ್ವಿಕೆಯನ್ನು ಕಟುವಾಗಿ ಟೀಕಿಸಿದರಲ್ಲದೇ ಕಾಂಗ್ರೆಸ್ಸಿನ ನೀತಿಯನ್ನು ಸಂಪೂರ್ಣವಾಗಿ ಎತ್ತಿ ಹಿಡಿದರು. ಅವರ ಹೇಳಿಕೆ ತರ್ಕಬದ್ಧ ಮತ್ತು ನ್ಯಾಯಯುತವಾಗಿತ್ತು. ತಮ್ಮಂಥ ಸುಶಿಕ್ಷಿತರು ತಮ್ಮ ಮೇಲೆ ಹಾಕಿದ ವಿವಿಧ ಗುರುತರ ಆಪಾದನೆಯನ್ನು ಮಾಡಲು ಸಾಧ್ಯವೇ ಎಂದು ನ್ಯಾಯಾಧೀಶರನ್ನು ಪ್ರಶ್ನಿಸಿದ ದಿವಾಕರ ಅವರು ನನ್ನ ಅತ್ಯಂತ ಕೆಟ್ಟ ಕನಸಲ್ಲೂ ಸಹ ನಾನು ಈ ರೀತಿ ಮಾಡಲಾರೆ. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿರುವ ನಾನು ಯಾವ ವಿಷಯವನ್ನೂ ಮುಚ್ಚಿಡಲಾರೆ ಎಂದರು.

ತಮ್ಮ ಸುದೀರ್ಘ ಹೇಳಿಕೆಯಲ್ಲಿ ಅವರು ಮುಂದುವರೆದು ನಾನು ಮುಂಬೈ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವೀಧರನೂ ಆಗಿದ್ದು ಅದೇ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ. ಪದವಿಯನ್ನೂ ಪಡೆದುಕೊಂಡಿದ್ದೇನೆ. ಸ್ವಾತಂತ್ರ್ಯ ಹೋರಾಟದ ನಿಮಿತ್ತವಾಗಿ ಈ ಪದವಿಗಳ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿಲ್ಲ. ಪ್ರಸಕ್ತ ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕನಾಗಿದ್ದೇನೆ. ಹಾಗೂ ಕರ್ಮವೀರ ಪತ್ರಿಕೆಯ ಸಂಪಾದಕ ಮತ್ತು ಪ್ರಕಾಶಕನೂ ಆಗಿದ್ದೇನೆ. ನಾನು ಸಂಪೂರ್ಣವಾಗಿ ನಂಬಿದ್ದೇನೆಂದರೆ ಹಿಂದುಸ್ಥಾನದ ಸ್ವಾತಂತ್ರ್ಯ ಅಹಿಂಸಾತ್ಮಕ ಮತ್ತು ಅಸಹಕಾರ ಚಳುವಳಿಯ ಹೋರಾಟದ ಮೂಲಕವೇ ನಡೆಯುವುದೆಂದು ಬಲವಾಗಿ ನಂಬಿದ್ದೇನೆ. ಇದರಂತೆ ನನ್ನ ಪತ್ರಿಕೆಯೂ ಕೂಡ. ನನಗೂ ಹಾಗೂ ನನ್ನ ಮೇಲೆ ಹೊರೆಸಲಾದ ಆರೋಪಗಳಿಗೂ ಯಾವುದೇ ಸಂಬಂಧವಿಲ್ಲ. ಮದ್ಯದ ಅಂಗಡಿಗಳ ಎದುರು ನಡೆಯುತ್ತಿದ್ದ ಪ್ರತಿಭಟನೆಯೂ ಸಹ ಸಂಪೂರ್ಣ ಅಹಿಂಸಾತ್ಮಕವಾಗಿತ್ತು. ಆದರೆ ಪೊಲೀಸರೇ ಜನತೆಯನ್ನು ಪ್ರಚೋದಿಸಿ ಗೋಳಿಬಾರ ಮಾಡಿದರು. ಇದರಿಂದಾಗಿ ಗೋಳಿಬಾರಿನ ಹಿಂದಿನ ದಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಆಗಿರುವ ಜಿಲ್ಲಾಧಿಕಾರಿ ನನ್ನನ್ನು ಮತ್ತು ಕಬ್ಬೂರ ಅವರನ್ನು ಕರೆಸಿ ಹಾಕಿದ್ದ ಬೆದರಿಕೆ ನೆನಪಿಗೆ ಬರುತ್ತಿದ್ದು ಆ ಹಿನ್ನೆಲೆಯಲ್ಲಿಯೇ ಗೋಳಿಬಾರು ಹಾಗೂ ನನ್ನ ಬಂಧನ ನಡೆದಿದೆ ಎಂದು ದಿವಾಕರ ಹೇಳಿದರು. ಖಿಲಾಫತ್ ಚಳುವಳಿಯನ್ನು ಮುರಿಯಬೇಕೆಂಬ ದುರುದ್ದೇಶದಿಂದಲೇ ಪೊಲೀಸರು ಈ ಚಳುವಳಿಯ ಸ್ವಯಂಸೇವಕರನ್ನು ಬಂಧಿಸಿದ್ದಾರೆ ಹಾಗೂ ಇದಕ್ಕೆ ಅನುಗುಣವಾಗಿಯೇ ಗೋಳಿಬಾರು ನಡೆದಿದೆ. ಗಾಯಾಳುಗಳಿಗೆ ವೈದ್ಯರ ಸಹಾಯವನ್ನೂ ಸಹ ನೀಡದಷ್ಟು ನಿಷ್ಕರುಣೆಯನ್ನು ಪೊಲೀಸರು ತೋರಿದ್ದಾರೆ. ಇನ್ನು ಈ ಗೋಳಿಬಾರಿನ ವಿಚಾರಣೆಯೂ ಸಹ ಮೊದಲೇ ತಪ್ಪಿತಸ್ಥರಿದ್ದ ಪೋಲೀಸ್ ಅಧಿಕಾರಿಗಳಿಂದ ಮಾಡಿಸಲಾಗುತ್ತಿದೆ. ಆದರೆ ಇದರ ಫಲಿತಾಂಶ ಬ್ರಿಟಿಷ್ ಸರಕಾರಕ್ಕೆ

ಬೇಕಾದ ಹಾಗೆಯೇ ಆಗಬಲ್ಲದೆಂಬುದು ನಿಸ್ಸಂದೇಹ. ಹೀಗಾಗಿ ನಾನು ಇದರಲ್ಲಿ ವಿಶ್ವಾಸ ಕಳೆದುಕೊಂಡಿದ್ದರಿಂದಲೇ ನನ್ನ ಪರವಾಗಿ ವಕಾಲತ್ತನ್ನು ಮಾಡುತ್ತಿಲ್ಲ. ನನ್ನ ನಿರಪರಾಧಿತ್ವವನ್ನು ಸಾರುವ ಒಂದೇ ಒಂದು ಅಂಶವೆಂದರೆ ನಾನು ಜುಲೈ ೧ ರ ಸಂಜೆ ೫ ರಿಂದ ರಾತ್ರಿ ೮ ರ ವರೆಗೆ ಖಿಲಾಫತ್ ಮೈದಾನದಲ್ಲಿಯೇ ಇದ್ದೆ. ಪ್ರತಿಭಟನೆಯಲ್ಲಿ ಪಾಲ್ಗೊಂಡಿರಲಿಲ್ಲ. ಆದರೂ ಕೂಡ ನನಗೆ ತೀರ್ಪಿನ ಬಗ್ಗೆ ಅಷ್ಟೊಂದು ಕುತೂಹಲವಿಲ್ಲ. ನನಗೆ ಶಿಕ್ಷೆ ಆಗಬಹುದು, ಆಗಲಿಕ್ಕಿಲ್ಲ. ಆದರೆ ನನ್ನ ದೇಶದ ಸ್ವಾತಂತ್ರ್ಯ ಹೋರಾಟದ ಸಲುವಾಗಿ ನನಗೆ ಶಿಕ್ಷೆ ಆದರೆ ಆಗುವ ಸಂತೋಷ ಅಪಾರ ಎಂದು ಹೇಳಿ ದಿವಾಕರ ತಮ್ಮ ಮಾತು ಮುಗಿಸಿದರು.

ಅವರ ಈ ಪ್ರಬುದ ಹೇಳಿಕೆ ನ್ಯಾಯಾಧೀಶರು ಪೊಲೀಸರು ಹಾಗೂ ನೆರೆದ ಸಾರ್ವಜನಿಕರಲ್ಲಿ ದಿಗ್ಭ್ರಮೆ ಮೂಡಿಸಿತ್ತು. ಅಂದು ಹಾಗೂ ಮುಂದಿನ ಹಲವಾರು ದಿನಗಳ ವರೆಗೆ ಇಡೀ ಧಾರವಾಡ ತುಂಬ ಸರಕಾರಿ ಹಾಗೂ ಸರಕಾರೇತರ ವಲಯಗಳಲ್ಲಿ ತೀವ್ರ ಚರ್ಚೆಗೆ ಕಾರಣವಾಗಿತ್ತು.

■

## ''ಭೂ ರಕ್ಕಸಾಯ ಸ್ವಾಹಾಃ''

ಧಾರವಾಡ ಗೋಳಿಬಾರನ ತೀರ್ಪು ೧೯೨೧ ಅಕ್ಟೋಬರ್ ೮ ರಂದು ಹೊರಬಿದ್ದು ದಿವಾಕರರು ಬಿಡುಗಡೆಯಾದರೂ ಸಹ ಈ ಬಿಡುಗಡೆಯ ಸಮಾಧಾನ ಅವರಿಗೆ ಅಲ್ಪ ಕಾಲದ್ದೇ ಇತ್ತು. ಹಾಗೂ ಅವರಿಗೆ ಪುನಃ ತಾವು ಬಂಧಿತರಾಗಬಹುದಾದ ಶಂಕೆಯೂ ಇದ್ದೇ ಇತ್ತು. ಆದಕ್ಕವರು ಸಿಧ್ಧಿಯಾರಾಗಿಯೂ ಇದ್ದರು. ಆ ಕಾಲಕ್ಕೆ ಧಾರವಾಡದಲ್ಲಿ ಶಿವಲಿಂಗಪ್ಪ ಎಂಬ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಫೌಜುದಾರ) ಇದ್ದ. ಸ್ವಾತಂತ್ರ್ಯ ಯೋಧರನ್ನು ಬಂಧಿಸುವುದು ಅವರನ್ನು ಪೀಡಿಸುವುದು ಇವೆಲ್ಲವೂ ಆತನಿಗೆ ಮಂಗನಾಟವಾಗಿತ್ತು. ಏನಾದರೂ ಮಾಡಿ ಬ್ರಿಟಿಷ್ ಅಧಿಕಾರಿಗಳನ್ನು ಮೆಚ್ಚಿಸುವ ಸಲುವಾಗಿ ಆತ ಇದೇ ಕಾರ್ಯವನ್ನು ನಿಶ್ಚಿಂತೆಯಿಂದ ಮಾಡುತ್ತಿದ್ದ. ಇದಲ್ಲದೆ ಧಾರವಾಡದ ಗೋಳಿಬಾರಿಗೆ ಈತನೇ ಪ್ರಮುಖವಾಗಿ ಕಾರಣೀಭೂತನಾಗಿದ್ದನೆಂದೂ ಆರೋಪಿಸಲಾಗಿತ್ತು. ಈತನ ಕೆಲಸಕ್ಕೆ ಮೆಚ್ಚಿದ ಬ್ರಿಟಿಷ್ ಸರಕಾರ ಆತನಿಗೆ ಕಿಂಗ್ಸ್ ಮೆಡಲ್ ಸಹ ನೀಡಿತ್ತು.

ದಿವಾಕರರು ಸೆರೆಮನೆಗೆ ಹೋದನಂತರ ಕರ್ನಾಟಕ ಕುಲ ಪುರೋಹಿತರೆಂದೇ ಹೆಸರಾಗಿದ್ದ ಆಲೂರು ವೆಂಕಟರಾಯರು ಕರ್ಮವೀರ ಪತ್ರಿಕೆಯ ನಿರ್ವಹಣೆ ಮಾಡುತ್ತಿದ್ದರು. ಅಕ್ಟೋಬರ್ ೧೪, ೧೯೨೧ ರಂದು ಕರ್ಮವೀರ ಪತ್ರಿಕೆಯಲ್ಲಿ ''ಭೂ ರಕ್ಕಸಾಯ ಸ್ವಾಹಾಃ'' ಎಂಬ ಲೇಖನ ಪ್ರಕಟವಾಯಿತು. ವಾಸ್ತವಿಕವಾಗಿ ಇದನ್ನು ಬರೆದವರು ಆಲೂರು ವೆಂಕಟರಾಯರು. ಇದರಲ್ಲಿ ಭೂ + ರಕ್ಕಸರು ಎಂದರೆ ಬ್ಯೂರಾಕ್ರಸಿ (ನೌಕರಶಾಹಿ). ಇವರಿಗೆ ಸ್ವಾಹಾ ಎಂದರೆ ಆಹುತಿ ಎಂದರ್ಥ. ಇಡೀ ಹೆಡ್ಡಿಂಗ್‌ನ ಅರ್ಥವೇನೆಂದರೆ ನೌಕರಶಾಹಿಗಳಿಗೆ ಆಹುತಿ ಎಂದರ್ಥ.

ಈ ಭೂರಕ್ಕಸರು ಧಾರವಾಡದಲ್ಲಿ ಮಾಡಿದ ನರಮೇಧಕ್ಕೆ (ಗೋಳಿಬಾರ) ಯಮಾಯ ಸ್ವಾಹಾಃ, ಯಮದೂತಾಯ ಸ್ವಾಹಾಃ, ಮತ್ತುದ್ವೇಷಾಯ ಸ್ವಾಹಾಃ ಎಂದೂ ಕರ್ನಾಟಕದ ಮೂರು ನರಬಲಿಗಳನ್ನು ಕೊಟ್ಟವರು ಎಂದು ಈ ಲೇಖನದ ಪ್ರಾರಂಭವಾಗಿತ್ತು. ಇದರಿಂದ ಬ್ರಿಟಿಷ್ ಸರಕಾರ ತುಂಬಾ ಕೆರಳಿ ಹೋಯಿತು. ಈ ಲೇಖನದ ಲೇಖಕರು ದಿವಾಕರ್ ಹಾಗೂ ಮುದ್ರಕರು ಪ್ರಕಾಶಕರು ಎಂದು ಹುಕ್ಕೇರಿಕರ ರಾಮರಾಯರ ಮೇಲೆ ಖಟ್ಲೆಗಳನ್ನು ಹಾಕಲಾಯಿತು. ಈ ಬಗ್ಗೆ ಖಟ್ಲೆ ನಡೆಯಿತಾದರೂ

ದಿವಾಕರ್ ಅವರೇ ಈ ಲೇಖನ ಬರೆದರು ಎಂಬ ಪುರಾವೆ ಇಲ್ಲದ್ದಕ್ಕಾಗಿ ಆರೋಪವನ್ನು ಸರಕಾರ ಹಿಂತೆಗೆದುಕೊಳ್ಳಬೇಕಾಯಿತು. ಸುಮಾರು ೧೫ ದಿನಗಳ ಕಾಲ ಈ ಬಗ್ಗೆ ಖಟ್ಲೆ ನಡೆಯಿತು. ೧೨೪ ಅ ಕಲಮಿನ ಪ್ರಕಾರ ರಾಜದ್ರೋಹಾತ್ಮಕ ಲೇಖನದ ಖಟ್ಲೆಯನ್ನು ಸರಕಾರ ಹಾಕಿತ್ತು. ಈ ಬಗ್ಗೆ ದಿವಾಕರ ಅವರು ನೀಡಿದ ಹೇಳಿಕೆಯ ಮುಖ್ಯಾಂಶ ಕೆಳಗಿನಂತಿದೆ.

''ಹಿಂದಕ್ಕೆ ನನಗೆ ಸರಕಾರದವರು ಕೆಲವು ಲೇಖನಗಳ ಬಗ್ಗೆ ಎಚ್ಚರಿಕೆಯನ್ನು ಕೊಟ್ಟಿದ್ದರೇನು ಸರಿ, ಆದರೆ ನನ್ನ ಧೋರಣೆಯಲ್ಲಿ ನನಗೆ ಏನೂ ತಪ್ಪು ಕಾಣದ್ದರಿಂದ ನಾನು ಅದನ್ನು ಬಿಡಲಿಲ್ಲ. ನನಗೆ ದೇವರ ನ್ಯಾಯದ ಬಗ್ಗೆ ವಿಶ್ವಾಸವಿದೆ. ಕರ್ಮವೀರದಲ್ಲಿ ಬರೆದ ಲೇಖನಗಳು ರಾಜದ್ರೋಹವಾದರೆ ಇಡೀ ಹಿಂದುಸ್ಥಾನವೇ ರಾಜದ್ರೋಹ ಮಾಡುತ್ತದೆ ಎನ್ನಬೇಕಾಯಿತು. ಹಾಗಾದ ಪಕ್ಷಕ್ಕೆ ಎಲ್ಲರೂ ದುಃಖವನ್ನು ಅನುಭವಿಸಲಿಕ್ಕೆ ಸಿದರಾಗಬೇಕು. ಸರಕಾರದ ಕಡೆಗೆ ಭೌತಿಕ ಬಲವಿದೆ. ನಮ್ಮ ಕಡೆಗೆ ನೈತಿಕ ಬಲವಿದೆ. ದುಃಖಾನುಭವದ ಮಹಿಮೆಯು ವಿಲಕ್ಷಣವಾಗಿದೆ. ಕೊಲ್ಲಬಂದ ಖಡ್ಗವನ್ನು ಮುರಿದಿಡುವ ಸಾಮರ್ಥ್ಯವು ಈ ದುಃಖಾನುಭವದಲ್ಲಿದೆ. ದುಃಖದೊಳಗಿಂದಲೇ ಅಮೃತವನ್ನು ಹೀರಿಕೊಳ್ಳುವ ಸಾಮರ್ಥ್ಯವು ಅದರಿಂದ ಬರುತ್ತದೆ. ದೇವರು ನನಗೆ ಅಂಥ ಸಾಮರ್ಥ್ಯವನ್ನು ಕೊಡಲಿ''.

ತೀರ್ಪು ಇನ್ನೂ ಆಗಿರಲಿಲ್ಲ. ಪುನಃ ಮೆಜಿಸ್ಟ್ರೇಟರು ತೀರ್ಪಿನ ತಾರೀಖಿನವರೆಗೆ ಸ್ವಂತ ಜಾಮೀನಿನ ಮೇಲೆ ಹೊರಗೆ ಹೋಗಬಹುದು ಎಂದು ಹೇಳಿದರು ಆದರೆ ಅಂಥ ಅವಧಿ ಒಂದೇ ದಿನವಿದ್ದಿತು ! ಆದರೂ ಆಗಲಿ ಒಂದು ದಿನವಾದರೂ ನಮ್ಮೊಡನೆ ಇರಬೇಕು ಎಂದು ಸ್ನೇಹಿತರು ಅಂದಿದ್ದರಿಂದ ಸ್ವಂತ ಜಾಮೀನಿನ ಮೇಲೆ ದಿವಾಕರರು ಒಂದೊಪ್ಪತ್ತಿನವರೆಗೆ ಹೊರಗೆ ಬಂದರು. ಅಂದೇ ರಾತ್ರಿ ೮ ಗಂಟೆಗೆ ಹುಬ್ಬಳ್ಳಿಯಲ್ಲಿ ಸಿದ್ಧಾರೂಢರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆ ಇತ್ತು. ಸುಮಾರು ೧೫ ನಿಮಿಷಗಳ ಕಾಲ ಅವರು ಅಲ್ಲಿ ಭಾಷಣ ಮಾಡಿದರು. ಸುಮಾರು ೮ ಸಾವಿರ ಜನ ಅಲ್ಲಿ ನೆರೆದಿದ್ದರು. ಅವರ ಭಾಷಣವನ್ನು ಮಂತ್ರಮುಗ್ಧರಾಗಿ ಜನ ಕೇಳಿದರು. ನಂತರ ದಿವಾಕರರು ಅವರ ತಂದೆಯವರ ಆಶೀರ್ವಾದ ಪಡೆಯುವಾಗ ಅವರು ಒಂದೇ ಮಾತು ಹೇಳಿದರು. ''ಧೈರ್ಯವಿದ್ದರೆ ಇದರಲ್ಲಿ ಮುಂದಾಗು ಹಿಂದೆಗೆಯಬೇಡ''. ಇಂಥ ಧೈರ್ಯಕೊಡುವ ತಂದೆಗಳು ಬಹಳ ಅಪರೂಪ. ಮುಂದಿನ ದಿನವೇ ದಿವಾಕರರಿಗೆ ಒಂದು ವರ್ಷದ ಸಾದಾ ಶಿಕ್ಷೆಯಾಯಿತು.

ಶಿಕ್ಷೆಯಾದ ನಂತರ ಅವರು ಕರ್ಮವೀರದಲ್ಲಿ ಒಂದು ಚಿಕ್ಕ ಲೇಖನವನ್ನು ಬರೆದರು. ಅದರ ಸಂಕ್ಷಿಪ್ತರೂಪವು ಕೆಳಗಿನಂತಿದೆ.

''ನನ್ನನ್ನು ಎರಡು ಬಾರಿ ಬಂಧಿಸಬೇಕೆಂದರೂ ನಾನೂ ಯಾವ ಪ್ರಯತ್ನವನ್ನೂ ಮಾಡದಿದ್ದರೂ ಜಿಲ್ಲಾಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ಅವರ ಮನಸ್ಸಿನಲ್ಲಿದ್ದರೂ ಈಶ್ವರಿ ಸಂಕೇತದ ವಿರುದ ಅವರು ಪ್ರಯತ್ನ ಮಾಡಬೇಕೆಂದರು. ಆದರೆ ಇದು ಸಾಧ್ಯವಾಗಲಿಲ್ಲ. ನಮ್ಮಂತಹ ಸ್ವಾತಂತ್ರ್ಯ ಪ್ರಿಯರ ದೇಹದಲ್ಲಿ ಸಂಸ್ಕೃತಿಯ ತೇಜವು ಮಿಂಚುತ್ತಿದೆ. ಇನ್ನುಳಿದ ದೇಹಗಳನ್ನು ಬಂಧಿಸಿ, ತುಂಡರಿಸಿ ನಮ್ಮನ್ನು ಈ ಚಳುವಳಿಯ ಮಾರ್ಗಪಥದಿಂದ ಹಿಂತೆಗೆದುಕೊಳ್ಳಲು ಯತ್ನಿಸುವುದು ಮೂರ್ಖತನವೇ. ನನ್ನ ದೇಹ, ಧ್ಯೇಯವನ್ನು ಹಾಗೂ ಸ್ವಾತಂತ್ರ್ಯ ಪಡೆಯಲೇಬೇಕೆಂಬ ವಿಶ್ವಾಸವನ್ನು ಧಿಕ್ಕರಿಸುವ ಇಂಥ ಸಾಹಸವು ಸರಿಯಲ್ಲ. ನನ್ನ ಧ್ಯೇಯವನ್ನು ಸಾಧಿಸಬೇಕೆಂಬ ಉತ್ಕಟ ಇಚ್ಛೆಯನ್ನು ಹೊಂದಿರುವ ನನ್ನಲ್ಲಿರುವ ದಿವ್ಯಾತ್ಮವು ನಾನಾ ತರದಿಂದ ಯತ್ನಗಳನ್ನು ಮಾಡಿ ಸ್ವಾತಂತ್ರ್ಯವನ್ನು ದೊರಕಿಸಿಯೇ ತೀರುವುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಇದು ನಮ್ಮ ಆಳರಸರಿಗೆ ತಿಳಿಯಲಿ. ಅಥವಾ ತಿಳಿಯದಿರಲಿ 'ಬ್ರಹ್ಮಸತ್ಯಂ ಜಗನ್ಮಿಥ್ಯಾ' ಎಂಬ ತತ್ವವು ಉಸಿರಿನಂತಿರುವ ಭಾರತೀಯರಿಗೆ ಇದು ಸ್ಪಷ್ಟವಾಗಿರಲಿ. ಇದೇ ವಿಶ್ವಾಸದಿಂದ ನಾವು ಸಾಗುವಾ''.

ಹುಕ್ಕೇರಿಕರ ರಾಮರಾಯರ ಮೇಲೆಯೂ ೧೨೪ ಅ ಕಲಂನ ಪ್ರಕಾರ ಭೂರಕ್ಕಸಾಯ ಸ್ವಾಹಾಃ ಲೇಖನದ ಅಚ್ಚುಗಾರರು ಎಂಬ ಖಟ್ಲೆಯಾಗಿತ್ತು. ಅವರಿಗೂ ಸಹ ದಿವಾಕರರಿಗೆ ಆದಷ್ಟೇ ಶಿಕ್ಷೆಯಾಗಿತ್ತು. ಒಂದೆರಡು ದಿನಗಳಲ್ಲಿ ಅವರನ್ನು ಪುಣೆಯ ಯರವಡಾ ಜೇಲಿಗೆ ಸಾಗಿಸಲಾಯಿತು.

ಧಾರವಾಡದ ಜೇಲಿನಲ್ಲಿ ಇದ್ದಂತಹ ಯಾವುದೇ ವಾತಾವರಣವು ಪುಣೆಯ ಯರವಡಾ ಜೇಲಿನಲ್ಲಿ ಇದ್ದಿರಲಿಲ್ಲ. ಅಲ್ಲಿ ಸೌಜನ್ಯತೆಯ ಬದಲು ಕಠೋರತೆ ಬಿಗುವೇ ತುಂಬಿತ್ತು. ಯರವಡಾ ಜೇಲು ತುಂಬಾ ಹಳೆಯದು. ಬಹಳ ದೊಡ್ಡದು. ಲೋಕಮಾನ್ಯ ತಿಲಕರು ಸಹ ಇಲ್ಲಿ ಕೆಲವು ದಿನ ಇದ್ದರು. ಕಾಲ ಕಾಲಕ್ಕೆ ಯರವಡಾ ಜೇಲು ಸಹ ಪರಿವರ್ತನೆಗೊಂಡಿತು. ೧೮೯೮ ರಲ್ಲಿ ಇದ್ದಂತಹ ಜೇಲಿಗೂ ೧೯೨೨ ಕ್ಕೂ ಹಾಗೂ ೧೯೩೨ ಕ್ಕೂ ಸಾಕಷ್ಟು ಬದಲಾವಣೆಯಾಗಿತ್ತು.

ಯರವಡಾ ಜೇಲಿನಲ್ಲಿ ದಿವಾಕರರು ಸುಮಾರು ೧೧ ತಿಂಗಳವರೆಗೆ ಇದ್ದರು. ೧೯೨೨ ರ ಜನೆವರಿ ತಿಂಗಳ ಕೊನೆಯಿಂದ ೧೯೨೩ ರ ಜನೆವರಿ ಪ್ರಾರಂಭದವರೆಗೆ ಅವರು ಇದ್ದರು. ಅವರಿಗೆ ಸಾದಾ ಶಿಕ್ಷೆಯಾಗಿದ್ದರೂ ಅವರು ಚರಕಾದಿಂದ ನೂಲು ತೆಗೆಯುವ ಕಾಯಕವನ್ನು ಕೈಕೊಂಡಿದ್ದರಿಂದ ಅವರಿಗೆ ೨೧ ದಿನಗಳ ಮಾಫಿ ದೊರೆಯಿತು.

■

# ಸ್ವರಾಜ್ಯ ''ಆಶ್ರಮ''ದಲ್ಲಿ.....!

ಯರವಡಾ ಜೇಲಿನಲ್ಲಿ ದಿವಾಕರ ಅವರು ಒಂದು ವರ್ಷದವರೆಗೆ ಇದ್ದರು. ಅದಕ್ಕೆ ಅವರು ಸ್ವರಾಜ್ಯ ಆಶ್ರಮ ಎಂದು ನಾಮಕರಣ ಮಾಡಿದ್ದು ಕುತೂಹಲಕಾರಿ. ನ್ಯಾಯವಾಗಿ ಆ ಹೆಸರೇ ಸೂಕ್ತವಾಗಿದೆ. ಮಹಾರಾಷ್ಟ್ರದ ಪುಣೆಯ ಹೊರವಲಯದಲ್ಲಿರುವ ಯರವಡಾ ಜೇಲು ಇತಿಹಾಸ ಪ್ರಸಿದವಾಗಿದೆ. ಇದಕ್ಕೆ ಸ್ವರಾಜ್ಯ ಆಶ್ರಮ ಎಂಬ ಹೆಸರು ಅನ್ವರ್ಥಕ. ಅಷ್ಟೇ ಅಲ್ಲ ಸ್ವಾತಂತ್ರ್ಯ ವೀರರ ಪಡೆಯ ಆತ್ಮಸ್ಥೈರ್ಯವನ್ನು ಹೆಚ್ಚಿಸಿದ ಕರ್ಮಭೂಮಿಯೂ ಅದಾಗಿತ್ತೆಂದರೆ ತಪ್ಪಾಗಲಾರದು. ದಶಕಗಳು ಸರಿದಂತೆ ಯರವಡಾ ಜೇಲಿನ ಬಿಗುವು ಒಂದು ರೀತಿಯಲ್ಲಿ ಕಡಿಮೆಯಾಗುತ್ತಲೇ ಬಂದಿತು.

ದಿವಾಕರ ಅವರು ಆಗಿನ ಜೇಲಿನ ದಿನಗಳನ್ನು ೧೯೪೦ ರಲ್ಲಿ ಪ್ರಕಟವಾದ ಸೆರೆಯ ಮರೆಯಲ್ಲಿ ಎಂಬ ಪುಸ್ತಕದಲ್ಲಿ ತುಂಬಾ ರೋಚಕವಾಗಿ ಬಣ್ಣಿಸಿದ್ದಾರೆ. ಅವರು ಅನುಭವಿಸಿದ ಯಾತನೆಗಳನ್ನು ಅವರೇನೋ ಸ್ವಾತಂತ್ರ್ಯ ಸಿಕ್ಕುವ ಹುಮ್ಮಸ್ಸಿನಿಂದ ಸಹಿಸಿದರೇನೂ ನಿಜ. ಆದರೆ ಅವರ ಪರಿಸ್ಥಿತಿ ನೋಡಿ ಓದಿದವರ ಕಣ್ಣುಗಳು ತೇವಾಗುವುದರಲ್ಲಿ ಸಂದೇಹವೇ ಇಲ್ಲ.

ಜೇಲಿನ ಒಳಗಡೆ ಅಥವಾ 'ಚೆಕ್ ಇನ್' ಆದ ನಂತರ ಆತನಿಗೆ ಒಂದು ನಂಬರನ್ನು ಕೊಡಲಾಗುತ್ತಿತ್ತಂತೆ. ಮುಂದೆ ಅಲ್ಲಿ ಅವನು ಜೇಲಿನಲ್ಲಿ ಇರುವವರೆಗೆ ಅದೇ ನಂಬರಿನಿಂದ ಅವನು ಸಂಭೋದಿಸಲ್ಪಡುವನು. ಇದಲ್ಲದೇ ಅವನ ಬಗ್ಗೆ ವಿವರಗಳಿರುವ ಒಂದು ನೋಟ್ ಬುಕ್‌ನ್ನೇ ಮಾಡಿ ಅದರಲ್ಲಿ ಶಿಕ್ಷೆಯ ವಿವರ, ಶಾರೀರಿಕ ಚಿಹ್ನೆಗಳು ಮತ್ತಿತರ ಅವಶ್ಯಕ ವಿವರಗಳನ್ನು ಬರೆದಿಡಲಾಗಿರುತ್ತದೆ. ಧಾರವಾಡ ಜೇಲಿನಲ್ಲಿದ್ದ ಸೌಜನ್ಯ ಯರವಡಾದಲ್ಲಿ ಇರಲಿಲ್ಲ. ಕಠೋರತೆ, ಬಿಗುವು ಹಾಗೂ ರಾಜಕೀಯ ಖೈದಿಗಳನ್ನು ಸಹ ಕ್ರಿಮಿನಲ್ ಖೈದಿಗಳ ಹಾಗೆ ನೋಡಿಕೊಳ್ಳುವ ಜಬರು ಅಲ್ಲಿತ್ತು. ಕೆಲ ತಿಂಗಳುಗಳ ನಂತರ ಇದರಲ್ಲಿ ಸ್ವಲ್ಪ ಬದಲಾವಣೆ ಉಂಟಾಯಿತು. ಇದಕ್ಕೆ ಕಾರಣೀಭೂತರೆಂದರೆ ಮೇಜರ್ ಜೋನ್ಸ್ ಎಂಬ ಅಧಿಕಾರಿ. ಯರವಡಾ ಜೇಲಿನ ಮುಖ್ಯಸ್ಥನಾದ ಬಳಿಕ. ರಾಜಕೀಯ ಖೈದಿಗಳನ್ನು

''ಸಭ್ಯಗ್ರಹಸ್ಥ''ರ ರೀತಿಯಲ್ಲಿ ಆತ ನಡೆಸಿಕೊಳ್ಳಲಾರಂಭಿಸಿದ. ಹೀಗಾಗಿ ''ಸಭ್ಯಗ್ರಹಸ್ಥರ'' ವರ್ತನೆ ಕೆಳಗಿನ ಅಧಿಕಾರಿಗಳಿಗೂ ಮಾದರಿಯಾಯಿತು.

ಯರವಡಾ ಜೇಲಿನಲ್ಲಿ ಲೋಕಮಾನ್ಯ ತಿಲಕರೂ ಸಹ ಹಲವು ದಿವಸಗಳ ಕಾಲ ಬಂಧಿತರಾಗಿದ್ದರು. ಆ ಕಾಲಕ್ಕೆ ಅಲ್ಲಿ ೨೦೦೦ ಜನರನ್ನು ಸ್ವಾಭಾವಿಕವಾಗಿಯೇ ಇಡಬಹುದಾಗಿತ್ತು. ಸ್ವಾತಂತ್ರ್ಯ ಚಳುವಳಿ ಜೋರಾಗಿದ್ದ ದಿನಗಳಲ್ಲಿ ೩೦೦೦ ಖೈದಿಗಳನ್ನು ಅಲ್ಲಿಡಲಾಗಿತ್ತಂತೆ. ಖೈದಿಗಳನ್ನು ಒಂದೊಂದು ಸರ್ಕಲ್‌ಗಳಲ್ಲಿ ೧೨೦ ರ ವರೆಗೂ ಒಂದೇ ದೊಡ್ಡ ಕಟ್ಟಡದಲ್ಲಿ ಇಡಲಾಗುತ್ತಿತ್ತು. ಏನೇ ಆದರೂ ಸಹ ಸಂಜೆ ೫ ರಿಂದ ಬೆಳಗಿನ ೬ ರ ವರೆಗೆ ಖೈದಿಗಳಿದ್ದ ವಸತಿಗೆ ಕೀಲಿ ಹಾಕಲಾಗುತ್ತಿತ್ತು. ಯಾವುದಾದರೂ ಖೈದಿ ಆಜ್ಞೆಗಳನ್ನು ಉಲ್ಲಂಘಿಸಿದರೆ ಇಲ್ಲವೇ ದುಷ್ಟವರ್ತನೆ ಮಾಡಿದಲ್ಲಿ ಅವರನ್ನು ಪ್ರತ್ಯೇಕ ಇಲ್ಲವೇ ಅಂಧೇರಿ ಎಂಬ ಭಾಗಗಳಲ್ಲಿ ಏಕಾಂಗಿಯಾಗಿ ಬಂಧಿಸಿಡಲಾಗುತ್ತಿತ್ತು. ಇಲ್ಲಿ ಬೇರೊಬ್ಬರ ಭೇಟಿ ಮಾತುಕತೆಗಳು ಇರುವುದಿಲ್ಲ. ಬರೀ ಮುಂಜಾನೆ ಅರ್ಧ ಗಂಟೆ ಮತ್ತು ಮಧ್ಯಾಹ್ನ ಅರ್ಧ ಗಂಟೆ ಮಾತ್ರ ಅವರು ಬಂಧಿಸಿದ್ದ ಕೋಣೆಯ ಕೀಲಿಯನ್ನು ತೆಗೆದು ಕೋಣೆಯ ಅಕ್ಕಪಕ್ಕದಲ್ಲಿ ಸಂಚರಿಸಲು ಅನುಕೂಲ ಮಾಡಿಕೊಡಲಾಗುತ್ತಿತ್ತು. ಆಗ ಯರವಡಾ ಜೇಲಿನಲ್ಲಿ ಯುರೋಪಿಯನ್ ವಾರ್ಡ ಎಂಬ ಪ್ರತ್ಯೇಕ ವಿಭಾಗವಿತ್ತು. ಅಲ್ಲಿ ಯುರೋಪ ದೇಶಗಳ ನಿವಾಸಿಗಳು ಭಾರತದಲ್ಲಿ ಅಪರಾಧ ಮಾಡಿದ್ದರೆ ಅವರನ್ನು ಅಲ್ಲಿ ಬಂಧಿಸಿಡಲಾಗುತ್ತಿತ್ತು. ಮಹಾತ್ಮಾ ಗಾಂಧೀಜಿಯವರನ್ನು ಸಹ ಇಂಥ ವಾರ್ಡಿನಲ್ಲಿ ಬಂಧಿಸಿಡಲಾಗಿತ್ತಂತೆ. ಲೋಕಮಾನ್ಯ ತಿಲಕರು ೧೮೯೮ ರ ಸುಮಾರು ಈ ಜೇಲಿನಲ್ಲಿ ಬಂಧಿತರಾಗಿದ್ದರಂತೆ. ಆಗ ಅವರ ಕೈಕಾಲುಗಳಿಗೆ ಕಬ್ಬಿಣದ ಸರಪಳಿಗಳನ್ನು ಬಿಗಿದು ಬಂಧಿಸಿಡಲಾಗಿತ್ತಂತೆ. ಆದರೆ ಈ ಬಗ್ಗೆ ತಿಲಕರೇ ತಮ್ಮ ಬಗ್ಗೆ ಏನೂ ಬರೆದಂತೆ ಕಾಣಲಿಲ್ಲ.

೧೯೨೨ ರಲ್ಲಿ ಯರವಡಾದ ಪ್ರತ್ಯೇಕ ಭಾಗದಲ್ಲಿ ದಿವಾಕರ, ಆರ್. ಎಸ್. ಹುಕ್ಕೇರಿಕರ ಮತ್ತು ವಿಶ್ವನಾಥರಾವ್ ಜೋಶಿ ಅವರು ಇದ್ದರು. ಪ್ರತ್ಯೇಕ ವಿಭಾಗ ಬಿಟ್ಟು ಸಾಮಾನ್ಯ ವಿಭಾಗದಲ್ಲಿ ಖೈದಿಗಳಾಗಿದ್ದವರಿಗೆ ಸಶ್ರಮ ಶಿಕ್ಷೆಯನ್ನು ಅವರು ರಾಜಕೀಯ ಖೈದಿಗಳಾಗಿದ್ದರೂ ನೀಡಲಾಗುತ್ತಿತ್ತು. ಅವರು ನಿತ್ಯವೂ ನೀರು ಜಗ್ಗುವ ಇಲ್ಲವೇ ನಿತ್ಯವೂ ೨೦ ಕಿಲೋದಷ್ಟು ಜೋಳ ಗೋದಿ ಇಲ್ಲವೇ ಸಜ್ಜೆಯನ್ನು ಬೀಸುಕಲ್ಲುಗಳಿಂದ ಬೀಸಬೇಕಾಗುತ್ತಿತ್ತು. ಇಂಥ ಶಿಕ್ಷೆಯನ್ನು ವೆಂಕಟರಾವ್ ಮುದುವೀಡಕರ, ಮಧ್ವರಾವ್ ಕಬ್ಬೂರ ಅವರೂ ಸಹ ಮಾಡಿದ್ದರು. ಇನ್ನು ಪ್ರತ್ಯೇಕ ವಿಭಾಗವೆಂದರೆ ೧೦ x ೧೦ ಚೌರಸ್ ಅಡಿಯ ಒಂದು ಕೋಣೆಯಲ್ಲಿ ದಿನದ ೨೪ ಗಂಟೆಯೂ ಖೈದಿಗಳು ಇರಬೇಕಾಗುತ್ತಿತ್ತು. ಬೆಳಿಗ್ಗೆ ಸುಮಾರು ಅರ್ಧ ಗಂಟೆ ಮುಖ ಮಾರ್ಜನಕ್ಕೆ ನೀರು ಸಂಗ್ರಹಿಸಿದ ಹೌದಿಗೆ ಹೋಗಲು ಬಿಡಲಾಗುತ್ತಿತ್ತು. ಮುಂದೆ ಬೆಳಗಿನ ೯.೩೦ ಕ್ಕೆ ಅರ್ಧಗಂಟೆ ಹಾಗೂ ಸಂಜೆ ೪.೩೦ ಕ್ಕೆ ಅರ್ಧ ಗಂಟೆ ಈ ಪ್ರತ್ಯೇಕ ಕೋಣೆಯ ಬಾಗಿಲನ್ನು ತೆಗೆಯಲಾಗುತ್ತಿತ್ತು. ಯಾವ ಖೈದಿಯೂ ಯಾರ ಸಂಗಡನೆಯೂ ಮಾತನಾಡದಂತೆ ಕಟ್ಟಪ್ಪಣೆ ಇರುತ್ತಿತ್ತು.

ದಿವಾಕರ ಅವರಿಗೆ ಸಾದಾ ಶಿಕ್ಷೆ ಇದ್ದರೂ ಸಹ ಮೊದಲಿನ ಆರು ತಿಂಗಳ ವರೆಗೆ ಬರೆಯುವ ಸೌಕರ್ಯವನ್ನು ಮಾಡಿಕೊಡಲಿಲ್ಲ. ಆದರೆ ಮೇಜರ್ ಜೋನ್ಸ್ ಅವರು ಮುಖ್ಯಸ್ಥರಾಗಿ ಬಂದ ನಂತರ ಸೌಕರ್ಯಗಳು ಖೈದಿಗಳಿಗೆ ಹೆಚ್ಚಾಗತೊಡಗಿದವು. ಆ ಕಾಲಕ್ಕೆ ದಿವಾಕರ ಅವರ ಜೊತೆಗೆ ಸುಮಾರು ೨೦ ರಾಜಕೀಯ ಖೈದಿಗಳು ಜೇಲಿಗೆ ದಾಖಲಾಗಿದ್ದರು. ನಂತರ ಮಹಾತ್ಮಾ ಗಾಂಧೀಜಿಯವರೂ ಸಹ ಯರವಡಾ ಜೇಲಿಗೆ ಬಂದರು.

ಮೇಜರ್ ಜೋನ್ಸ್‌ರ ಆಡಳಿತದಲ್ಲಿ ದಿವಾಕರ ಅವರಿಗೆ ಏಕ ಕಾಲಕ್ಕೆ ೨೦ ಪುಸ್ತಕಗಳನ್ನು ಇಟ್ಟುಕೊಳ್ಳುವ ಹಾಗೂ ಓದುವ ಸ್ವಾತಂತ್ರ್ಯ ದೊರೆಯಿತು. ಹಾಗೂ ಸಂಜೆ ೫ ರ ವರೆಗೆ ಈ ಪ್ರತ್ಯೇಕ ಕೋಣೆಗಳ ಬಾಗಿಲುಗಳು ಸಹ ತೆರೆಯಲಾಯಿತು. ಇದರ ಜೊತೆಗೆ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಬಂಧಿತರಾಗಿದ್ದ ಈ ಸುಶಿಕ್ಷಿತ ಖೈದಿಗಳ ಜೊತೆಗೆ ಜೋನ್ಸ್ ಸಾಹೇಬರು ಇಂಗ್ಲೀಷಿನಲ್ಲಿ ಮಾತಾಡತೊಡಗಿದರು. ದಿವಾಕರರು ಆಗ ತಾವು ವಾಸವಾಗಿದ್ದ ಪ್ರತ್ಯೇಕ ಕೋಣೆಯ ವರ್ಣನೆ ಮಾಡುತ್ತಾರೆ. ಸುಮಾರು ೮ ಕೋಣೆಗಳು ಜೇಲಿನ ಆವರಣದಲ್ಲಿಯೇ ಪ್ರತ್ಯೇಕವಾಗಿಯೇ ಇದ್ದವಂತೆ. ೧೦ x ೧೦ ಚೌರಸ್ ಅಡಿಯ ಈ ಕೋಣೆಯ ಎತ್ತರ ೧೨ ಅಡಿ ಇದ್ದೀತು. ಮೇಲೆ ನಾಡ ಹಂಚಿನ ಚಪ್ಪರ. ಸುಣ್ಣ ಬಳಿದ ಗೋಡೆಗಳು. ದಪ್ಪ ದಪ್ಪ ಕಬ್ಬಿಣದ ಸಲಾಖೆಗಳನ್ನು ಹಾಕಿದ ಕಿಟಕಿ ಮತ್ತು ಬಾಗಿಲುಗಳು. ಈ ಕೋಣೆಯ ಒಂದು ಮೂಲೆಯಲ್ಲಿ ಎರೆ ಮಣ್ಣಿನ ರಾಶಿ ಇರುತ್ತಿತ್ತು. ಅದರ ಮೇಲೆ ಡಾಂಬರು ಸವರಿದ ಎರಡು ಮಣ್ಣಿನ ಕುಂಡೆಗಳು ಇರುತ್ತಿದ್ದವು. ಅಲ್ಲಿಯೇ ಖೈದಿಗಳು ಮಲಮೂತ್ರ ವಿಸರ್ಜಿಸಬೇಕಾಗುತ್ತಿತ್ತು. ನೆಲದ ಮೇಲೆ ಘನ ಪದಾರ್ಥ ಹಾಗೂ ದ್ರವ ಬೀಳದಂತೆ ಖೈದಿಗಳು ಎಚ್ಚರಿಕೆ ವಹಿಸಬೇಕಾಗುತ್ತಿತ್ತು. ಇದು ತುಂಬಾ ಕಷ್ಟದ ಕೆಲಸವಾಗುತ್ತಿತ್ತು. ಜೇಲಿನ ಉಡುಪು ಎಂದರೆ ಒಂದು ಲಂಗೋಟಿ, ಒಂದು ಮೊಣಕಾಲು ವರೆಗೆ ಬರುವ ಚೊಣ್ಣ. ಇನ್ನೊಂದು ಅರ್ಧತೋಳಿನ ಅಂಗಿ. ಜೊತೆಗೆ ಗಾಂಧಿ ಟೊಪ್ಪಿಗೆಯಂತಹ ಒಂದು ಟೋಪಿ. ಆ ಕಾಲದಲ್ಲಿ ಇಂಥ ಉಡುಪುಗಳ ಒಂದೇ ಜೊತೆ ಬಟ್ಟೆಯನ್ನು ಕೊಡಲಾಗುತ್ತಿತ್ತು. ಮುಂದೆ ಒತ್ತಾಯ ಬಂದ ನಂತರ ಎರಡು ಜೊತೆ ಕೊಡ ಮಾಡಿದರು. ಪ್ರತಿ ವಾರ ಬಟ್ಟೆಗಳನ್ನು ಒಗೆಯಲು ಒಂದು ಮುಷ್ಟಿ ಅಂಟಾಳಕಾಯಿಯನ್ನು ಕೊಡಲಾಗುತ್ತಿತ್ತು. ಚಳಿಗಾಲ ಮಳೆಗಾಲದಲ್ಲಿ ಬಿರುಸಾದ ಅರ್ಧ ತೋಳಿನ ಸ್ವೆಟರ್ ಕೊಡಲಾಗುತ್ತಿತ್ತು. ಕ್ರಿಕೆಟ್ ಮ್ಯಾಟಿನ ಇಮ್ಮಡಿಯಷ್ಟು ದಪ್ಪವಾದ ಒಂದು ಹಾಸಿಗೆಯನ್ನು ಹಾಗೂ ಹೊದೆಯಲು ದಪ್ಪನೆಯ ಕಂಬಳಿ ಕೊಡಲಾಗುತ್ತಿತ್ತು. ನೀರು ಇಲ್ಲವೇ ಊಟ ಮಾಡಲು ಜಂಗು ಹತ್ತಿದ ಪಾತ್ರೆ, ಪಗಡಗಳನ್ನು ಕೊಡಲಾಗುತ್ತಿತ್ತು.

ಇನ್ನು ಊಟವೂ ಸಹ ನರಕ ದರ್ಶನವನ್ನೇ ಮಾಡುತ್ತಿತ್ತು. ಮುಂಜಾನೆ ಜೋಳದ ಹಿಟ್ಟಿನ ಅಂಬಲಿ, ೯.೩೦ ಕ್ಕೆ ಎರಡು ದಪ್ಪನೆಯ ರೊಟ್ಟಿಗಳು ಮತ್ತು ಕೊಂಚ ಸಪ್ಪನೆಯ ಬೇಳೆ. ವಾರದಲ್ಲಿ ಒಂದು ದಿನ ಗೋದಿಯ ರೊಟ್ಟಿ, ಎರಡು ದಿನ ಸಜ್ಜೆಯ ರೊಟ್ಟಿ.

ಉಳಿದ ನಾಲ್ಕು ದಿನ ಜೋಳದ ರೊಟ್ಟಿ ನೀಡಲಾಗುತ್ತಿತ್ತು. ಸಂಜೆ ೪.೩೦ ಕ್ಕೆ ಇಂಥದೇ ಮಾದರಿಯ ಎರಡು ರೊಟ್ಟಿಗಳು ಇದರ ಜೊತೆಗೆ ತಿನ್ನಲು ಬಾರದಂತಹ ಪಲ್ಲೆ ಸಿಗುತ್ತಿತ್ತು. ಮಾಂಸಹಾರಿಗಳಿಗೆ ಪ್ರತಿ ರವಿವಾರ ಕೊಂಚವೇ ಮಾಂಸ. ಶಾಖಾಹಾರಿಗಳಿಗೆ ಅದೇ ಪ್ರಮಾಣದಷ್ಟು ಬೆಲ್ಲವನ್ನು ಕೊಡಲಾಗುತ್ತಿತ್ತು. ಬಹಳೇ ಕೀಳು ತರಹದ ಜೋಳ, ಗೋದಿ ಹಾಗೂ ಸ್ವಚ್ಛ ಮಾಡದ ಧಾನ್ಯಗಳನ್ನು ಹಾಗೆಯೇ ಬೀಸಲಾಗುತ್ತಿತ್ತು. ಇದರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಉಸುಕನ್ನೂ ಸಹ ಹಾಕಲಾಗುತ್ತಿತ್ತಂತೆ. ಇನ್ನು ಜೇಲಿನಲ್ಲಿ ದುರ್ವರ್ತನೆ ಎಂದು ಎನಿಸಿದ ಖೈದಿಗಳಿಗೆ ಕೊಡುವ ಶಿಕ್ಷೆಗಳೂ ನರಕ ಸದೃಶವಾಗುತ್ತಿತ್ತು. ಇವುಗಳಲ್ಲಿ ಮುಖ್ಯವಾದವುಗಳೆಂದರೆ ವಿಪರೀತ ಉಪ್ಪು ಹಾಕಿದ ಗಂಜಿಯನ್ನು ಮೂರುದಿನ ಕೊಡುವುದು, ಕೋಣೆಯಲ್ಲಿಯೇ ಬಂಧಿಸಿಡುವುದು. ರಾತ್ರಿ ಕೈಗೆ ಬೇಡಿ ತೊಡಿಸುವುದು, ಹಗಲು ೧೨ ಗಂಟೆಗಳ ಕಾಲ ಕೈಗೆ ಬೇಡಿ ಹಾಕಿ ಆ ಕೈಗಳನ್ನು ಕಂಬಕ್ಕೆ ಕಟ್ಟಿ ನಿಲ್ಲಿಸುವುದು. ಇದರ ಜೊತೆಗೆ ಒಳ್ಳೆಯ ವರ್ತನೆ ತೋರಿಸಿದ ಖೈದಿಗಳಿಗೆ ನೀಡಲಾಗಿದ್ದ ರಿಯಾಯಿತಿ ದಿನಗಳನ್ನು ಸಹ ವಜಾ ಮಾಡುವುದು ಇವೆಲ್ಲವೂ ಸೇರುತ್ತವೆ. ಇದಲ್ಲದೆ ಹೆಚ್ಚಿನ ಶಿಕ್ಷೆ ಎಂದರೆ 'ಘಟಕಿ' ಶಿಕ್ಷೆ. ಖೈದಿಯ ಕೈಕಾಲುಗಳನ್ನು ಕಂಬಕ್ಕೆ ಕಟ್ಟಿ ಬರೀ ಲಂಗೋಟಿಯ ಮೇಲೆ ಅವನನ್ನು ನಿಲ್ಲಿಸಿ ತಿಗದ ಮೇಲೆ ಲಾಟಿಯಿಂದ ಥಳಿಸುವುದು. ಇಂಥ ೩೦ ಏಟುಗಳನ್ನು ಹೊಡೆಯುವುದೇ ಆಗಿನ ಶಿಕ್ಷೆಗಳಲ್ಲಿ ಎಲ್ಲಕ್ಕೂ ಹಿರಿಯದಾಗಿತ್ತು.

ಕಾಲಕ್ರಮೇಣ ಶಿಕ್ಷೆಗಳಲ್ಲಿ ಬದಲಾವಣೆ ಆಗದಿದ್ದರೂ ರಾಜಕೀಯ ಖೈದಿಗಳಿಗೆ ಸೌಕರ್ಯಗಳು ಸಿಗತೊಡಗಿದವು. ಹಲವಾರು ರಾಜಕೀಯ ಖೈದಿಗಳನ್ನು ಒಟ್ಟಿಗೆ ಇಟ್ಟಾಗ ಅಲ್ಲಿ ಹರಟೆ, ಭಾಷಣ, ಭಜನೆ, ಎಲ್ಲವೂ ನಡೆಯುತ್ತಿದ್ದವು. ದಿವಾಕರ ಅವರು ಮೊದಲಿನ ಐದು ತಿಂಗಳ ವರೆಗೆ ಪ್ರತ್ಯೇಕ ಕೋಣೆಯಲ್ಲಿ ಏಕಾಂಗಿಯಾಗಿಯೇ ಇದ್ದರು. ಅವರು ಸಾದಾ ಖೈದಿಗಳಿದ್ದರೂ ಸಹ ದಿನದ ೨೪ ಗಂಟೆಯೂ ಕೀಲಿಯಲ್ಲಿಯೇ ಅವರನ್ನು ಬಂಧಿಸಿಡಲಾಗುತ್ತಿತ್ತು. ದಿನಕ್ಕೆ ಮೂರು ಬಾರಿ ಮಾತ್ರ ಅರ್ಧ ಗಂಟೆಯ ಕಾಲ ಕೋಣೆಯಿಂದ ಹೆಜ್ಜೆ ಇಡಲು ಬಿಡಲಾಗುತ್ತಿತ್ತು. ಆದರೆ ರಾಜಕೀಯ ಖೈದಿಗಳ ಸಂಖ್ಯೆ ಯರವಡಾ ಜೇಲಿನಲ್ಲಿ ಬೆಳೆಯುತ್ತಾ ಹೋದಂತೆ ಅಲ್ಲಿಯ ಕಾಠಿಣ್ಯವೂ ಕಡಿಮೆಯಾಗತೊಡಗಿತಲ್ಲದೇ ರಾಜಕೀಯ ಖೈದಿಗಳ ಸ್ವಾತಂತ್ರ್ಯವು ಹೆಚ್ಚತೊಡಗಿತು. ಹಲವಾರು ಧಾರ್ಮಿಕ ಗ್ರಂಥಗಳನ್ನು ದಿವಾಕರ ಅವರು ಮೇಜರ್ ಜೋನ್ಸ್‌ನ ಸಹಾಯದಿಂದ ಪಡೆದುಕೊಂಡರು. ಅದೇ ಕಾಲಕ್ಕೆ ಅವರು ಉಪನಿಷತ್ತುಗಳ ಕನ್ನಡ ಅನುವಾದವನ್ನೂ ಬರೆದರು.

ಜೇಲೆಂದರೆ ಅಪಮಾನ ಮತ್ತು ಅಸಹಾಯಕತೆಯ ವಾಸ. ಪ್ರಾರಂಭದಲ್ಲಿ ಜೇಲಿನ ಮುಖ್ಯಸ್ಥರು ಬಂದಾಗ ಅಲ್ಲಿಯ ಸಿಬ್ಬಂದಿ ಜೋರಾಗಿ ''ಸರ್ಕಾರ ಏಕ್'' ಎಂದು ಕೂಗುತ್ತಿದ್ದರು. ಇದರ ಪ್ರತಿಯಾಗಿ ಪ್ರತಿಯೊಬ್ಬ ಖೈದಿಯೂ ಮೊಳಕೈಯಿಗಳನ್ನು ಬದಿಗೆ ಹಚ್ಚಿಕೊಂಡು ಮುಂಗೈ ಚಾಚಿ ನಿಂತುಕೊಳ್ಳಬೇಕು ಎಂಬ ಆದೇಶ ನೀಡಲಾಗುತ್ತಿತ್ತು.

ದಿವಾಕರ ಮತ್ತು ಇತರರು ಬರುವವರೆಗೆ ಇದು ಹಾಗೆಯೇ ನಡೆಯುತ್ತಿತ್ತು. ಪ್ರಾರಂಭಕ್ಕೆ ಇಂಥ ಆದೇಶ ಬಂದಾಗ ಇದರ ಅರ್ಥ ಏನು ಎಂದು ದಿವಾಕರ ಕೇಳಿದರಂತೆ. ಅದಕ್ಕೆ ಸಿಬ್ಬಂದಿ ನೀಡಿದ ಉತ್ತರವೇನೆಂದರೆ ಇಡೀ ಜಗತ್ತಿನಲ್ಲಿ ಇರುವುದು ಬ್ರಿಟಿಷರ ಈ ಸರಕಾರ ಒಂದೇ. ಇದಕ್ಕೆ ನಾವು ನೀವು ಎಲ್ಲರೂ ತಲೆ ಬಾಗುತ್ತಿದ್ದೇವೆ ಎಂಬುದೇ ಇದರ ಅರ್ಥ ಎಂದು ಹೇಳಿದರು. ಆದರೆ ಇದನ್ನು ತಕ್ಷಣವೇ ವಿರೋಧಿಸಿದ ದಿವಾಕರ ಹಾಗೂ ಸಂಗಡಿಗರು ನಾವು ಈ ರೀತಿ ಕೂಗುವುದಿಲ್ಲ, ನೀವು ನಮಗೆ ಇನ್ನಷ್ಟು ಶಿಕ್ಷೆ ವಿಧಿಸಬಹುದು ಎಂದು ನಿಷ್ಠುರವಾಗಿಯೇ ಹೇಳಿದ ನಂತರ ಮುಂದೆ ಹೀಗೆ ಘೋಷಣೆ ಹಾಕದೇ ಇರುವಂತೆ ಅವರಿಗೆ ಕೋರಲಾಯಿತಂತೆ.! ಜೇಲಿನ ನಿಯಮುಗಳ ಪ್ರಕಾರ ಸೆರೆಯಾಳುಗಳು ಪರಸ್ಪರ ಮಾತಾಡುವುದೂ ಸಹ ಅಪರಾಧ. ಹಾಗೆ ಮಾಡಿದರೆ ಆ ಖೈದಿಗಳನ್ನು ಮರುದಿನ ವಿಚಾರಣೆಗೆ ಏರ್ಪಡಿಸುವುದು ಒಂದು ಶಿಕ್ಷೆಯಲ್ಲಿಯೇ ಶಿಕ್ಷೆಯಾಗಿತ್ತು. ಇದಕ್ಕೆ ಜೇಲ್ ಭಾಷೆಯಲ್ಲಿ ''ಖಡಾ ಕರನಾ'' ಎನ್ನಲಾಗುತ್ತಿತ್ತಂತೆ. ಜೈಲಿನ ಮುಖ್ಯಸ್ಥರ ಎದುರು ಖೈದಿಗಳನ್ನು ತಂದು ಆತ ಕೂಡ್ರಲಾರದಂತೆಯೇ ವಿಚಾರಣೆ ಮುಗಿಯುವವರೆಗೂ ಗಂಟೆಗಳ ಕಾಲ ಆತ ನಿಲ್ಲಬೇಕಾಗುತ್ತಿತ್ತು. ಆದರೆ ಪರಸ್ಪರ ಉಭಯ ಕುಶಲೋಪರಿ ಮಾತನಾಡುವ ಪ್ರವೃತ್ತಿ ದಿವಾಕರ ಅವರು ಬಂದ ಸ್ವಲ್ಪದಿನಕ್ಕೆ ಮುಂದುವರೆಯಿತು. ಕ್ರಮೇಣವಾಗಿ ಇಂಥ ಖಡಾ ಕರನಾ ಶಿಕ್ಷೆಯೂ ಕಡಿಮೆಯಾಗತೊಡಗಿತು. ಆದರೆ ಸ್ವಾತಂತ್ರ್ಯ ಚಳುವಳಿಯ ಹೋರಾಟ ಜೋರಾಗತೊಡಗಿದಂತೆ ರಾಜಕೀಯ ಖೈದಿಗಳ ಮಾತುಕತೆಗಳೂ ಸಹ ಕಡಿಮೆಯಾಗತೊಡಗಿದವು.

ಕಾರಾಗ್ರಹದ ಈ ಅವಧಿಯಲ್ಲಿ ದಿವಾಕರ ಅವರು ಆಧ್ಯಾತ್ಮದತ್ತ ಹೆಚ್ಚು ಒಲವು ತೋರ ತೊಡಗಿದರು. ''ಗೀತೆಯ ಗುಟ್ಟು'' ಎಂಬ ಅವರ ಪುಸ್ತಕದ ಹೊಳಹು ವಿಚಾರ ಹಾಗೂ ಬರಹ ಈ ಕಾರಾಗ್ರಹದಲ್ಲಿಯೇ ಬಂದಿದ್ದು ಒಂದು ವಿಶೇಷ. ಇದೇ ವೇಳೆಯಲ್ಲಿ ಅವರಿಗೆ ಪರಿಚಯವಾದವರು ಮೊಹರೆ ಹನುಮಂತರಾಯರು. ಇವರು ಆಗಲೇ ಅವಿಭಾಜಿತ ವಿಜಾಪುರ ಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತವಿದ್ದ ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕರಾಗಿದ್ದರು. ಪತ್ರಿಕೆ, ಪತ್ರಿಕೋದ್ಯಮ, ಭಾರತದ ಸ್ವಾತಂತ್ರ್ಯ ಹಾಗೂ ಕರ್ನಾಟಕ ಏಕೀಕರಣ ಇವೆಲ್ಲವನ್ನು ಮೇಳೈವಿಸಿಕೊಂಡಿದ್ದ ಮೊಹರೆ ಹನುಮಂತರಾಯರ ಯರವಡಾ ಜೇಲಿನ ಬಂಧನ ಒಂದು ರೀತಿಯಲ್ಲಿ ವರಪ್ರದಾನವೇ ಆಯಿತು. ಲೋಕಶಿಕ್ಷಣ ಟ್ರಸ್ಟಿನ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ಕಸ್ತೂರಿ, ಕರ್ಮವೀರ ಇವುಗಳ ಧಾರಣ ಶಕ್ತಿಯನ್ನು ದಿವಾಕರ ಹಾಗೂ ಮೊಹರೆಯವರಿಗೆ ಯರವಡಾ ಜೇಲು ನೀಡಿತೆನ್ನಬಹುದು.

ದಿವಾಕರ ಅವರು ಯರವಡಾ ಜೇಲಿನಲ್ಲಿ ಇರುವಾಗಲೇ ಮಹಾತ್ಮಾ ಗಾಂಧೀಜಿಯವರು ಸಹಾ ಅದೇ ಜೇಲಿಗೆ ಬಂದಿಳಿದಿದ್ದು ಎಲ್ಲ ರಾಜಕೀಯ ಖೈದಿಗಳಿಗೆ

ಅಮಿತಾನಂದವಾಯಿತು. ಗಾಂಧೀಜಿಯವರಿಗೆ ಆರು ವರ್ಷ ಶಿಕ್ಷೆಯಾಗಿತ್ತು. ಹೀಗಾಗಿ ಅನಾಯಾಸವಾಗಿ ಬಾಪೂಜಿಯವರ ದರ್ಶನ ನಿತ್ಯವೂ ದಿವಾಕರ ಅವರಿಗೆ ಕಾಣತೊಡಗಿತು. ಅವರು ಅಧ್ಯಯನ ಮಾಡುವ, ನೂಲುವ, ಕುಳಿತಿರುವ ಎಷ್ಟೋ ದೃಶ್ಯಗಳು ಅವರ ಕಣ್ಣಿಗೆ ಬೀಳುತ್ತಿದ್ದವು. ಇಬ್ಬರ ದೃಷ್ಟಿ ಮಿಲನವಾದಾಗ ನಮಸ್ಕಾರಗಳನ್ನು ಸಲ್ಲಿಸಲಾಗುತ್ತಿತ್ತು. ಒಮ್ಮೆ ಅಲ್ಲಿ ಬಂಧಿತರಾಗಿದ್ದ ಕರ್ನಾಟಕದ ಖೈದಿಗಳೆಲ್ಲರೂ ಗಾಂಧೀಜಿಯವರ ಸುತ್ತು ನೆರೆದರು. ಸ್ವಲ್ಪ ಹೊತ್ತು ಅವರೊಂದಿಗೆ ತಿರುಗಾಟವೂ ಜೇಲಿನ ಒಳ ಆವರಣದಲ್ಲಿ ನಡೆಯಿತು. ಚಳುವಳಿಯ ಮುಂದಿನ ಭವಿಷ್ಯದ ಬಗ್ಗೆ ಹಾಗೂ ದೇಶದ ಮುಂದಿನ ಸ್ಥಿತಿಯ ಬಗ್ಗೆ ಹಲವರು ಪದೇ ಪದೇ ಪ್ರಶ್ನಿಸಿದಾಗ ಗಾಂಧೀಜಿಯವರು ಸಮರ್ಪಕವಾಗಿಯೇ ಉತ್ತರಿಸುತ್ತಿದ್ದರು. ೩೦ ವರ್ಷಗಳಲ್ಲಿ ಆದ ಜಾಗೃತಿ ಮೂರು ವರ್ಷಗಳಲ್ಲಿ ಆಗಿದೆ. ಇದೇನು ಸಣ್ಣ ಲಾಭವಲ್ಲ ಎಂದವರು ಹೇಳಿದರು. ಗಾಂಧೀಜಿಯವರ ಸಲಹೆಯ ಮೇರೆಗೆ ಆಗಿನ ಜೇಲಿನ ಸುಪರಿಂಟೆಂಡೆಂಟರಾದ ಜೋನ್ಸ್‌ರವರ ಆಣತಿಯಂತೆ ದಿವಾಕರರೂ ಸೇರಿದಂತೆ ರಾಜಕೀಯ ಖೈದಿಗಳಿಗೆ ನೂಲುವ ರಾಟಿಯನ್ನು ಒದಗಿಸಲಾಗಿತ್ತು.

ಗಾಂಧೀಜಿಯವರ ತಿಳಿ ಹಾಸ್ಯದ ಮಾತುಗಳೆಲ್ಲ ಇಡಿಯ ಯರವಡಾ ಜೇಲಿನಲ್ಲಿ ಪ್ರಫುಲ್ಲ ವಾತಾವರಣವನ್ನೇ ಹಬ್ಬಿಸುತ್ತಿತ್ತು. ನಿತ್ಯ ಕ್ರಮದಂತೆ ಜೋನ್ಸ್ ಸಾಹೇಬರು ಖೈದಿಗಳ ಭೇಟಿಗೆ ಬಂದಾಗ ನೀವು ಹೇಗಿದ್ದೀರಿ ಎಂದು ಗಾಂಧೀಜಿಯವರನ್ನು ಪ್ರಶ್ನಿಸಿದ. ಅದಕ್ಕೆ ಅವರು ಉತ್ತರಿಸಿ ನಾವು ಒಂದು ಸುಖಿ ಕುಟುಂಬದಂತೆ ಇದ್ದೇವೆ ಎಂದು ಅಂದರು. ನೀವು ರಾಜಕಾರಣದ ಬಗ್ಗೆ ಏನೂ ಮಾತನಾಡಬಾರದು ಎಂದು ಹಾಸ್ಯದಿಂದ ಜೋನ್ಸ್ ಹೇಳಿದಾಗ ಅದಕ್ಕೆ ಅದೇ ಧಾಟಿಯಲ್ಲಿ ಉತ್ತರಿಸಿದ ಬಾಪೂಜಿ ಗಂಡ ಹೆಂಡತಿಯನ್ನು ಒತ್ತಟ್ಟಿಗೆ ಇಟ್ಟು ಮನೆ ಮಾತುಗಳನ್ನು ಆಡಬೇಡಿರಿ ಎಂದರೆ ಸಾಧ್ಯವೇ ? ಎಂದು ಉತ್ತರಿಸಿದರು.

ಬಿಡುಗಡೆ ಆಗುವುದರ ಒಳಗಾಗಿ ಒಮ್ಮೆ ಗಾಂಧೀಜಿಯವರನ್ನು ಭೇಟಿಯಾಗಿ ನಮಸ್ಕರಿಸುವ ವಾಂಛೆ ದಿವಾಕರರಿಗೆ ಇತ್ತು. ಅದನ್ನವರು ಮುಕ್ತವಾಗಿಯೇ ಹೇಳಿದಾಗ ಬಾಪೂಜಿ ಅದಕ್ಕೆ ಒಪ್ಪಿದರಲ್ಲದೇ ಆಗಿನ ಚರ್ಚೆಯ ವಿವರಗಳನ್ನು ''ಮಹಾತ್ಮರ ಇಂದಿನ ವಿಚಾರಗಳು ಎಂಬ ಚಿಕ್ಕ ಪುಸ್ತಿಕೆಯಲ್ಲಿ ಪ್ರಕಟಿಸಿದರು.

ಈ ಬಗ್ಗೆ ಮಹಾತ್ಮಾ ಗಾಂಧೀಜಿಯವರು ರಂಗನಾಥ ದಿವಾಕರರ ಸಂಗಡ ಮಾತನಾಡಿದ ಕೆಲವು ವಿವರಗಳು ಈಗಲೂ ಸಹ ಐತಿಹಾಸಿಕವಾಗಿ ಸ್ಮರಣಾರ್ಹವೂ ಆಗಿವೆ. ಮಹಾತ್ಮಾಜಿಯವರು ಹೇಳಿದ್ದೇನೆಂದರೆ

''ಕರ್ನಾಟಕವು ನನ್ನನ್ನು ಬಿಟ್ಟಿತೆಂದು ನನಗೆ ಕಲ್ಪನೆಯೂ ಸಹ ಬರದು. ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆಯನ್ನು ನಾನು ಒಳಿತಾಗೇ ಬಲ್ಲೆನು. ಸ್ವದೇಶಿಯ ಬಗ್ಗೆ ಅವರು ಮಾಡಿದ ನಿಶ್ಚಯವು ಸ್ತುತ್ಯ ಇರುವುದು. ಆದರೆ ಈ ವಾದದ ಬೀಜವು ಸುಟ್ಟು ಹೋಗಬೇಕಾದರೆ

ಬ್ರಾಹ್ಮಣೇತರ ಮುಖಂಡರು ನಮ್ಮ ಚಳುವಳಿಯ ರಹಸ್ಯವನ್ನು ಹೆಚ್ಚೆಚ್ಚು ತಿಳಿದುಕೊಳ್ಳಲಿಕ್ಕೆ ಯತ್ನಿಸಬೇಕು. ಬ್ರಾಹ್ಮಣರಾದರೂ ತಮ್ಮ ಸಂಸ್ಕೃತಿಗೆ ಅನುಗುಣವಾಗಿ ಧನ ಮಾನಾದಿಗಳನ್ನು ಲೆಕ್ಕಿಸದೇ ಸ್ವಾರ್ಥ ತ್ಯಾಗದಲ್ಲಿ ಎಲ್ಲರಿಗೂ ಮುಂದೆ ಹೋಗುವ ಮಹಾತ್ವಾಕಾಂಕ್ಷೆಯನ್ನು ನೀಡಬೇಕು. ಮುಂದುವರೆದ ಮಹಾತ್ಮಾಜಿಯವರು ಮಾತನಾಡುತ್ತ ಹಿಂಸಾ ಮಾರ್ಗದಿಂದ ಬರಿಯ ರಾಜಕೀಯ ಸ್ವಾತಂತ್ರವೊಂದೇ ದೊರಕಬಹುದು. ಅದು ಪಾಶ್ಚಾತ್ಯ ಸಂಸ್ಕೃತಿಗೆ ಅನುಸರಿಸದ್ದೇ ಇರಬಹುದು. ಸತ್ಯ ಸ್ವಾತಂತ್ರ್ಯವೆಂದರೆ ಎಲ್ಲ ಜುಲುಮೆ, ಬಲುಮೆಗಳಿಂದ ಮುಕ್ತಿಯು. ಬಲುಮೆ ಎಂದ ಮೇಲೆ ಅದು ಪರಕೀಯದ್ದೇ ಇರಲಿ, ಸ್ವಕೀಯದ್ದೇ ಇರಲಿ, ಅದು ಬಲುಮೆಯೇ. ಅದು ವಿಘಾತಕವೇ. ಬೇವು ಬೆಲ್ಲದೊಳಗೆ ಬೆರೆಸಿದರೆ ಅದು ಸವಿಯಾಗಬಲ್ಲದೇ? ಈ ತರಹದ ಬರಿಯ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಲು ಇಚ್ಛಿಸುವವರು ಬ್ರಿಟಿಷರ ಬಲುಮೆಯನ್ನು ಹೋಗಲಾಡಿಸಿ ತಮ್ಮ ಬಲುಮೆಯನ್ನು ಪ್ರಸ್ಥಾಪಿಸುವರಷ್ಟೇ

ದ್ವೇಷಪೂರ್ಣವಾದ ಹಿಂಸಾ ಮಾರ್ಗದಿಂದ ಇದಕ್ಕೂ ಹೆಚ್ಚು ಏನೂ ಆಗಲಾರದು. ಪ್ರೇಮವೇ ಸತ್ಯ ಸ್ವಾತಂತ್ರ್ಯದ ಹುಟ್ಟು ಭೂಮಿಯು. ಬಂಧು ಭಾವವೇ ಈ ಸ್ವಾತಂತ್ರ್ಯ ವೃಕ್ಷಕ್ಕೆ ಎರೆದ ನೀರು. ಆಯುಷ್ಯದಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷನ ಆತ್ಮ ವಿಶ್ವಾಸಕ್ಕೆ ಬೇಕಾಗುವ ಸಮ ಸಮಾನ ಆದ ಆಸ್ಪದವೇ ಇದರ ಪೋಷಕ ದ್ರವ್ಯವು. ಸಂಕ್ಷೇಪದಲ್ಲಿ ಹೇಳಬೇಕಾದರೆ ಕನಿಷ್ಠ ಪಕ್ಷಕ್ಕೆ ಇಡೀ ಹಿಂದೂಸ್ಥಾನದಲ್ಲಿ ಖಾದಿ ಸಾಮ್ರಾಜ್ಯ, ಹಿಂದೂ ಮುಸಲ್ಮಾನರ ಐಕ್ಯವೂ, ಅಸ್ಪೃಶ್ಯತಾ ನಿವಾರಣೆಯೂ ಅವಶ್ಯ. ಇವುಗಳನ್ನುಳಿದು ಹಿಂದುಸ್ಥಾನದ ನಿಜವಾದ ಸ್ವಾತಂತ್ರ್ಯದ ಕಲ್ಪನೆಯೂ ಸಹ ನನಗೆ ಆಗದು. ಈ ಮೂರೂ ಕೈಗೂಡಿ ಬಂದರೆ ನನಗೆ ಸ್ವರಾಜ್ಯವು ದೊರೆತಂತೆಯೇ. ರಾಜಕೀಯ ಸ್ವಾತಂತ್ರ್ಯವು ಇವುಗಳನ್ನು ದೊರಕಿಸುವ ಮಾರ್ಗದಲ್ಲಿಯೇ ನಮಗೆ ಸಿಗುವುದು. ಇವುಗಳನ್ನು ಬಿಟ್ಟು ಬರಿ ರಾಜಕೀಯ ಸ್ವಾತಂತ್ರ್ಯ ಎಂದರೆ ನನಗೆ ಒಂದು ಬಿಸಿಲು ಕುದುರೆಯಂತೆ ಕಾಣುವುದು.''

ರಂಗನಾಥ ದಿವಾಕರ ಅವರು ಮತ್ತೆ ಕೆಣಕಿ ಕೇಳಿದ ಪ್ರಶ್ನೆಗೆ ಮಹಾತ್ಮಾ ಗಾಂಧೀಜಿಯವರು ಪ್ರಸನ್ನಚಿತ್ತರಾಗಿಯೇ ಉತ್ತರಿಸಿದರು.

''ನನ್ನ ಕಾರ್ಯವೇ ನನ್ನ ಸಂದೇಶವು. ನನ್ನಷ್ಟೇ ಆನಂದಿತರೂ, ತರುಣರೂ ನೀವು ಆಗಬೇಕೆಂದು ನಾನು ಬಯಸುತ್ತೇನೆ. ನಗಬೇಡಿರಿ. ಐವತ್ತು ವರ್ಷಗಳು ಮೀರಿದ್ದರೂ ನಾನು ತರುಣನೇ. ನಾನು ಮಾತನಾಡಿದ ಮಾತಿನ ಅರ್ಥವೆಂದರೆ ದಿನ ದಿನಕ್ಕೆ ನನ್ನ ಈ ಕಲ್ಪನೆಗಳ ಅಚ್ಚ ಹೊಸತನವೂ ಸ್ಪಷ್ಟತನವೂ ನನಗೆ ಹೆಚ್ಚೆಚ್ಚು ಗೋಚರವಾಗುತ್ತ ನಡೆದಿರುವುದರಿಂದ• ನನ್ನ ತಾರುಣ್ಯವು ದಿನಾಲೂ ಹೆಚ್ಚು ಹುರುಪುಳ್ಳದ್ದು ಆಗುತ್ತಿರುವುದೆಂದು ನನಗೆ ಭಾಸವಾಗುತ್ತದೆ. ನನ್ನ ದೇಹವು ಸವೆದು

ಮುಪ್ಪಾಗುತ್ತಿರಬಹುದು. ಆದರೆ ದಿನಾಲೂ ರಾಟಿಯ ಮೇಲೆ ನೂಲುತ್ತ ಕುಳಿತಾಗ ನಾನು ನುಡಿದಾಡಿದ ಪ್ರತಿಯೊಂದು ಕಲ್ಪನೆಯ ಸುಂದರ ಸ್ವರೂಪದ ಸ್ಫುರಣೆಯಾಗಿ ನನ್ನ ಅಂತಃಕರುಣವು ಭಾರತ ಮಾತೆಯ ಅಂತಃಕರುಣದಲ್ಲಿ ಒಂದಾಗಿ ಮುಪ್ಪು ಮುರಿಗಳನ್ನು ಮರೆತು, ನವಯೌವ್ವನದಲ್ಲಿ ನಲಿದಾಡುವುದು''.

ಜನೆವರಿ ೧೯೨೩ ರಲ್ಲಿ ರಂಗರಾವ ದಿವಾಕರರವರು ಯರವಡಾ ಜೇಲಿನಿಂದ ಹೊರಗೆ ಬಂದ ಕೂಡಲೇ ಹೆಚ್ಚಿನ ಚಿಂತೆ ಬಾಧಿಸಿದ್ದು ಜಿಲ್ಲಾ ಆಡಳಿತಕ್ಕೆ. ಎಲ್ಲರ ಅಪೇಕ್ಷೆಯಂತೆಯೇ ದಿವಾಕರರು ಕರ್ಮವೀರ ಪತ್ರಿಕೆಯ ಸಂಪಾದಕ ಸ್ಥಾನಕ್ಕೆ ಮರಳಿ ಬಂದರು ಹಾಗೂ ಅವರು ಕರ್ಮವೀರ ಪತ್ರಿಕೆಯ ಸಂಪಾದಕರೂ ಹಾಗೂ ಪ್ರಕಾಶಕರು ಎಂದು ಪುನಃ ಘೋಷಿಸಿಕೊಂಡರು. ಕರ್ಮವೀರ ಪತ್ರಿಕೆಯ ಯಾವುದೇ ವಿಷಯವು ಯಾರದೇ ಭಯ ಹಾಗೂ ಬೆದರಿಕೆ ಇಲ್ಲದೇ ಎಂದಿನಂತೆಯೇ ಮುಂದುವರೆಯತೊಡಗಿತ್ತು.

೧೯೨೩ ಜನೆವರಿ ತಿಂಗಳಲ್ಲಿ ದಿವಾಕರರು ಬಂಧಮುಕ್ತರಾದರೂ ಅವರು ಹೊರಗಡೆ ಇದ್ದದ್ದು ಹತ್ತು ತಿಂಗಳು ಮಾತ್ರ. ಅದೇ ವರ್ಷದ ಕೊನೆಯಲ್ಲಿ ರಾಜದ್ರೋಹದ ಅಪರಾಧಕ್ಕಾಗಿ ಬ್ರಿಟಿಷ್ ಸರಕಾರದವರು ಪುನಃ ಬಂಧಿಸಿದರು.

■

# ಸಂಯುಕ್ತ ಕರ್ನಾಟಕದ ಕಥೆ

''ಸಂಯುಕ್ತ ಕರ್ನಾಟಕ'' ಜನರೇ ಕಟ್ಟಿದ, ಬೆಳೆಸಿದ ಪತ್ರಿಕೆ. ಅಕ್ಷಯ ತೃತೀಯದಂದು ಜನ್ಮ ತಳೆದ ಈ ಘನವಂತ ಪತ್ರಿಕೆಯ ಕೀರ್ತಿಯೂ ಅಕ್ಷಯ.

ಗಡಿನಾಡಿನ ಬೆಳಗಾವಿಯಲ್ಲಿ ಜನ್ಮ ತಳೆದು ಕರ್ನಾಟಕದ ಹೃದಯದಂತಿರುವ ಹುಬ್ಬಳ್ಳಿಗೆ ಬಂದು ರಾಜ್ಯದ ಸೇವೆಗಾಗಿ ರಾಜಧಾನಿ ಬೆಂಗಳೂರಲ್ಲಿ ನೆಲೆಸಿ, ಕಲ್ಯಾಣ ನಾಡಿನ ಕಲಬುರ್ಗಿ, ತುಂಗ-ಭದ್ರೆಯರ ದಾವಣಗೆರೆ, ಹಾಗೂ ಕರಾವಳಿಯ ಮಂಗಳೂರಿನವರೆಗೆ ನಡೆದುಬಂದ ದಾರಿಯೇ ಅಪ್ರತಿಮ. ರೋಚಕ.

ಸಂಯುಕ್ತ ಕರ್ನಾಟಕವು ಹುಟ್ಟಿಕೊಂಡಿದ್ದೇ ದೇಶದ ಸ್ವಾತಂತ್ರ್ಯಕ್ಕಾಗಿ. ಆ



ಬೆಳಗಾವಿಯಿಂದ ೨೭.೦೪.೧೯೩೩ ರಂದು ಪ್ರಕಟಗೊಂಡ ಸಂಯುಕ್ತ ಕರ್ನಾಟಕ ಪತ್ರಿಕೆಯ ಮೊದಲ ಪುಟ.
ನಾಲ್ಕು ಪುಟಗಳ ಈ ಪತ್ರಿಕೆಯ ಬೆಲೆ ಎರಡು ಬಿಲ್ಲೆ ಅಂದರೆ ಈಗಿನ ಮೂರು ಪೈಸೆ.


ಕಾರ್ಯದಲ್ಲಿ ಅದು ಯಶಸ್ವಿಯೂ ಆಯಿತು. ಆದರೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಬ್ರಿಟಿಷ್ ಆಳರಸರು ಪತ್ರಿಕೆಗೆ ಮತ್ತು ಪತ್ರಿಕೆ ನಡೆಸುತ್ತಿದ್ದ ಸ್ವಾತಂತ್ರ್ಯಯೋಧರಿಗೆ ಕೊಟ್ಟ ಕಷ್ಟ ಅಷ್ಟಿಷ್ಟಲ್ಲ. ಅದೆಲ್ಲವನ್ನು ಪತ್ರಿಕೆ ಎದುರಿಸಿಕೊಂಡೇ ಬಂದಿತು. ಮೇಲಿಂದ ಮೇಲೆ ಗದಾ ಪ್ರಹಾರ, ಪ್ರಕಟಣೆಗೆ ನಿರ್ಬಂಧ. ಸಂಪಾದಕರು ಮತ್ತು ಕಾರ್ಯಕರ್ತರಿಗೆ ಜೈಲುವಾಸ, ಅನೇಕ ಬಾರಿ ಹೆಸರು ಬದಲಾಯಿಸಿ ಪತ್ರಿಕೆ ಹೊರ ತರುವ ತಟವಟ. ಈ ಹಂತದಲ್ಲಿ ರಂಗನಾಥ ದಿವಾಕರ ಅವರದು ಒಂದೇ ಗುರಿ. ದೇಶದ ಸ್ವಾತಂತ್ರ್ಯ ಹಾಗೂ ಕರ್ನಾಟಕದ ಏಕೀಕರಣ. ಸಂಯುಕ್ತ ಕರ್ನಾಟಕ ಪತ್ರಿಕೆ ನಡೆಸಿದ ಹೋರಾಟ ಹಾಗೂ ಜಾಗೃತಿಯ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತಲ್ಲದೇ ಹರಿದು ಹಂಚಿ ಹೋಗಿದ್ದ ಕನ್ನಡ ನಾಡು ಒಂದಾಯಿತು.

ಸಂಯುಕ್ತ ಕರ್ನಾಟಕ ದೈನಿಕ ಪತ್ರಿಕೆ, ಕರ್ಮವೀರ ವಾರ ಪತ್ರಿಕೆ ಹಾಗೂ ಕಸ್ತೂರಿ ಮಾಸ ಪತ್ರಿಕೆಯನ್ನು ಈಗ ಲೋಕ ಶಿಕ್ಷಣ ಟ್ರಸ್ಟ್ ಪ್ರಕಟಿಸುತ್ತಿದೆ. ಹುಬ್ಬಳ್ಳಿ - ಬೆಂಗಳೂರು - ಗುಲ್ಬರ್ಗಾ - ದಾವಣಗೆರೆ ಹಾಗೂ ಮಂಗಳೂರುಗಳಲ್ಲಿ ಪತ್ರಿಕೆಯ ಮುದ್ರಣ ಆಗುತ್ತಿದೆ. ಈಗ ಸುಮಾರು ೬೦೦ ಜನ ಕಾರ್ಮಿಕರು ಈ ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ತನ್ಮೂಲಕ ರಾಜ್ಯದ ಆರು ಕೋಟಿ ಜನ ಕನ್ನಡಿಗರ ಸೇವೆಯನ್ನು ಪತ್ರಿಕಾ ಸಮೂಹ ಮಾಡುತ್ತಲಿದೆ. ಹಾಗೆ ನೋಡಿದರೆ ಸ್ವಾತಂತ್ರ್ಯ ಸಾಧನೆಗಾಗಿ ಲೋಕಮಾನ್ಯ ಟಿಳಕರ ಕೇಸರಿಯ ಹಾಗೆ ಕನ್ನಡದಲ್ಲಿ ಒಂದು ಪತ್ರಿಕೆ ಬೇಕೆಂಬುದು ದಿವಾಕರ ರಂಗರಾಯರ ವಿಚಾರವಾಗಿತ್ತು. ಆ ಹಿನ್ನೆಲೆಯಲ್ಲಿಯೇ ಅವರು ಕರ್ಮವೀರ ವಾರ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಹುಬ್ಬಳ್ಳಿಯಲ್ಲಿ ೧೯೨೫ ಆಗಸ್ಟ ದಿನಾಂಕ ೧ ರಂದು ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟ ಎಂಬ ಒಂದು ಸಂಸ್ಥೆಯನ್ನು ನೋಂದಾಯಿಸಲಾಯಿತು. ಇದು ವಾಸ್ತವಿಕವಾಗಿ ಲೋಕಶಿಕ್ಷಣ ಟ್ರಸ್ಟ್ ಎಂದು ಈಗ ಕರೆಯಲಾಗುವ ಟ್ರಸ್ಟಿನ ಮೂಲ ಸಂಸ್ಥೆ. ಆಗ ಇದರ ಆಸ್ತಿ ಕೇವಲ ೪,೫೦೦ ರೂಪಾಯಿಗಳಷ್ಟಾಗಿತ್ತು. ಅಗಸ್ಟ ದಿನಾಂಕ ೧ ಸ್ವಾತಂತ್ರ್ಯ ಹೋರಾಟಗಾರರಿಗೆಲ್ಲ ಪವಿತ್ರವಾದ ದಿನಾಂಕವಾಗಿತ್ತು ಏಕೆಂದರೆ ಅದು ತಿಲಕರ ಪುಣ್ಯತಿಥಿಯಾಗಿತ್ತು. ಲೋಕಶಿಕ್ಷಣ ಟ್ರಸ್ಟ್ ವಿದ್ಯುಕ್ತವಾಗಿ ಅಸ್ತಿತ್ವಕ್ಕೆ ಬಂದಿದ್ದು ೧೯೩೩ ರ ಅಗಸ್ಟ ೧ ರಂದು. ಕನ್ನಡ ದೈನಿಕ ಮತ್ತು ವಾರ ಪತ್ರಿಕೆಗಳನ್ನು ಸ್ಥಾಪಿಸಬೇಕೆಂಬ ಕನಸನ್ನು ದಿವಾಕರರು ಯರವಡಾ ಜೇಲಿನಲ್ಲಿ ೧೯೨೪ ರ ಸುಮಾರು ಕಂಡಿದ್ದರು. ಇದಕ್ಕೆ ಅವರಿಗೆ ಸಾಥ್ ಒದಗಿಸಿದವರು ಮೊಹರೆ ಹನುಮಂತರಾಯರು. ಒಂದು ರೀತಿಯಿಂದ ಒಬ್ಬರು ತುಂಗೆ ಯಾದರೆ ಇನ್ನೊಬ್ಬರು ಭದ್ರೆಯಂತೆ ಜೊತೆಗೂಡಿ ಪತ್ರಿಕಾ ರಂಗದಲ್ಲಿ ತುಂಗಭದ್ರೆಯಾದರೆನ್ನಬಹುದು. ೧೯೨೧ ರಲ್ಲಿ ಹುಟ್ಟಿದ ಕರ್ಮವೀರ, ರಾಷ್ಟ್ರೀಯ ಶಿಕ್ಷಣ ಜೊತೆಗೆ ಸ್ವಾತಂತ್ರ್ಯ ಹೋರಾಟದ ಹಾಗೂ ಕರ್ನಾಟಕ ಏಕೀಕರಣದ ಬಗ್ಗೆಯೂ ಪ್ರಚುರಪಡಿಸುತ್ತಲೇ ಬಂದಿತು. ಆದರೂ ಕೂಡ ಮುಂಬೈ ಕರ್ನಾಟಕ ಹಾಗೂ ವಿವಿಧ ಸಂಸ್ಥಾನಿಕರ ಪ್ರದೇಶದಲ್ಲಿದ್ದ ಕನ್ನಡ ಭಾಷಿಕರ ಬಗ್ಗೆ

ಸ್ವಾತಂತ್ರ್ಯ ಹೋರಾಟದ ಕೆಚ್ಚನ್ನು ಪ್ರಚುರಪಡಿಸಬೇಕಿತ್ತು. ಸುಮ್ಮನೆ ಮಲಗಿ ನಿದ್ರಿಸುತ್ತಿದ್ದ ಹಾಗೂ ಧುರೀಣರು ಬಂದಾಗ ಮಾತ್ರ ಎಚ್ಚರವಾಗುತ್ತಿದ್ದ ಸಾಮಾನ್ಯ ಜನತೆಯ ಚಿತ್ತವನ್ನು ಸತತ ಜಾಗೃತಗೊಳಿಸಬೇಕಿತ್ತು.

೧೯೨೪ ರಲ್ಲಿ ಕಾಂಗ್ರೆಸ್ ಅಧಿವೇಶನ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದದ್ದು ಮುಂಬೈ ಕರ್ನಾಟಕ ಭಾಗಕ್ಕೆ ಹೊಸಬಲ ತಂದು ಕೊಟ್ಟಿತ್ತು. ಸ್ವಾತಂತ್ರ್ಯದ ಕಹಳೆ ಕನ್ನಡದ ನೆಲದಿಂದ ಗಟ್ಟಿಯಾಗಿ ಊದಲ್ಪಟ್ಟಿತ್ತು. ಕೇಸರಿ ಪತ್ರಿಕೆಯ ಆಗಿನ ಸಂಪಾದಕರೂ ಮಹಾರಾಷ್ಟ್ರದ ಪ್ರಖ್ಯಾತ ಮುಖಂಡರು ಆಗಿದ್ದ ನ.ಚಿ. ಕೇಳಕರ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಹೇಳಿದ್ದರು. ಹೀಗಾಗಿ ಕರ್ನಾಟಕ ಏಕೀಕರಣಕ್ಕೂ ಸಹ ಬೆಳಗಾವಿಯಿಂದಲೇ ಚೇತನ ದೊರಕಿತು. ಈ ಹಿನ್ನಲೆಯಲ್ಲಿಯೇ ೧೯೨೯ ರಲ್ಲಿ ಬೆಳಗಾವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವೂ ಜರುಗಿತು. ಆಗ ಬೆಳಗಾವಿ ವಿಭಾಗ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿತ್ತು. ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ಮತ್ತು ಕರ್ನಾಟಕ ಸಿಂಹ ಎಂದೇ ಜನಪ್ರಿಯರಾಗಿದ್ದ ಗಂಗಾಧರರಾವ್ ದೇಶಪಾಂಡೆ, ನಾವೂಂಕಿತ ವಕೀಲ ದಳವಿ ದತ್ತಾತ್ರಯರು, ಬಳವಂತರಾವ್ ದಾತಾರ, ನಾರಾಯಣರಾವ್ ಜೋಶಿ, ಡಾ. ಸವಣೂರ, ಡಾ. ತೆರಗುಂಡಿ, ವಾಮನರಾವ್ ದೇಸಾಯಿ ಬಿದರಿ, ಮುಂತಾದವರು ಸಹ ಚಳುವಳಿಯಲ್ಲಿ ಅಗ್ರಗಣ್ಯರಾಗಿದ್ದರು. ಇವರೆಲ್ಲ ಕನ್ನಡ ಧುರೀಣರು ಹಾಗೂ ದಿವಾಕರರು ಸೇರಿ ವಂತಿಗೆ ಸಂಗ್ರಹಿಸಿ ಕರ್ನಾಟಕ ಪ್ರಕಾಶನ ಮಂಡಳ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ತನ್ಮೂಲಕ ಸಂಯುಕ್ತ ಕರ್ನಾಟಕ ಎಂಬ ಶಿರೋನಾಮೆಯಲ್ಲಿ ಪತ್ರಿಕೆಯನ್ನು ೧೯೨೯ ರ ದಸರೆಯ ದಿನ ಪ್ರಾರಂಭಿಸಿದರು. ಇದಕ್ಕೆ ವಕೀಲರಾಗಿದ್ದ ಶೇಷೋ ಗಿರಿಯಾಚಾರ್ಯ ಕಟ್ಟಿಯವರು ಸಂಪಾದಕರಾದರು. ಇವರಿಗೆ ಸಹಾಯಕರಾಗಿ ಅನಂತ ಚಿಕ್ಕೋಡಿಯವರು, ಕೃಷ್ಣಾಜಿ ಗೆಜ್ಜಿ, ವೆಂಕಟರಾವ ಪಂಡಿತ, ದಾತಾರ ಬಳವಂತರಾಯರು ಮುಂತಾದವರಿದ್ದರು. ದಿವಾಕರರಂತೂ ಪತ್ರಿಕೆಯ ಹೃದಯದ ಮಿಡಿತವಾಗಿದ್ದರು. ಆಗಿನ ಪತ್ರಿಕೋದ್ಯಮವೆಂದರೆ ಸ್ವಾತಂತ್ರ್ಯ ಹೋರಾಟದ ಒಂದು ಭಾಗವೆಂದೇ ತಿಳಿಯಲಾಗುತ್ತಿತ್ತು. ಎಲ್ಲರೂ ಕೂಡಿ ಕೆಲಸ ಮಾಡಬೇಕು. ಹಾಗೂ ಸಂಪಾದಕನ ಸ್ಥಾನಕ್ಕೆ ಒಬ್ಬನ ಹೆಸರಿರಬೇಕಿತ್ತು ಎಂದು ಭಾವಿಸಲಾಗುತ್ತಿತ್ತು. ಸಂಯುಕ್ತ ಕರ್ನಾಟಕವನ್ನು ಕಟ್ಟಿದ ಜನ ಅಪ್ಪಟ ದೇಶಭಕ್ತರಾಗಿದ್ದರು. ಹಾಗೂ ಅಲ್ಲಿ ಕೆಲಸ ಮಾಡುವವರು ನೌಕರರೆಂದು ತಾವು ಭಾವಿಸುತ್ತಿರಲಿಲ್ಲ. ಪತ್ರಿಕೆಯ ವರದಿಗಾರರಾಗಿರಲಿ, ಏಜೆಂಟರಾಗಿರಲಿ ಎಲ್ಲರೂ ತಮ್ಮನ್ನು ಕಾರ್ಯಕರ್ತರೆಂಬ ಅಭಿಮಾನದ ಉಪಮೆಯೊಂದಿಗೆ ಗುರುತಿಸಿಕೊಳ್ಳುತ್ತಿದ್ದರು. ಈ ಪರಂಪರೆ ಲೋಕಶಿಕ್ಷಣ ಟ್ರಸ್ಟಗೆ ವಿವಾದ ಉಂಟಾದ ೧೯೭೪ ರ ವರೆಗೂ ಮುಂದುವರೆದಿತ್ತು. ಆಗ ಎಲ್ಲ ಈ ಕಾರ್ಯಕರ್ತರ ವೇಷವೂ ಮುಕ್ಕಾಲು ಭಾಗ ಖಾದಿಯೇ

ಆಗಿತ್ತು. ಜನ ಸಂಯುಕ್ತ ಕರ್ನಾಟಕವನ್ನು ಓದುವುದು ಅದನ್ನು ಹಂಚುವುದು ಅದರಲ್ಲಿ ಕೆಲಸ ಮಾಡುವುದು ದೇಶಾಭಿಮಾನದ ಕರ್ತವ್ಯವೆಂದೇ ತಿಳಿದಿದ್ದರು. ಇಂಥಹ ಜನರ ತ್ಯಾಗ, ಪ್ರಾಮಾಣಿಕ ಸೇವೆಯಿಂದಲೇ ಸಂಯುಕ್ತ ಕರ್ನಾಟಕದ ಬೇರುಗಳು ಕನ್ನಡದ ನೆಲದಲ್ಲಿ ಆಳವಾಗಿ ಬೇರೂರಿವೆ. ಹೀಗಾಗಿ ಹಲವಾರು ಸುನಾಮಿಗಳಂತಹ ಚಂಡ ಮಾರುತಗಳು ಬೀಸಿದ್ದರೂ ಸಂಯುಕ್ತ ಕರ್ನಾಟಕ ಈಗಲೂ ಭದ್ರವಾಗಿಯೇ ಉಳಿದಿದೆ.




14.11.1924 ಕರ್ಮವೀರ ಪತ್ರಿಕೆಯ ಮುಖಪುಟ

೧೯೩೦ ರಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭವಾಗಿ ಅನೇಕ ಮುಖಂಡರು ಸೆರೆಮನೆಗೆ ಸೇರಿದರು. ಕೆಲವೇ ದಿನಗಳಲ್ಲಿ ಪ್ರೆಸ್ ಆರ್ಡಿನನ್ಸ್ ಹೊರಟಿದ್ದರಿಂದ ಆ ವರೆಗೆ ಸಾಪ್ತಾಹಿಕವಾಗಿದ್ದ ಸಂಯುಕ್ತ ಕರ್ನಾಟಕದ ಮುದ್ರಣವನ್ನು ನಿಲ್ಲಿಸಲಾಯಿತು. ಆದರೆ ಇಂಥಹ ಉಜ್ವಲ ರಾಷ್ಟ್ರೀಯ ಪತ್ರಿಕೆ ನಿಂತಿದ್ದು ಹಲವು ರಾಷ್ಟ್ರಾಭಿಮಾನಿಗಳಿಗೆ ಕಳವಳ ಉಂಟು ಮಾಡಿತು. ಆದರೆ ವಿಚಾರ ವಿನಿಮಯ ಮಾಡುವುದನ್ನು ಬಿಟ್ಟು ಬೇರೆ ಏನೂ ಮಾಡುವ ಹಾಗಿರಲಿಲ್ಲ. ೧೯೩೩ ರ ವರೆಗೆ ಇದೇ ರೀತಿ ನಡೆಯಿತು. ಬೇರೆ ಬೇರೆ ಕಡೆಯ ಬೇರೆ ಬೇರೆ ಭಾಷೆಯ ಧುರೀಣರು ತಾವು ಬಂಧಿತರಾಗಿದ್ದರೂ ಸಹ ಕಾರಾಗೃಹದಲ್ಲಿಯೇ ಸಂಯುಕ್ತ ಕರ್ನಾಟಕದ ಪುನರಾರಂಭಕ್ಕೆ ಚಿಂತಿಸತೊಡಗಿದರು. ಆಗ ಬೆಳಗಾವಿಯ ಹಿಂಡಲಗಾ ಜೇಲಿನಲ್ಲಿ ದಿವಾಕರ ರಂಗರಾಯರು ಯರವಡಾ ಜೇಲಿನಲ್ಲಿ ಮೊಹರೆ ಹನುಮಂತರಾಯರು, ಮಂಗಳವೇಡಿ ಶ್ರೀನಿವಾಸರಾಯರು, ನಾಸಿಕ ಜೇಲಿನಲ್ಲಿದ್ದ ಕೇಶವರಾವ್ ಗೋಖಲೆ, ನಾರಾಯಣರಾವ ಜೋಶಿ, ಬಳವಂತರಾವ್ ದಾತಾರ

ಮತ್ತಿತರರೆಲ್ಲ ಏಕಕಾಲಕ್ಕೆ ಏಕೀಕೃತ ಕರ್ನಾಟಕ ಮತ್ತು ಸ್ವತಂತ್ರ ಭಾರತದ ಕನಸನ್ನು ಕಂಡಿದ್ದರು.

ಕೇವಲ ಸಾಪ್ತಾಹಿಕ ಪ್ರಕಟಣೆಯಿಂದ ಸ್ವಾತಂತ್ರ್ಯದ ಗುರಿ ಮತ್ತು ಕರ್ನಾಟಕ ಏಕೀಕರಣದ ಸಾಧನೆ ಆಗಲಾರದು. ಶೀಘ್ರವೇ ದೈನಿಕ ಪತ್ರಿಕೆಯೊಂದನ್ನು ಪ್ರಾರಂಭಿಸಬೇಕೆಂಬ ಅಭಿಪ್ರಾಯ ಎಲ್ಲ ಕಾರಾಗೃಹವಾಸಿಗಳಲ್ಲಿ ಏಕ ಪ್ರಕಾರವಾಗಿ ಮೂಡಿ ಬಂದಿತು. ೧೯೩೩ ರಲ್ಲಿ ಹೆಚ್ಚು ಕಡಿಮೆ ಮೇಲೆ ಹೇಳಿದ ಧುರೀಣರೆಲ್ಲ ಬಿಡುಗಡೆಹೊಂದಿದರು. ಕೇಶವರಾವ ಗೋಖಲೆಯವರು ನಾಸಿಕ ಜೇಲಿನಿಂದ ಬೆಳಗಾವಿಗೆ ಬರುವಾಗ ಉದ್ದೇಶಿತ ಸಿಂಗಲ್ ರಾಯಲ್ ಆಕಾರದ ಒಂದು ಮುದ್ರಣ ಯಂತ್ರವನ್ನು ಕೊಂಡು ತಂದೇ ಬಿಟ್ಟರು. ಮಿತ್ರರೆಲ್ಲರೂ ಸೇರಿ ೮೦೦೦ ರೂಪಾಯಿಗಳನ್ನು ಸಂಗ್ರಹಿಸಿದರು. ಬೆಳಗಾವಿಯಂಥ ಊರಿನಲ್ಲಿ ಕನ್ನಡ ದಿನಪತ್ರಿಕೆ ಹೊರಡಿಸುವುದು ತೀರಾ ಕಠಿಣವಿತ್ತು. ಆದರೂ ೧೯೩೩ ಎಪ್ರಿಲ್ ೨೭ ರಂದು ಅಕ್ಷಯ ತೃತೀಯಾದ ಶುಭ ದಿನದ ಶುಭ ಮುಹೂರ್ತದಲ್ಲಿ ಬೆಳಗಾವಿಯವರೇ ಆದ ಬೆಳವಿ ದತ್ತರಾಯರ ಅಮೃತ ಹಸ್ತದಿಂದ ಮೊದಲ ಸಂಚಿಕೆಯ ಮೊದಲ ಪ್ರತಿ ಪ್ರಕಟವಾಯಿತು. ಈ ಸಮಾರಂಭ ನಡೆದಿದ್ದು ಬೆಳಗಾವಿಯ ಮಾರುತಿ ಗಲ್ಲಿಯ ಒಂದು ಸಣ್ಣ ಮನೆಯಲ್ಲಿ. ಆಗ ಕೇಸರಿ ಪತ್ರಿಕೆಯ ಸಂಪಾದಕರಾಗಿದ್ದ ನ.ಚಿ. ಕೇಳಕರ ಕಳಿಸಿದ್ದ ಸಂದೇಶ ಮನನೀಯವಾಗಿದೆ. ಈ ಬಗ್ಗೆ ಅವರಾಡಿದ ಕೆಲ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ.

''ಸುಶಿಕ್ಷಿತರಾದ ಜನರು ಬೆಳವಣಿಗೆಯ ಸ್ಥಿತಿಯಲ್ಲಿರುವ, ವ್ಯಾಪಾರ ಇರುವ ಊರಿನಲ್ಲಿ, ಜಲ ಸಂಶೋಧಕನು ಒಬ್ಬ ಬಂದು ಇಂಥ ಸ್ಥಳದಲ್ಲಿಯೇ ನೀರು ಇರುವುದೆಂದು ಹೇಳಿ ಅಲ್ಲಿಯ ಜನರಿಗೆ ಬಾವಿಯೊಂದನ್ನು ತೋಡಿಕೊಟ್ಟಲ್ಲಿ ಅಲ್ಲಿಯ ಜನರು ಮನಸಾರೆ ಆ ನೀರಿನ ಉಪಯೋಗ ಮಾಡಿಕೊಳ್ಳುವುದು ಸ್ವಾಭಾವಿಕ. ಆದರಂತೆಯೇ ಈಗ ತರುಣ ವರ್ಗದ ಪ್ರಮುಖ ಸಂಶೋಧಕರು ಬೆಳಗಾವಿಗೆ ದೊರಕಿರುವರು. ಅಲ್ಲಿಯ ಜನರ ವೃತ್ತ ವಾಚನದ ತೃಷೆಯನ್ನು ತೃಪ್ತಿಗೊಳಿಸುವುದಕ್ಕಾಗಿ ಝರಿಯೊಂದನ್ನು ನಿರ್ಮಾಣ ಮಾಡಿರುವರು. ನದಿಯ ಉಗಮವು ಕೇವಲ ಬೊಟ್ಟಿನಷ್ಟು ಅಗಲವಾಗಿದ್ದರೂ ಹಲವು ಬೇರೆ ಬೇರೆ ಉಗಮಗಳ ಸಹಾಯದಿಂದ ಅದರ ಮುಖವು ಅದೆಷ್ಟೋ ವಿಸ್ತೀರ್ಣವಾಗುವುದಷ್ಟೇ, ಆದರಂತೆಯೇ ಬೆಳಗಾವಿಯಿಂದ ಹೊರಡುವ ಈ ದೈನಿಕದ ಪ್ರಸಾರವು ಆರಂಭಕ್ಕೆ ವಿಶೇಷವಾಗದಿದ್ದರೂ ಅದು ಗ್ರಾಮಸ್ಥ ಹಾಗೂ ಪರಸ್ಥಳ ಜನರ ಆಶ್ರಯದಿಂದ ಬೇಗನೇ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ....''

''ಮಾತೃಭಾಷೆಯಲ್ಲಿಯ ದೈನಿಕ ಪತ್ರಿಕೆಯೊಂದು ಬೆಳಗಾವಿಯಲ್ಲಿ ಇಲ್ಲದ್ದರಿಂದ ಬಹಳೇ ಕೊರತೆಯಾದಂತಾಗಿತ್ತು. ಆದರೆ ಕನ್ನಡ ಮುಂದಾಳುಗಳು ಒಂದು ದೈನಿಕ ಪತ್ರಿಕೆಯನ್ನು ಹೊರಡಿಸಿ ತಮ್ಮ ಪ್ರಾಂತೀಯ ಜನಗಳ ತೊಂದರೆ, ಅವಶ್ಯಕತೆ ತಕರಾರು ಮುಂತಾದವುಗಳನ್ನು ಮತ್ತು ಅಧಿಕಾರಿ ವರ್ಗದ ಜನರಿಂದಾಗುವ ಸಮಸ್ಯೆಗಳನ್ನು

ಪ್ರಕಟಿಸಲಿಕ್ಕೆ ಆಶ್ರಯ ಸ್ಥಾನವನ್ನು ಕೊಟ್ಟಿರುವರು. ಇಷ್ಟೇ ಅಲ್ಲ, ಎಲ್ಲರಿಗೆ ಎಲ್ಲ ರೀತಿಯಿಂದಲೂ ಆಶ್ರಯ ದೊರಕಬೇಕೆಂದು ಸಂಪಾದಕರು ತಮ್ಮ ಪತ್ರಿಕೆಯನ್ನು ಮಾತೃಭಾಷೆಯಲ್ಲಿ ಅಂದರೆ ಕನ್ನಡದಲ್ಲಿ ಹೊರಡಿಸಿರುವರು. ಮಾತೃಭಾಷೆ ಸೇವೆ ಮಾಡುವುದೆಂದರೆ ಸಾಕ್ಷಾತ್ ಮಾತೆಯ ಸೇವೆ ಮಾಡಿದಂತೆಯೇ''.

ಮೊಟ್ಟ ಮೊದಲ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರು ಕಟ್ಟಿ ಶೇಷಾಚಾರ್ಯರೇ ಆಗಿದ್ದರು. ನಾಲ್ಕು ಪುಟಗಳಿದ್ದ ಆ ಪತ್ರಿಕೆಯ ಬೆಲೆ ಆಗಿನ ಕಾಲಕ್ಕೆ ಒಜಬಿಟಬಿರಿ ಬಿಲ್ಲಿ ಅಂದರೆ ಹೆಚ್ಚು ಕಡಿಮೆ್ದುಬಿರಿಲಜಬಿರಿ ಪೈಸೆಯಷ್ಟಾಗಿತ್ತು.

ಸಂಯುಕ್ತ ಕರ್ನಾಟಕವೇನೂ ಪ್ರಾರಂಭವಾಗಿತ್ತು. ಆದರೆ ಅಂಥ ಸ್ವಾತಂತ್ರ್ಯ ಹೋರಾಟದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನಿತ್ಯವೂ ಇದನ್ನು ಹೊರತರುವುದು ಹೇಗೆ ಎಂಬ ಚಿಂತೆಯೇ ಅಧಿಕವಾಗಿತ್ತು. ಆಗ ನಿತ್ಯವೂ ಮುಂಬೈಯಿಂದ ಬಿಸಿ ಬಿಸಿ ಸುದಿಗಳನ್ನೊಳಗೊಂಡ ಎರಡು ಟೆಲಿಗ್ರಾಂಗಳನ್ನು ಬೆಳಗಾವಿಗೆ ತರಿಸಲಾಗುತ್ತಿತ್ತು. ಮುದ್ರಣಾಲಯದ ಅತಿಯನುಕೂಲತೆಗಳು ಸಾಕಷ್ಟು ಇದ್ದಿದ್ದರಿಂದ ಹೇರಳವಾಗಿ ತೊಂದರೆಗಳನ್ನು ಅನುಭವಿಸಬೇಕಾಯಿತು. ಹೀಗಾಗುತ್ತಿದ್ದಂತೆಯೇ ಮೊಹರೆ ಹನುಮಂತರಾಯರು ಜೇಲಿನಿಂದ ಬಿಡುಗಡೆ ಹೊಂದಿದರು. ಅವರಿಗೆ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಹೊರತರುವ ಹೊಣೆಯನ್ನು ಹೊರಿಸಲಾಯಿತು. ಆದರೆ ಅವರು ಎಲ್ಲಕ್ಕೂ ಮಿಗಿಲಾಗಿ ದಿವಾಕರ ರಂಗರಾಯರ ಸಂಗಡ ಈ ವಿಷಯವನ್ನು ಚರ್ಚೆ ಮಾಡಿಯೇ ಮುಂದುವರೆಯುವುದಾಗಿ ಹೇಳಿದರು. ಆಗ ಹಿಂಡಲಗಿ ಜೇಲಿನಲ್ಲಿದ್ದ ದಿವಾಕರರನ್ನು ಕಾಣಲು ಮೊಹರೆಯವರು ಹೋದರು ಪತ್ರಿಕೆಯ ವಿಷಯದ ಬಗ್ಗೆ ಚರ್ಚಿಸಿದರು. ಕರ್ನಾಟಕ ಪ್ರಕಾಶನ ಮಂಡಳದ ಸಭೆಯನ್ನು ಕಾಲ ಕಾಲಕ್ಕೆ ಕರೆದು ಪತ್ರಿಕೆಯ ವಿಷಯವಾಗಿ ಚರ್ಚಿಸಲಾಗುತ್ತಿತ್ತು., ಆದರೂ ಸಹ ಸ್ವಾತಂತ್ರ್ಯ ಹೋರಾಟದ ಈ ಪ್ರಖರ ದಿನಗಳಲ್ಲಿ ಯಾರಿಗೂ ಸಹ ದಿನದ ೨೪ ಗಂಟೆಗಳೂ ಕಾಲ ಪತ್ರಿಕೆಯ ದೇಖರೇಕಿ ನೋಡಿಕೊಳ್ಳಲು ಆಗುತ್ತಿರಲಿಲ್ಲ, ಜೊತೆಗೆ ನೌಕರದಾರರಿಗೆ ಸೂಕ್ತ ಸಂಬಳ ಕೊಡುವ ಸಾಮರ್ಥ್ಯವೂ ಇರಲಿಲ್ಲ. ಕೊನೆಗೆ ಮೊಹರೆಯವರು ಆಗ ನಡೆಸುತ್ತಿದ್ದ ಕರ್ನಾಟಕ ವೈಭವ ಪತ್ರಿಕೆಯನ್ನು ಮುಚ್ಚಿ ಸಂಯುಕ್ತ ಕರ್ನಾಟಕದ ನೇತೃತ್ವವನ್ನು ವಹಿಸಿಕೊಳ್ಳಬೇಕೆಂದು ವಿನಂತಿಸಲಾಯಿತು. ಏತನ್ಮಧ್ಯೆ ಎಚ್.ಆರ್. ತೆರಗುಂಡಿಯವರು ಪತ್ರಿಕೆಯ ಸಂಪಾದಕರಾಗಿದ್ದರು.

೧೯೩೪ ರ ಫೆಬ್ರುವರಿಯಲ್ಲಿ ಮೊಹರೆಯವರು ಸಂಪಾದಕರಾಗಿ ಸಂಯುಕ್ತ ಕರ್ನಾಟಕ ಪತ್ರಿಕೆಯ ಪೂರ್ಣ ಜವಾಬ್ದಾರಿ ವಹಿಸಿಕೊಂಡರು. ಈ ಮೊದಲು ಮಾರುತಿ ಗಲ್ಲಿಯಲ್ಲಿದ್ದ ಮುದ್ರಣಾಲಯವನ್ನು ಬೆಳಗಾವಿಯ ಖಡೇ ಬಜಾರ ಹತ್ತಿರ ಚವ್ಹಾಣ ಬಿಲ್ಡಿಂಗ್‌ಗೆ ಸ್ಥಳಾಂತರಿಸಲಾಯಿತು. ಮೊಹರೆಯವರು ಅಲ್ಲಿಯೇ ಇರುತ್ತಿದ್ದರು. ಎಂಥ ಕಠಿಣ ಪರಿಸ್ಥಿತಿ ಬಂದರೂ ಪತ್ರಿಕೆಯನ್ನು ಮುಂದೆ ನಡೆಸಬೇಕೆಂಬ ಛಲ

ಮೊಹರೆಯವರಲ್ಲಿತ್ತು. ಇದಕ್ಕೆ ಪೂರಕವಾಗಿ ಜೇಲಿನಲ್ಲಿದ್ದರೂ ದಿವಾಕರರು ಆತ್ಮಸಾಕ್ಷಿ ಬೆಂಬಲ ಸಂಯುಕ್ತ ಕರ್ನಾಟಕದ ಮೇಲಿತ್ತು. ಯಾವುದೇ ಸಂಪೂರ್ಣ ವ್ಯವಸ್ಥೆ ಅಲ್ಲಿರಲಿಲ್ಲ. ಸಂಪಾದಕರೆಂಬ ಹುದ್ದೆಯನ್ನು ಮೊಹರೆಯವರು ಹೊತ್ತಿದ್ದರೂ ದಿನನಿತ್ಯದ ಅವರ ಊಟೋಪಚಾರಗಳಿಗೂ ತೊಂದರೆ ಉಂಟಾಗುತ್ತಿತ್ತು. ಆರೋಗ್ಯ ಎಷ್ಟೇ ಕೆಟ್ಟರೂ ಅವರು ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಲಿಲ್ಲ. ಇಂಥ ಪರಿಸ್ಥಿತಿಯಲ್ಲಿಯೇ ತಮ್ಮಲ್ಲಿದ್ದ ಕೈಗಡಿಯಾರದ ಬಂಗಾರದ ಸರಪಳಿಯನ್ನು ಒತ್ತೆ ಇಟ್ಟು ಹಣ ತಂದು ಪತ್ರಿಕೆಯ ಪ್ರಕಟಣೆಯನ್ನು ಮುಂದುವರೆಸಿದರು. ಏತನ್ಮಧ್ಯೆ ವಿ.ಬಿ. ಕುಲಕರ್ಣಿ, ಹ.ರಾ. ಪುರೋಹಿತರನ್ನು ಬೆಳಗಾವಿಗೆ ಕರೆಸಿಕೊಂಡರು.

೧೯೩೪ ನೇ ಇಸ್ವಿಯಲ್ಲಿ ಕಾಂಗ್ರೆಸ್ಸು ಕಾಯ್ದೆ ಮಂಡಳ ಬಹಿಷ್ಕಾರವನ್ನು ರದ್ದುಗೊಳಿಸಿ ಕೇಂದ್ರ ಅಸೆಂಬ್ಲಿ ಚುನಾವಣೆಗೆ ಅಭ್ಯರ್ಥಿಗಳನ್ನು ನಿಲ್ಲಿಸಿತು. ಆಗ ಸಂಯುಕ್ತ ಕರ್ನಾಟಕ ಪತ್ರಿಕೆ ಈ ಭಾಗದಲ್ಲಿ ಕಾಂಗ್ರೆಸ್ಸಿನ ಜಯಕ್ಕೆ ಕಾರಣವಾಯಿತು. ಪ್ರಾರಂಭದ ಕಾಲಕ್ಕೆ ಪತ್ರಿಕೆ ಪ್ರಸಾರ ಕೇವಲ ೭೦೦ ಪ್ರತಿಗಳು ಮಾತ್ರ ಇದ್ದವು. ಚುನಾವಣೆ ನಡೆದಂತೆ ಪತ್ರಿಕೆಯ ಪ್ರಸಾರ ಹೆಚ್ಚಾಗತೊಡಗಿತು.

೧೯೩೩ ಎಪ್ರಿಲ್ ೨೭ ರಿಂದ ಪ್ರಾರಂಭವಾದ ಸಂಯುಕ್ತ ಕರ್ನಾಟಕ ಸೋಮವಾರವನ್ನುಳಿದು ಉಳಿದ ದಿನಗಳಲ್ಲಿ ಪ್ರಕಟವಾಗುತ್ತ ಅದೇ ವರ್ಷದ ಜುಲೈ ೧೦ ರಿಂದ ಪ್ರತ್ಯೇಕವಾಗಿ ಅದರ ಸಾಪ್ತಾಹಿಕವೂ ಪ್ರಕಟವಾಗತೊಡಗಿತು. ಬಾಗಲಕೋಟೆಯಲ್ಲಿ ''ಕನ್ನಡಿಗ'' ಪತ್ರಿಕೆಯನ್ನು ನಡೆಸುತ್ತಿದ್ದ ಮಂಗಳವೇಡಿಯ ಶ್ರೀನಿವಾಸರಾಯರು ಅದನ್ನು ಧಾರವಾಡಕ್ಕೆ ಸ್ಥಳಾಂತರಿಸಿ ಕೆಲಕಾಲ ದೈನಿಕ ಪತ್ರಿಕೆಯನ್ನಾಗಿ ನಡೆಸುತ್ತಿದ್ದರು. ಇಡೀ ಪ್ರಾಂತಕ್ಕೆ ಒಂದೇ ಪತ್ರಿಕೆ ಇರುವುದು ಯೋಗ್ಯವೆಂದು ಬಗೆದು ಸಂಯುಕ್ತ ಕರ್ನಾಟಕದಲ್ಲಿ ಅದನ್ನು ಸೇರಿಸಿಕೊಳ್ಳಬೇಕೆಂದು ಮಂಗಳವೇಡಿಯವರಿಗೆ ಕರ್ನಾಟಕ ಪ್ರಕಾಶನ ಮಂಡಳಿಯವರು ವಿನಂತಿಸಿಕೊಂಡರು. ಹೀಗಾಗಿ ಸಂಯುಕ್ತ ಕರ್ನಾಟಕದಲ್ಲಿ ಕನ್ನಡಿಗವು ಸೇರಿ ಒಂದೇ ಪತ್ರಿಕೆಯೂ ಮುಂದುವರೆಯುವಂತಾಯಿತು. ಈ ಒಳಗಾಗಿಯೇ ಕರ್ನಾಟಕ ಮಿತ್ರ, ಹಾಗೂ ಪ್ರಾರ್ಥನೆ ಎಂಬ ಪತ್ರಿಕೆಗಳು ಸಂಯುಕ್ತ ಕರ್ನಾಟಕದಲ್ಲಿ ಸಮ್ಮಿಳನಗೊಂಡಿದ್ದವು.

ದೈನಿಕ ಸಂಯುಕ್ತ ಕರ್ನಾಟಕ ಪತ್ರಿಕೆಯು ೨೭.೦೪.೧೯೩೩ ಪ್ರಾರಂಭವಾದ ದಿನ ಬರೆದ ಅಗ್ರ ಲೇಖನ ಹೀಗಿದೆ.

## ಪುನಶ್ಚ ಹರಿಃ ಓಂ
## ಆತ್ಮ ನಿವೇದನೆ

''ಕನ್ನಡ ನಾಡ ನುಡಿಯ ಸೇವೆಗಾಗಿ ಮೊದಲು ವಾರ ಪತ್ರಿಕೆಯಾಗಿ ಹೊರಡಿಸಲಾದ ಸಂಯುಕ್ತ ಕರ್ನಾಟಕವು ಮೂರುವರೆ ವರ್ಷಗಳ ಅಲ್ಪಾವಧಿಯಲ್ಲಿಯೇ ತನ್ನ ಚಿಕ್ಕ ಸ್ವರೂಪವನ್ನೂ, ಸಂಕುಚಿತ ಕಾರ್ಯಕ್ಷೇತ್ರವನ್ನೂ ದಾಟಿ ದಿನ ಪತ್ರಿಕೆಯಾಗಿಯೇ

ಹೊರಟಿದ್ದನ್ನು ಕಂಡು ಯಾವ ಕನ್ನಡಿಗನಿಗೆ ಸಂತೋಷ ವಾಗದು? ೧೯೨೯ ರ ಒಳಗೆ ವಿಜಯ ದಶಮಿಯ ಸುಮುಹೂರ್ತದಲ್ಲಿ ಹೊರಟ ನಮ್ಮ ಪತ್ರಿಕೆಯ ಮೊದಲಿನ ಸಂಚಿಕೆಯ ಒಳಗೆ ನಾವು ಬರೆದ ಆತ್ಮ ನಿವೇದನೆಯಲ್ಲಿ ನಮ್ಮ ಭಾವಿ ಆಕಾಂಕ್ಷೆಗಳು ಪ್ರಬಲವಾಗಿರುವುದರಿಂದ ಸಂಯುಕ್ತ ಕರ್ನಾಟಕವು ವಾಚಕರ ಉದಾರ ಆಶ್ರಯದಿಂದ ಬೆಳೆಯುತ್ತ ನಡೆಯುವುದೆಂದು ನಾವು ಹಾರೈಸುತ್ತೇವೆ'' ಎಂದು ನಾವು ನುಡಿದಿದ್ದು ಇಷ್ಟರಲ್ಲಿಯೇ ಕೈಗೂಡುವುದೆಂದು ನಮಗಾದರೂ ಅನಿಸಿದ್ದಿಲ್ಲ. ಶ್ರೀ ಭುವನೇಶ್ವರಿ ಮಾತೆಯ ಅನುಗ್ರಹದಿಂದಲೇ ಈ ಮಹಾತ್ ಕಾರ್ಯವು ಅಕ್ಷಯ ತೃತೀಯದ ಇಂದಿನ ಶುಭ ಮುಹೂರ್ತದಲ್ಲಿ ಪ್ರಾರಂಭವಾಗಿದೆ. ಅವಳ ಕೃಪಾಕಟಾಕ್ಷದಿಂದಲೇ ಈ ಕಾರ್ಯವಾದರೂ ಅಕ್ಷಯವಾಗಿರಲಿ.

''ವಾರ ಪತ್ರಿಕೆಯ ಸ್ವರೂಪದಲ್ಲಿದ್ದಾಗ ಸಂಯುಕ್ತ ಕರ್ನಾಟಕವು ಮಾಡಿದ ಜನಸೇವೆಯೂ ಎಲ್ಲರಿಗೂ ಗೊತ್ತುಂಟು. ನಮ್ಮ ಪತ್ರಿಕೆಯು ಬೆಳಕು ಕಂಡ ಸ್ವಲ್ಪಾವಧಿಯಲ್ಲಿಯೇ ಸತ್ಯಾಗ್ರಹದ ಚಟುವಟಿಕೆಗಳು ದೇಶದಲ್ಲಿ ತಲೆದೋರಹತ್ತಿದವು. ಅಂಥ ಬಿಕ್ಕಟ್ಟಿನ ಕಾಲದಲ್ಲಿಯೂ ಸಂಯುಕ್ತ ಕರ್ನಾಟಕವು ಉಜ್ವಲವಾದ ರಾಷ್ಟ್ರೀಯತ್ವವನ್ನು ಕಾಯ್ದುಕೊಂಡು ಅಖಂಡವಾಗಿ ಮೂರುವರೆ ವರ್ಷಗಳವರೆಗೆ ತನ್ನ ಕಾರ್ಯವನ್ನು ಸಾಗಿಸುತ್ತಲೇ ಇದ್ದಿತು. ಆದರೆ ೧೯೩೨ ರಲ್ಲಿ ಮತ್ತೆ ಪ್ರಾರಂಭವಾದ ಸತ್ಯಾಗ್ರಹದ ಸುಂಟರ ಗಾಳಿಯಲ್ಲಿ ಮೊಟ್ಟ ಮೊದಲು ನಮ್ಮ ಪತ್ರಿಕೆಯು ಆಳರಸರ ತುತ್ತಾಯಿತು. ಅಂದಿನಿಂದ ಇಂದಿನವರೆಗೆ ಅದು ಅಜ್ಞಾತವಾಸದಲ್ಲಿಯೇ ಇದ್ದಿತು. ಈಗಿನಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮೊದಲಿನಂತೆಯೇ ಸಂಯುಕ್ತ ಕರ್ನಾಟಕವನ್ನು ಸಾಪ್ತಾಹಿಕವಾಗಿ ಪ್ರಕಟಿಸುವ ವಿಚಾರವನ್ನು ಬದಿಗಿರಿಸಿ ಅದಕ್ಕೆ ದೈನಿಕ ಸ್ವರೂಪ ಕೊಡಲಿಚ್ಛಿಸಿರುವುದು ದೀರ್ಘ ಸಾಹಸ ಎಂದು ನಮ್ಮ ಹಿತಚಿಂತಕರು ಕೂಡ ಅನ್ನುವುದು ಸ್ವಾಭಾವಿಕವಾಗಿದೆ. ಆದರೆ 'ಸಾಹಸೇ ಶ್ರೀಃ ಪ್ರತಿವಸತಿ' ಎನ್ನುವಂತೆ ನಾಡಿನ ಸೇವೆಗಾಗಿ ಉಜ್ವಲವಾದ ಮಹತ್ವಾಕಾಂಕ್ಷೆಯನ್ನು ತಳೆದು ರಭಸದಿಂದ ಮುಂದೆ ಸಾಗುವುದೇ ನಮ್ಮ ಗುರಿಯು. ತದನುಸಾರವಾಗಿ ನಾವು ಈ ಸಾಹಸವನ್ನು ಕೈಕೊಂಡಿರುವೆವು. ನಮ್ಮ ನಾಡಿಗರು ಉದಾರ ಆಶ್ರಯ ಕೊಟ್ಟಲ್ಲಿ ಈ ಕಾರ್ಯವು ಯಶಸ್ವಿ ಪಡೆಯುವದರಲ್ಲಿ ಸಂದೇಹವಿಲ್ಲ.

ಉತ್ತರ ಕರ್ನಾಟಕದಲ್ಲಿ ದಿನ ಪತ್ರಿಕೆಗಳು ತೀರ ವಿರಳ. ವಂಗ, ಮಹಾರಾಷ್ಟ್ರ, ಗುಜರಾತ ಮುಂತಾದ ಇತರ ಪ್ರಾಂತಗಳ ಜನತೆಯಲ್ಲಿ ಸಾಕಷ್ಟು ಜಾಗೃತಿಯಾಗಿ ಸರ್ವಾಂಗ ಸುಂದರವಾದ ದೈನಿಕ ಪತ್ರಿಕೆಗಳು ಪ್ರಕಟವಾಗಹತ್ತಿವೆ. ಕರ್ನಾಟಕದಲ್ಲಾದರೂ ಅಂಥ ಮೇಲ್ತರಗತಿಯ ದಿನ ಪತ್ರಿಕೆಗಳನ್ನು ನಡೆಸಬೇಕೆಂದು ನಾವು ಹಾರೈಸುತ್ತಲಿರುವೆವು. ಆಂಗ್ಲ ಪತ್ರಿಕೆಗಳಂತೆ ಹೊಸ ಸುದ್ದಿಗಳನ್ನು ತಂತಿಯ ಮುಖಾಂತರವಾಗಿ ತರಿಸಿ ಪ್ರಕಟಿಸುವುದು, ಬೇರೆ ಬೇರೆ ವಿಷಯಗಳಲ್ಲಿ ವಿದ್ವತ್‌ಪೂರ್ಣ ಬರಹಗಳನ್ನು ಪ್ರಸಿದಿಸುವುದು ಇವೇ ಮೊದಲಾದ ದಾರಿಗಳಿಂದ ಜನತೆಯ ಮನರಂಜನೆ ಮಾಡುತ್ತ ಅದರೊಡನೆಯೇ ಜ್ಞಾನ ಪ್ರಸಾರ ಸಾಧಿಸಬೇಕೆಂದು ನಾವು ಮನಗಂಡಿರುವೆವು. ಕರ್ನಾಟಕಸ್ಥರೆಲ್ಲರೂ ನಮ್ಮೀ ರಾಷ್ಟ್ರ

ಕಾರ್ಯದಲ್ಲಿ ನೆರವಾಗಬೇಕೆಂದು ನಮ್ಮ ಬಿನ್ನಹ. ನಮ್ಮ ಮುಂದಿನ ಕಾರ್ಯವಾದರೂ ಸುಲಭವಾಗಿರುವುದಿಲ್ಲ. ಆಳರಸರು ಹಾಗೂ ಕಾಂಗ್ರೆಸ್ ಪಕ್ಷದವರು ಇವರ ನಡುವೆ ಹುಟ್ಟಿದ ಒಡಕು ಇನ್ನೂ ತುದಿ ಬಂದಿರುವುದಿಲ್ಲ. ಕನ್ನಡ ನಾಡಿಗೆ ಜೀವಾಳವಾದ ಕರ್ನಾಟಕದ ಏಕೀಕರಣದ ಪ್ರಶ್ನೆಯು ನೆನೆಗುದಿಗೆ ಬಿದ್ದಿದೆ. ಬೆಳಗಾವಿ ಜಿಲ್ಲೆ ಒಳಗಿನ ಕೆಲ ಭಾಗದ ಕನ್ನಡಿಗರಲ್ಲಿ ಕನ್ನಡ ನುಡಿಯ ವಿಷಯವಾಗಿಯೂ ಕನ್ನಡ ನಾಡಿನ ವಿಷಯವಾಗಿಯೂ ಸಾಕಷ್ಟು ಜಾಗ್ರತಿಯಾಗಿರುವುದಿಲ್ಲ. ಇಂಥ ನಿರಾಶೆಯ ಪರಿಸ್ಥಿತಿಯಲ್ಲಿ ನಮ್ಮ ದಿನಪತ್ರಿಕೆಯು ಜನ್ಮವೆತ್ತಿದೆ. ಆದರೂ ನಾವು ನಿರುತ್ಸಾಹಿಗಳಾಗಿರುವುದಿಲ್ಲ. ಜನರಲ್ಲಿ ರಾಷ್ಟ್ರಪ್ರೇಮವನ್ನು, ಸ್ವದೇಶಿ ವಸ್ತುಗಳಲ್ಲಿ ಭಕ್ತಿಯನ್ನು ಬೆಳೆಸಲು ನಾವು ಸರ್ವತಾ ಪ್ರಯತ್ನಿಸುವೆವು.

ಜನರ ಆಕಾಂಕ್ಷೆಗಳನ್ನು ಸ್ಪಷ್ಟವಾಗಿ, ನಿರ್ದಾಕ್ಷಿಣ್ಯದಿಂದಲೂ ಬರೆಯುವೆವು. ಕಾಂಗ್ರೆಸ್ಸು ಹಾಗೂ ಸರಕಾರದವರು ಇವರ ನಡುವೆ ಸನ್ಮಾನ್ಯವಾದ ಸಹ ಕಾರ್ಯವಾಗುವಂತೆ ನಾವು ಮನ ಮುಟ್ಟಿ ಯತ್ನಿಸುವೆವು. ಕರ್ನಾಟಕದ ಏಕೀಕರಣದ ಪ್ರಶ್ನೆಗೆ ಹೊಸ ಚಾಲನೆಯನ್ನು ಕೊಡುವುದು ಗೊತ್ತಾಗಿದೆ. ಬೆಳಗಾವಿಯವರು ಕನ್ನಡ ನುಡಿ ಹಾಗೂ ಕನ್ನಡ ನಾಡು ಇವುಗಳ ವಿಷಯದಲ್ಲಿ ಉತ್ಸಾಹ ಉಳ್ಳವರಾಗಬೇಕೆಂದು ನಮ್ಮ ಪತ್ರಿಕೆಯ ಮುಖಾಂತರವಾಗಿ ನಾವು ಹಗಲಿರುಳು ಪ್ರಯತ್ನ ಪಡುವವರಿದ್ದೇವೆ. ಇವೇ ಮುಂತಾದ ಸಾರ್ವಜನಿಕ ಹಿತದ ಪ್ರಶ್ನೆಗಳನ್ನು ಸಮಾಧಾನಕರವಾಗಿ ಬಿಡಿಸಲು ನಮ್ಮ ಪತ್ರಿಕೆಯು ಮನ ಮುಟ್ಟಿ ಧಾವತಿ ಮಾಡುವುದು.

ನಮ್ಮಲ್ಲಿ ಜಾತಿ ಭಾವನೆಯು ವ್ಯಕ್ತಿ ಮಹಿಮೆಯು ಮಿತಿಮೀರಿ ಬೆಳೆದಿದೆ. ಈ ದೋಷಗಳಿಗೆ ನಮ್ಮ ಪತ್ರಿಕೆಯಲ್ಲಿ ಸ್ಥಾನ ಸಿಗಲಾರದು. ಏಕ ರಾಷ್ಟ್ರೀಯ ವೃತ್ತಿಯಷ್ಟೇ ನಮ್ಮಲ್ಲಿ ಬೆಳೆಯಬೇಕು. 'ರಾಷ್ಟ್ರದೇವೋಭವ' ಎಂಬುದೇ ನಮ್ಮ ಧೋರಣದ ಗುರಿಯು. ಯೋಗ್ಯವಾದ ತತ್ವಗಳ ತಳಹದಿಯ ಮೇಲೆಯೇ ನಮ್ಮಲ್ಲಿಯ ಪಂಗಡಗಳು ರಚಿತವಾಗಬೇಕೆಂದು ನಮ್ಮ ಮತವಿರುತ್ತದೆ.

''ನಾವು ಕೈಕೊಂಡ ಕಾರ್ಯವು ದೊಡ್ಡದು. ಈ ಸಾಹಸವು ನಮ್ಮಿಂದ ಹೇಗೆ ಸಿದ್ಧಿಯನ್ನು ಪಡೆಯಬಹುದೆಂದು ನಮ್ಮ ಮಿತ್ರರು ಸಂಶಯ ಪಡುವುದು ಸ್ವಾಭಾವಿಕವಾಗಿದ್ದರೂ 'ನೋಚ್ಚಾರ್ಥೋ ವಿಫಲೋಪಿ ದೂಷಣಪದಂ ದೂಷ್ಯಸ್ತು ಕಾಲೋ ಲಘುಃ' ಎಂಬುವಂತೆ ಉಜ್ವಲವಾದ ಧ್ಯೇಯವನ್ನು ಮುಟ್ಟಲು ನಾವು ಸರ್ವದಾ ದೀರ್ಘವಾದ ಪ್ರಯತ್ನವನ್ನು ಪಡುವೆವು. ನಮ್ಮ ವಾಚಕರು ಉದಾರ ಆಶ್ರಯ ಕೊಟ್ಟಲ್ಲಿ ನಮ್ಮ ಕಾರ್ಯವು ಸುಲಭವಾಗುವುದು. ರಾಷ್ಟ್ರ ಕಾರ್ಯದಲ್ಲಿ ಕರ್ನಾಟಕವು ಸಾಕಷ್ಟು ಇನ್ನೂ ಮುಂದುವರೆದಿರುವುದಿಲ್ಲ. ಅಲ್ಪಾರಂಭವನ್ನು ಮಾಡಿ ನಿಲ್ಲುವುದು ಶಕ್ಯವಾಗದು. ಭುವನೇಶ್ವರಿ ಮಾತೆಯು ನಮ್ಮ ಕಾರ್ಯವನ್ನು ಅನುಗ್ರಹಿಸಲಿ''.

೧೯೩೨ ಸಂಯುಕ್ತ ಕರ್ನಾಟಕ ಪಾಲಿಗೆ ಪ್ರಾಮುಖ್ಯದ ವರ್ಷ. ಕೇವಲ ಸೇವಾ

ಬುದ್ಧಿಯಿಂದ ಅವಿಶ್ರಾಂತವಾಗಿ ಸಂಬಳವಿಲ್ಲದೆ ದುಡಿಯುವ ಅನುಭವಿಕರೂ, ಪತ್ರಿಕೋದ್ಯಮದ ಭವಿಷ್ಯವನ್ನು ಉಜ್ವಲಗೊಳಿಸಲು ಆಸ್ಥೆ ಉಳ್ಳವರೂ ಮುಂತಾದವರೆಲ್ಲ ಸೇರಿ ಈ ಪತ್ರಿಕೆ ಬೆಳಗಾವಿಯ ಬದಲು ಹುಬ್ಬಳ್ಳಿಗೆ ಸ್ಥಳಾಂತರಗೊಂಡರೆ ಹೇಗೆ ಎಂಬ ಆಲೋಚನೆ ಮಾಡತೊಡಗಿದರು. ಬೆಳಗಾವಿ ಕರ್ನಾಟಕದ ಉತ್ತರ ಗಡಿಯಲ್ಲಿರುವ ಒಂದು ಸ್ಥಳ. ಇದರಿಂದಾಗಿ ಪತ್ರಿಕೆಯ ಪ್ರಸಾರ, ಪ್ರಚಾರಕ್ಕೆ ಬೆಳಗಾವಿ ಬದಲು ಹುಬ್ಬಳ್ಳಿಯೇ ಸೂಕ್ತವೆಂದು ಅವರ ಭಾವನೆ. ಆಗ ಪತ್ರಿಕೆ ಪ್ರಸಾರಕ್ಕೆ ವಿತರಣೆ ಮಾಡಲು ರೇಲ್ವೆ ಒಂದೇ ಸಾಧನವಾಗಿತ್ತು. ಹೀಗಾಗಿ ಹುಬ್ಬಳ್ಳಿಗೆ ಸಂಯುಕ್ತ ಕರ್ನಾಟಕ ಪತ್ರಿಕೆ ಬರುವುದೇ ಉಚಿತ ಎಂಬ ಭಾವನೆ ದಿವಾಕರರಿಗೆ ಹಾಗೂ ಮೊಹರೆಯವರಿಗೆ ಬರತೊಡಗಿತು. ಎಂಟು ಪುಟಗಳ ಡಬಲ್ ಡೆಮಿ ಪತ್ರಿಕೆಯ ಪ್ರಕಟಣೆಯ ಕನಸು ಇಬ್ಬರದಾಗಿತ್ತು. ಹೀಗಾಗಿ ೧೯೩೭ ನೇ ವರ್ಷದ ಶ್ರೀಕೃಷ್ಣ ಜನ್ಮಾಷ್ಟಮಿಯ ಶುಭ ದಿನದಂದು ಸಂಯುಕ್ತ ಕರ್ನಾಟಕ ಪತ್ರಿಕೆ ಹುಬ್ಬಳ್ಳಿಗೆ ಬಂದಿತು. ಆಗ ಪತ್ರಿಕೆಯನ್ನು ಬೆಳಗಿನ ಎಕ್ಸಪ್ರೆಸ್ ರೇಲ್ವೆ ಗಾಡಿಯಿಂದ ಹರಿಹರ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗಗಳಿಗೆ ಕಳಿಸಿಕೊಡಲಾಯಿತು. ಹೀಗಾಗಿ ಅಂದಿನ ಪತ್ರಿಕೆ ಅದೇ ದಿನ ಮಧ್ಯಾಹ್ನ ತಲುಪುವಂತಾಯಿತು. ಇದರ ಜೊತೆಗೆ ಸೊಲ್ಲಾಪುರ ಜೊತೆಗೆ ಹೋಗುವ ರೇಲ್ವೆಗೆ ರಾತ್ರಿ ೧೦ ಗಂಟೆಗೆ ಮುದ್ರಣಗೊಳಿಸಿ ಗದಗ ಹಾಗೂ ಸೊಲ್ಲಾಪೂರ ಜಿಲ್ಲೆಯ ಊರುಗಳಿಗೆ ಇದರ ಜೊತೆಗೆ ಬಳ್ಳಾರಿ ರಾಯಚೂರ ಜಿಲ್ಲೆಗಳಿಗೂ ಪತ್ರಿಕೆಯನ್ನು ಕಳಿಸುವ ವ್ಯವಸ್ಥೆ ಆಗತೊಡಗಿತು. ಇದರಿಂದ ಪತ್ರಿಕೆಯ ವಿಸ್ತಾರ ಹೆಚ್ಚೆಚ್ಚಾಗತೊಡಗಿತು. ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ರಾಜಕೀಯ ಕ್ಷೇತ್ರಗಳಲ್ಲಿ ವಿವಿಧ ಘಟನೆಗಳನ್ನು ಓದಿ ತಿಳಿದುಕೊಳ್ಳುವವರ ಸಂಖ್ಯೆಯೂ ಹೆಚ್ಚತೊಡಗಿತು.

೧೯೩೮ ರಲ್ಲಿ ಓದುಗರಿಗೆ ಹೆಚ್ಚಿನ ಸುದ್ದಿಗಳನ್ನು ನೀಡುವ ಸಲುವಾಗಿ ಯುನೈಟೆಡ್ ನ್ಯೂಜ್ ಸರ್ವಿಸ್ ಮತ್ತು ಅಸೋಸಿಯೇಟೆಡ್ ಪ್ರೆಸ್ ಸರ್ವಿಸಿನ ಸಂಪರ್ಕವನ್ನು ಸಹ ಸಂಯುಕ್ತ ಕರ್ನಾಟಕ ಪಡೆಯಿತು. ಇದರ ಜೊತೆಗೆ ಸಂಯುಕ್ತ ಕರ್ನಾಟಕದ ಆಕಾರವೂ ಸಹ ಇಂಗ್ಲೀಷ ಪತ್ರಿಕೆಗಳ ಆಕಾರಕ್ಕೆ ಸರಿ ಹೊಂದುವಂತೆ ಬದಲಾಯಿಸಲಾಯಿತು. ೧೯೩೯ ರಲ್ಲಿ ಎರಡನೇ ಮಹಾಯುದ್ದ ಪ್ರಾರಂಭವಾಗಿದ್ದರಿಂದ ಕಾಗದದ ಬೆಲೆ ವಿಪರೀತವಾಗಿ ಏರತೊಡಗಿತು. ಹೀಗಾಗಿ ಅದರ ಅಭಾವವೂ ಕಾಣತೊಡಗಿತು. ಆದರೆ ಭಾರತ ಜರ್ಮನಿಯ ವಿರುದ್ದ ಯುದ್ದದಲ್ಲಿ ಸೇರಿದ ರಾಷ್ಟ್ರವೆಂದು ಬ್ರಿಟಿಷರು ಘೋಷಿಸಿದ್ದರು. ಭಾರತದ ಸ್ವಾತಂತ್ರ್ಯದ ಪ್ರಶ್ನೆಯೂ ಇತ್ಯರ್ಥಗೊಳ್ಳದೇ ಬ್ರಿಟಿಷರಿಗೆ ಯುದ್ದದಲ್ಲಿ ನೆರವಾಗಬಾರದೆಂದು ಕಾಂಗ್ರೆಸ್ ಪಕ್ಷ ನಿರ್ಣಯಿಸಿತು. ಅಧಿಕಾರದಲ್ಲಿದ್ದ ಪ್ರಾಂತಗಳ ಕಾಂಗ್ರೆಸ್ ಸರ್ಕಾರಗಳು ರಾಜೀನಾಮೆ ನೀಡಿದವು. ಕಾಂಗ್ರೆಸ್ಸಿಗೂ ಸರ್ಕಾರಕ್ಕೂ ಘರ್ಷಣೆ, ಮಹಾತ್ಮಾಜಿಯಿಂದ ಯುದ್ದ ವಿರೋಧಿ ವೈಯಕ್ತಿಕ ಸತ್ಯಾಗ್ರಹದ ಕರೆ, ಇವೆಲ್ಲವೂ ಪ್ರಾರಂಭಗೊಂಡವು. ಸಂಯುಕ್ತ ಕರ್ನಾಟಕವಂತೂ ರಾಷ್ಟ್ರೀಯ ವಿಚಾರ ಪ್ರಸಾರದಲ್ಲಿ ಪ್ರಭಾವೀ ಪಾತ್ರವಹಿಸುವ ಪತ್ರಿಕೆ. ಇದರ ಕಾರ್ಯಕರ್ತರೆಲ್ಲರೂ ದೇಶಭಕ್ತ

ಕಾಂಗ್ರೆಸ್ಸಿಗರೇ ಆಗಿದ್ದರು. ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಿ ವೈಯಕ್ತಿಕ ಸತ್ಯಾಗ್ರಹ ಆಂದೋಲನವನ್ನು ಸಮರ್ಥಿಸುವ ಪತ್ರಿಕೆಗಳನ್ನು ಬಗ್ಗು ಬಡೆಯಲು ದೊಡ್ಡ ಮೊತ್ತದ ಜಾಮೀನು ಕೇಳುವ ಸರ್ಕಾರದ ಕ್ರಮದ ಸೂಚನೆಯೂ ಕಂಡು ಬಂದಿತು. ಒಂದುವೇಳೆ ಜಾಮೀನು ನೀಡಿದರೆ ಅದಕ್ಕೆ ಕೊಡಲೂ ಹಣ ಇಲ್ಲದಂತಹ ಸ್ಥಿತಿ. ಇದರಿಂದಾಗಿ ಪತ್ರಿಕೆಯನ್ನು ನಿಲ್ಲಿಸುವ ಪ್ರಸಂಗ ಬರಬಹುದು ಎಂದೆನಿಸಿ ದಿವಾಕರರು ಆಪತ್ತು ಧನಕ್ಕೆ ವಂತಿಕೆ ಕೊಡಲು ಓದುಗರನ್ನು, ಅಭಿಮಾನಿಗಳನ್ನು ವಿನಂತಿಸಿಕೊಂಡು ಈ ಬಗ್ಗೆ ಒಂದು ಪ್ರಕಟಣೆಯನ್ನು ೩.೪.೧೯೪೦ ಸಂಯುಕ್ತ ಕರ್ನಾಟಕದಲ್ಲಿ ಹೊರಡಿಸಿದರು. ಏತನ್ಮಧ್ಯೆ ಕರ್ಮವೀರ ವಾರಪತ್ರಿಕೆ ೧೯೩೨ ರಲ್ಲಿಯೇ ತನ್ನ ಪ್ರಕಟಣೆಯನ್ನು ಸ್ಥಗಿತಗೊಳಿಸಿತ್ತು. ಎಂಟು ವರ್ಷಗಳ ನಂತರ ಅಂದರೆ ೧೯೪೦ ಜನೇವರಿ ೧ ರಿಂದ ಮತ್ತೆ ರಾಷ್ಟ್ರ ಸೇವೆಗೆ ತನ್ನನ್ನು ಅರ್ಪಿಸಿಕೊಳ್ಳಲು ಅದು ಪ್ರಕಟಣೆಗೊಳ್ಳತೊಡಗಿತು.

೧೯೪೨ ಭಾರತದ ಸ್ವಾತಂತ್ರ್ಯಕ್ಕಾಗಿ ಮರೆಯಲಾರದ ವರ್ಷ ಆ ವರ್ಷದ ಜೂನ್ ಆರರಿಂದ ಕರ್ಮವೀರದಲ್ಲಿ ಗಾಂಧೀಜಿಯವರ ಹರಿಜನ ಪುರವಣಿ ಆರಂಭಗೊಂಡಿತು. ಅದೇ ವರ್ಷ ಅಗಸ್ಟ ಎಂಟರಂದು ಮುಂಬೈಯಲ್ಲಿ ಗಾಂಧೀಜಿಯವರು ಘೋಷಿಸಿದ್ದ ಚಲೇಜಾವ್ ಚಳುವಳಿ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರದ ಕೆಂಗಣ್ಣು ಸಂಯುಕ್ತ ಕರ್ನಾಟಕ ಮತ್ತು ಕರ್ಮವೀರದ ಮೇಲೆ ಬಿತ್ತು. ಆಗಿನ ಆಡಳಿತಗಾರರಿಗೆ ಕರ್ಮವೀರ ಕಾರ್ಯಾಲಯದ ಮೇಲೆ ದಾಳಿ ಮಾಡಿ ಜಪ್ತಿ ಮಾಡಬೇಕು ಹಾಗೂ ಸಂಯುಕ್ತ ಕರ್ನಾಟಕ ಮುದ್ರಣಾಲಯಕ್ಕೆ ಬೀಗ ಮುದ್ರೆ ಹಾಕಬೇಕೆಂದು ಧಾರವಾಡದ ಜಿಲ್ಲಾಧಿಕಾರಿಗಳಿಗೆ ಆದೇಶ ಬಂದಿತು. ಆ ಪ್ರಕಾರ ಪೊಲೀಸ್ ಪಡೆ ಝಡ್ತಿ ನಡೆಸಿತು. ಹಲವಾರು ಕಾಗದ ಪತ್ರಗಳನ್ನು ವಶಕ್ಕೆ ತೆಗೆದುಕೊಂಡಿತಾದರೂ ಮುದ್ರಣಾಲಯಕ್ಕೆ ಬೀಗಮುದ್ರೆ ಹಾಕುವುದು ತಪ್ಪಿತು. ಆದರೆ ಒಂದು ತಿಂಗಳವರೆಗೆ ಕರ್ಮವೀರ ತನ್ನ ಪ್ರಕಟಣೆಯನ್ನು ನಿಲ್ಲಿಸಬೇಕಾಯಿತು. ಅದೇ ವರ್ಷ ಸಪ್ಟೆಂಬರ್ ೯ ರಿಂದ ಅದು ಪುನಃ ಪ್ರಾರಂಭವಾಯಿತು. ೧೯೪೫ ಅಗಸ್ಟ ೧ ರಿಂದ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟ್ ತನ್ನ ಹೆಸರು ಬದಲಾಯಿಸಿಕೊಂಡು ಲೋಕ ಶಿಕ್ಷಣ ಟ್ರಸ್ಟ್ ಎಂದಾಯಿತು. ಸಂಯುಕ್ತ ಕರ್ನಾಟಕದ ೨.೮.೧೯೫೮ ರ ಸಂಚಿಕೆಯಲ್ಲಿ ಲೋಕ ಶಿಕ್ಷಣ ಟ್ರಸ್ಟ್‌ನ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಕೆಳಗಿನಂತೆ ಹೇಳಲಾಗಿದೆ.

೧. ಸಾರ್ವಜನಿಕ ಹಿತ ಕಲ್ಯಾಣಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜನತೆಯಲ್ಲಿ ಜ್ಞಾನ ಪ್ರಸಾರ ಮಾಡುವುದು, ಶಿಕ್ಷಣ ನೀಡುವುದು.

೨. ಜನತೆಗೆ ಶಿಕ್ಷಣ ನೀಡುವ ಉದ್ದೇಶದಿಂದ ವಾಚನಾಲಯ, ಗ್ರಂಥಾಲಯಗಳನ್ನು ಸ್ಥಾಪಿಸುವುದು. ಕನ್ನಡ ಮತ್ತಿತರ ಭಾಷೆಗಳಲ್ಲಿ ಪುಸ್ತಕ, ಕರಪತ್ರಗಳು, ನಿಯತಕಾಲಿಕೆಗಳನ್ನು ಪ್ರಕಟಿಸುವುದು.

ಸಂಯುಕ್ತ ಕರ್ನಾಟಕ ಹಾಗೂ ಕರ್ಮವೀರ ಪತ್ರಿಕೆಗಳು ಲೋಕ ಶಿಕ್ಷಣ ಟ್ರಸ್ಟಿನ ಎರಡು ಕಣ್ಣುಗಳಾಗಿ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಂಡವು. ಸ್ವತಂತ್ರ ಭಾರತ ಹಾಗೂ ಕರ್ನಾಟಕ ಏಕೀಕರಣ ಅವುಗಳ ಗುರಿಯಾಗಿತ್ತು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ೧೯೫೩ ಜನೇವರಿ ೨೬ ರಿಂದ ಕರ್ಮವೀರದಲ್ಲಿ ಸೋಮವಾರದ ದಿನಪತ್ರಿಕೆಯನ್ನು ಸಮಾವೇಶಗೊಳಿಸಿ ದೈನಿಕ ಆಕಾರದಲ್ಲಿಯೇ ಆ ದಿನದ ಸುದ್ದಿಗಳನ್ನು ಒಳಗೊಂಡು ಬರುವಂತೆ ವ್ಯವಸ್ಥೆ ಮಾಡಲಾಯಿತು. ಇದರಿಂದಾಗಿ ಸಂಯುಕ್ತ ಕರ್ನಾಟಕದ ಓದುಗರಿಗೆಲ್ಲರಿಗೂ ಕರ್ಮವೀರವು ಸೋಮವಾರದ ಸಂಯುಕ್ತ ಕರ್ನಾಟಕ ಸಹಿತ ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾಗುತ್ತಿದ್ದರೂ ಸಾಪ್ತಾಹಿಕದಲ್ಲಿಯ ಎಲ್ಲ ಶೀರ್ಷಿಕೆಗಳನ್ನು ಉಳಿಸಿಕೊಂಡು ಜೊತೆಗೆ ರಾಷ್ಟ್ರೀಯ ಅಂತರಾಷ್ಟ್ರೀಯ ಸುದ್ದಿಗಳ ಎರಡು ಪುಟಗಳನ್ನು ನೀಡಲಾಗುತ್ತಿತ್ತು. ೧೯೫೭ ಜುಲೈ ೭ ರಿಂದ ಸೋಮವಾರದ ಬದಲು ರವಿವಾರ ಪ್ರಕಟವಾಗುವಂತೆ ಮಾಡಲಾಯಿತು. ಇದರಿಂದಾಗಿ ರವಿವಾರದ ಬಿಡುವಿನ ವೇಳೆಯಲ್ಲಿ ಓದುಗರಿಗೆ ಕರ್ಮವೀರದಲ್ಲಿ ಪ್ರಕಟವಾಗುತ್ತಿದ್ದ ಅಭ್ಯಾಸಪೂರ್ಣ ಲೇಖನಗಳನ್ನು ಸಾಹಿತ್ಯ ವಿಮರ್ಶೆಗಳ ಜೊತೆಗೆ ರವಿವಾರದ ಪತ್ರಿಕೆಯಲ್ಲಿ ಸುದಿಗಳನ್ನು ಓದಲು ಅನುವು ಮಾಡಿಕೊಡಲಾಯಿತು.

೧೯೫೯ ಜನೇವರಿ ೧೮ರಿಂದ ಮೊದಲಿನಂತೆ ಡೆಮಿ ಅರ್ಧ ಆಕಾರದಲ್ಲಿ ಪಿಟಿಐ ಸುದ್ದಿಗಳಿಲ್ಲದ ಕರ್ಮವೀರ ಪತ್ರಿಕೆಯು ಕೇವಲ ವಾರಪತ್ರಿಕೆಯಾಗಿ ಪ್ರಕಟವಾಗಲಾರಂಭಿಸಿತು. ೧೯೬೫ ರ ಜುಲೈ ೧೮ ರಿಂದ ಮತ್ತೆ ಡೆಮಿ ಆಕಾರವನ್ನು ಬದಲಿಸಿ ಬಣ್ಣದ ರಕ್ಷಾ ಪುಟದಿಂದ ಹೊಸರೂಪ ತಾಳಿ ಪ್ರಕಟವಾಗಲಾರಂಭಿಸಿತು. ಇದಾದ ನಂತರ ಪ್ರತಿ ರವಿವಾರ ಸಂಯುಕ್ತ ಕರ್ನಾಟಕದಲ್ಲಿ ವಾಙ್ಮಯ ವಿಭಾಗವೆಂಬ ನಾಲ್ಕು ಪುಟಗಳ ಪುರವಣಿ ಶುರುವಾಯಿತು. ನಂತರ ಇದನ್ನೇ ಸಾಪ್ತಾಹಿಕ ಮಂಜರಿ ಎಂದು ಹೇಳಲಾಯಿತು. ಇದೀಗ ಅದು ಸಾಪ್ತಾಹಿಕ ಸೌರಭವಾಗಿದೆ.

ರೀಡರ್ಸ್ ಡೈಜೆಸ್ಟ್ ಎಂಬ ಇಂಗ್ಲೀಷ್ ಮಾಸ ಪತ್ರಿಕೆಯ ಮಾದರಿಯಲ್ಲಿ ಕಸ್ತೂರಿ ಮಾಸ ಪತ್ರಿಕೆ ೧೯೫೬ ಸಪ್ಟಂಬರ್ ತಿಂಗಳಿಂದ ಪ್ರಾರಂಭಗೊಂಡಿತು. ಪಾ.ವೆಂ. ಆಚಾರ್ಯರು ಇದರ ಕರ್ಣಧಾರತ್ವವನ್ನು ವಹಿಸಿದರು. ೧೯೫೯ ಜನೇವರಿ ೨೬ ರಂದು ಸಂಯುಕ್ತ ಕರ್ನಾಟಕದ ಬೆಂಗಳೂರು ಆವೃತ್ತಿಯು ಪ್ರಾರಂಭಗೊಂಡಿತು. ಆಗಿನ ರಾಜ್ಯಪಾಲ ಹಾಗೂ ಮೈಸೂರಿನ ಅರಸರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಇದನ್ನು ಉದ್ಘಾಟಿಸಿದರು. ಈಗ ಸಂಯುಕ್ತ ಕರ್ನಾಟಕ ಪತ್ರಿಕೆ ಹುಬ್ಬಳ್ಳಿ, ಬೆಂಗಳೂರ ಅಲ್ಲದೇ ಗುಲ್ಬರ್ಗಾ, ದಾವಣಗೆರೆ ಮತ್ತು ಮಂಗಳೂರುಗಳಲ್ಲಿ ತನ್ನ ಪ್ರಾದೇಶಿಕ ಕಛೇರಿಗಳು ಹಾಗೂ ಮುದ್ರಣಾಲಯಗಳನ್ನು ಪ್ರಾರಂಭಿಸಿದೆ. ಇದರ ಜೊತೆಗೆ ಕರ್ನಾಟಕದ ಐದೂ ಮೂಲೆಗಳಿಂದ ತನ್ನ ಪತ್ರಿಕೆಯನ್ನು ಪ್ರಕಟಿಸುವ ಮೂಲಕ ಕನ್ನಡಿಗರ ಸೇವೆ ಮಾಡುತ್ತಲಿದೆ.

■■

೨೦೦೭ ರಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆ ತನ್ನ ೭೫ ನೇ ವರ್ಷದ ವರ್ಧಂತಿಯನ್ನು ಬೆಂಗಳೂರು, ಹುಬ್ಬಳ್ಳಿ ಮತ್ತು ಬೆಳಗಾವಿಗಳಲ್ಲಿ ಆಚರಿಸಿತು. ಅದೊಂದು ಅವಿಸ್ಮರಣೀಯವಾದ ಘಟನೆಯಾಗಿತ್ತು. ಸಂಯುಕ್ತ ಕರ್ನಾಟಕದ ಪತ್ರಿಕೆಯ ಸಂಪಾದಕ ವರ್ಗದಲ್ಲಿ ಹಲವಾರು ಗಣ್ಯರು ಸೇವೆ ಸಲ್ಲಿಸಿದ್ದಾರೆ. ಈ ಪೈಕಿ ಪ್ರಮುಖರೆಂದರೆ ಮೊಹರೆ ಹನುಮಂತರಾವ್, ಹ.ರಾ. ಪುರೋಹಿತ, ರಂಗನಾಥ ದಿವಾಕರ, ಖಾದ್ರಿ ಶಾಮಣ್ಣ, ಪ.ಸು. ಭಟ್ಟ, ಎಮ್. ಆರ್. ಸಿದ್ದಾಪೂರ, ಸುರೇಂದ್ರ ದಾನಿ, ಆರ್. ಎ. ಉಪಾಧ್ಯೆ, ಎನ್. ವ್ಹಿ. ಜೋಶಿ, ವಿ. ಎನ್. ಸುಬ್ಬರಾವ್, ಎಸ್. ವ್ಹಿ. ಜಯಶೀಲರಾವ್ ಹಾಗೂ ಈ ಪುಸ್ತಕದ ಲೇಖಕ ಮನೋಜ್ ಪಾಟೀಲ್ (ಮನೋಜಕುಮಾರಗೌಡ ಜೀವಣ್ಣಗೌಡ ಪಾಟೀಲಕುಲಕರ್ಣಿ) ಇತರರು.

■

## ಸೆರೆಮನೆಯ ವಿಚಿತ್ರಗಳು

ರಂಗನಾಥ ದಿವಾಕರ ಅವರು ವಿಜಾಪುರ ಜೇಲಿನಿಂದ ಯರವಡಾಕ್ಕೆ ಬಂದ ದಿನ ಹಾಸ್ಯಕರವಾದ ಒಂದು ಸಂಗತಿ ಜರುಗಿತು. ವಾಡಿಕೆಯಂತೆ ಖೈದಿಗಳು ಸೆರೆಮನೆಯಲ್ಲಿ ದಾಖಲಾಗುವಾಗ ಅವರ ವಸ್ತುಗಳ ಪಟ್ಟಿಯಾಗಬೇಕಾಗುತ್ತದೆ. ಅದಕ್ಕೆಂದೇ ಅವರು ಸೆರೆಮನೆಯ ಕಟ್ಟೆಯ ಮೇಲೆ ಕುಳಿತುಕೊಂಡಿದ್ದರು. ಅವರ ಜೊತೆಗೆ ಹೊಸದಾಗಿ ಜೈಲನ್ನು ಪ್ರವೇಶ ಮಾಡುವ ಸುಮಾರು ೨೦ ಖೈದಿಗಳು ಇದ್ದರು. ಪ್ರತಿಯೊಬ್ಬರ ಎದುರು ಅವರ ಸಾಮಾನುಗಳ ಗಂಟು ಇತ್ತು. ಎರಡು ವರ್ಷಕ್ಕಿಂತ ಹೆಚ್ಚಿನ ಶಿಕ್ಷೆ ಇದ್ದರೆ ಬಟ್ಟೆಗಳನ್ನು ಸಹ ಜೇಲಿನಲ್ಲಿ ಇಡುಗೊಡುವುದಿಲ್ಲ, ಆದರೆ ದಿವಾಕರರ ಬಳಿ ಪುಸ್ತಕಗಳ ಎರಡು ದೊಡ್ಡ ಪೆಟ್ಟಿಗೆಗಳು ಇದ್ದವು.

ಇದನ್ನು ನೋಡಿ ಅಚ್ಚರಿಗೊಂಡ ದಿವಾಕರರ ಬದಿಗಿದ್ದ ಕ್ರಿಮಿನಲ್ ಶಿಕ್ಷೆಯ ಖೈದಿಯೊಬ್ಬ ಈ ಪೆಟ್ಟಿಗೆಯಲ್ಲಿ ಏನು ಇದೆ ಎಂದು ಕೇಳಿದ. ಅದಕ್ಕೆ ದಿವಾಕರರು ಇವುಗಳಲ್ಲಿ ಪುಸ್ತಕಗಳಿವೆ ಎಂದರು. ಇದನ್ನು ಕೇಳಿದ ಖೈದಿ ನೀವು ಪುಸ್ತಕಗಳ ವ್ಯಾಪಾರ ಮಾಡುತ್ತೀರಾ ಎಂದು ಇನ್ನೊಂದು ಪ್ರಶ್ನೆ ಕೇಳಿದ. ಅದಕ್ಕೆ ದಿವಾಕರರು ಸ್ವಾಭಾವಿಕವಾಗಿಯೇ ಉತ್ತರಿಸುತ್ತ ಇವುಗಳನ್ನು ನಾನು ಓದುತ್ತೇನೆ ಎಂದರು. ಸ್ವಲ್ಪ ಹೊತ್ತು ಉಳಿದೆಲ್ಲ ಕ್ರಿಮಿನಲ್ ಖೈದಿಗಳು ತಮ್ಮಲ್ಲಿಯೇ ಗುಜು ಗುಜು ಮಾತನಾಡತೊಡಗಿದರು. ದಿವಾಕರರನ್ನು ನೋಡುತ್ತ ಚೇಷ್ಟೆಯ ಸ್ವಭಾವದಲ್ಲಿ ಅಣಕಿಸತೊಡಗಿದರು. ಆಗಲೂ ಸಹ ಅವರಿಗೆ ವಿಷಯ ಏನೆಂಬುದು ಹೊಳೆಯಲಿಲ್ಲ. ಸ್ವಲ್ಪ ಹೊತ್ತು ಆಗುತ್ತಿದ್ದಂತೆಯೇ ಮುಸಿ ಮುಸಿ ನಗುತ್ತಿದ್ದ ಎಲ್ಲ ಖೈದಿಗಳು ದಿವಾಕರರ ಕಡೆಗೆ ಬೊಟ್ಟು ಮಾಡಿ ತೋರಿಸುತ್ತ ಇವನೇನು ಇಷ್ಟೊಂದು ಪುಸ್ತಕ ಓದುತ್ತಾನೆ. ಇವನು ಪುಸ್ತಕ ಕಳ್ಳನೇ ಸರಿ ಎಂದು ಹೇಳುತ್ತಾ ಮತ್ತಿಷ್ಟು ನಗತೊಡಗಿದರು. ಚೋದ್ಯದ ವಿಷಯವೆಂದರೆ ಕ್ರಿಮಿನಲ್ ಖೈದಿಗಳಿಗೆ ರಾಜಕೀಯ ಖೈದಿಗಳ ವ್ಯಕ್ತಿತ್ವದ ಅರಿವು ಇರುತ್ತಿರಲಿಲ್ಲ. ಮುಗ್ಧ ಭಾವದಿಂದ ಅವರು ತಮ್ಮಂತೆಯೇ ದಿವಾಕರರು ಒಬ್ಬ ಎಂದು ತಿಳಿದಿದ್ದರು. ಅವರ ಭಾವನೆಗೆ ಬೆಲೆ ಕೊಟ್ಟು ಹಾಗೂ ಅವರ

ನಗುವನ್ನು ಏಕೆ ಕೆಡಿಸಬೇಕೆಂದು ಭಾವಿಸಿದ ದಿವಾಕರರು ತಾವು ಅವರ ನಗೆಯಲ್ಲಿ ಪಾಲ್ಗೊಂಡುಬಿಟ್ಟರು !

ಪುಸ್ತಕಗಳ ಪೆಟ್ಟಿಗೆಗಳನ್ನು ಜೇಲಿನಲ್ಲಿ ತರಲು ಅಧಿಕಾರಿಗಳು ದಿವಾಕರರಿಗೆ ಅಪ್ಪಣೆ ಕೊಟ್ಟರೇನೋ ನಿಜ. ಆದರೆ ಅವರ ಬಂಧಿತ ಕೋಣೆಯಲ್ಲಿ ಎಲ್ಲ ಪುಸ್ತಕಗಳನ್ನು ಇಟ್ಟುಕೊಳ್ಳಲು ಅಪ್ಪಣೆಯನ್ನೇ ಕೊಡಲಿಲ್ಲ. ಒಬ್ಬರಂತೂ ಇದು ಜೈಲೋ ಇಲ್ಲವೇ ಗ್ರಂಥಾಲಯವೋ ಎಂದು ಚುಚ್ಚಿ ಕೇಳಿಯೇ ಬಿಟ್ಟರು. ಹೆಚ್ಚೆಂದರೆ ನಿಮಗೆ ಎರಡು ಪುಸ್ತಕಗಳನ್ನು ಒಯ್ಯಲು ಮತ್ತು ಓದಲು ಅಪ್ಪಣೆ ಕೊಡುತ್ತೇವೆ ಎಂದರು. ಈ ಬಗ್ಗೆ ಸತತ ಪ್ರಯತ್ನಗಳ ನಂತರ ಹೆಚ್ಚೆಚ್ಚು ಪುಸ್ತಕಗಳನ್ನು ಒಯ್ಯಲು, ಓದಲು ಅಪ್ಪಣೆ ದೊರೆಯಿತು, ಅದೂ ತಾವೇ ತಂದಿದ್ದ ಪುಸ್ತಕಗಳನ್ನು !

ಡಾ. ಜೀವನಲಾಲ ಎಂಬ ವ್ಯಕ್ತಿಯೊಬ್ಬರು ದಿವಾಕರರ ಸಂಗಡ ಸಹ ಖೈದಿಯಾಗಿದ್ದರು. ಅವರು ಡಾಕ್ಟರ ಪರೀಕ್ಷೆ ಪಾಸಾಗಿ ಸರಕಾರಿ ನೌಕರಿಯನ್ನು ಸೇರಿದರು ಮತ್ತು ಸೈನಿಕ ಆದರು. ಮೊದಲನೇ ಮಹಾಯುದದ ಕಾಲಕ್ಕೆ ಅವರನ್ನು ಭಾರತದ ಹೊರಗೆ ಯುದ್ಧಕ್ಕೆ ಕಳಿಸಲಾಯಿತು. ಅಲ್ಲಿ ಅವರು ಲಾಲಾ ಲಜಪತರಾಯರ ವಂದೆ ಮಾತರಂ ಎಂಬ ಪತ್ರಿಕೆಯನ್ನು ತರಿಸುವ ಹಟವನ್ನು ಹಿಡಿದಿದ್ದರಿಂದ ಅವರಿಗೆ ಸೈನಿಕ ಕಾಯಿದೆ ಪ್ರಕಾರ ೧೪ ವರ್ಷ ಶಿಕ್ಷೆಯಾಯಿತು. ಹಿರಿಯ ನ್ಯಾಯಾಲಯದಲ್ಲಿ ಈ ಶಿಕ್ಷೆ ಐದು ವರ್ಷಕ್ಕೆ ಇಳಿಯಿತು. ಅವರು ಒಳ್ಳೆಯ ರಾಷ್ಟ್ರೀಯ ಪ್ರವೃತ್ತಿಯವರೂ ಆಗಿದ್ದರು. ಬ್ರಾಹ್ಮಣರೂ ಆಗಿದ್ದರು. ವಿಚಿತ್ರವೆಂದರೆ ಊಟಕ್ಕೆ ನಿತ್ಯವೂ ಬ್ರಾಹ್ಮಣರಂತೆ ಚಿತ್ರಾವತಿಯನ್ನು ಅವರು ಇಡುತ್ತಿದ್ದರು. ಆಗ ಅವರು ಮಹ್ಮದ ಅಲೀ ಕಿ ಜೈ, ಶೌಕತ್ ಅಲೀ ಕಿ ಜೈ ಎಂಬ ಘೋಷಣೆ ಹಾಕಿ ಊಟ ಪ್ರಾರಂಭಿಸುತ್ತಿದ್ದರು ! ಇದು ಅವರ ರಾಷ್ಟ್ರೀಯತೆಯ ದ್ಯೋತಕವಾಗಿತ್ತು. ಅವರು ಒಂದು ವಿಚಿತ್ರವಾದ ನೋಟಬುಕ್‌ನ್ನು ಹೊಂದಿದ್ದರು. ಅದರಲ್ಲಿ ವಿವರವಾಗಿ ಹಲವಾರು ಔಷಧಗಳನ್ನೂ ಬರೆದುಕೊಂಡಿದ್ದರು. ಹಾಗೂ ಅದನ್ನು ಅವರು ತಮ್ಮ ಅಮೂಲ್ಯ ಸ್ವತ್ತು ಎಂದು ಭಾವಿಸಿದ್ದರು.

ಒಂದೊಂದು ಸ್ಥಳದಲ್ಲಿ ಒಂದೊಂದಕ್ಕೆ ಮಹತ್ವ. ಹೊರಗಾದರೆ 'ಬಂಗಾರವೇ ಬ್ರಹ್ಮ'. ಆದರೆ ಜೇಲಿನಲ್ಲಿರುವ ಚಟಗಾರರಿಗೆ 'ತಂಬಾಕೇ ಬ್ರಹ್ಮ'. ಜೇಲಿನಲ್ಲಿ ಇದ್ದ ಖೈದಿಗಳು ತಮ್ಮ ಚಟ ತೀರಿಸಿಕೊಳ್ಳಲು ತಂಬಾಕಿನ ಸಲುವಾಗಿ ಬೇಕಾದಂತಹ ಅಪರಾಧ ಕೃತ್ಯಗಳನ್ನು ಅಂದರೆ ಹೊಡೆದಾಡುವುದು, ಕಳ್ಳತನ, ಸುಳ್ಳು ಹೇಳುವುದು ಮುಂತಾದವುಗಳನ್ನು ಮಾಡುತ್ತಿದ್ದರು. ಕೆಲವರಂತೂ ಜೇಲಿನಲ್ಲಿಯೇ ತಂಬಾಕಿನ ವ್ಯಾಪಾರ ಮಾಡುತ್ತಿದ್ದರು. ಇದೆಲ್ಲವನ್ನು ನೋಡಿ ಸರಕಾರದವರು ತಾವಾಗಿಯೇ ತಂಬಾಕನ್ನು ಒಳ್ಳೆಯ ನಡತೆಯ ಖೈದಿಗಳಿಗೆ ಕೊಡಬೇಕೆಂದು ನಿರ್ಧರಿಸಿದರು. ಒಂದೆರಡು ವರ್ಷ ಹಾಗೆ ನಡೆದಿರಬೇಕು. ಆದರೂ ಈ ವ್ಯಾಪಾರ ನಿಲ್ಲಲೇ ಇಲ್ಲ. ಒಟ್ಟಿನಲ್ಲಿ ಎಷ್ಟೇ ಬಿಗುವಿನ ವಾತಾವರಣವಿದ್ದರೂ ಖೈದಿಗಳು ತಮ್ಮ ಅಪರಾಧಿ ಗುಣಗಳ ಮೂಲಕ ಒಂದು ಮಾರ್ಗವನ್ನು ತೆಗೆಯುತ್ತಲೇ ಇದ್ದರು.

ಒಮ್ಮೆ ಒಬ್ಬ ಖೈದಿಯು ಶೌಚಾಲಯಕ್ಕೆ ಹೋಗಿದ್ದನು. ಜೇಲಿನಲ್ಲಿ ಶೌಚಾಲಯಗಳಿಗೆ ಶೌಚಕೂಪ ಎಂದರೆ ಸರಿಯಾಗುತ್ತದೆ. ಏಕೆಂದರೆ ಇವುಗಳಿಗೆ ಬಾಗಿಲು, ಮುಚ್ಚುಮರೆ ಏನೂ ಇರುವುದಿಲ್ಲ. ಘನ ಪದಾರ್ಥ ಬೀಳುವ ಮಾರ್ಗದ ಬದಿಗೆ ಒಂದು ಅರಿವೆಯ ಚೀಲ ಬಿದ್ದಿತ್ತು. ಅಂಥ ಹೇಸಿಗೆಯ ವಾತಾವರಣದಲ್ಲಿಯೇ ಓರ್ವ ಖೈದಿ ಆ ಅರಿವೆಯ ಚೀಲವನ್ನು ಮೆಲ್ಲನೆ ಎತ್ತಿಕೊಂಡನು. ಇವನ ಚಲನವಲನವನ್ನು ಗಮನಿಸಿದ ದಿವಾಕರರಿಗೆ ಬಹುಶಃ ಅದು ತಂಬಾಕಿನ ಚೀಲ ಇದ್ದಿರಬೇಕೆಂದು ಅನ್ನಿಸಿತು. ಅದರಲ್ಲಿ ಒಮ್ಮೆ ಅಥವಾ ಎರಡು ಬಾರಿ ಹಾಕಿಕೊಳ್ಳುವಷ್ಟು ತಂಬಾಕು ಇದ್ದಿರಬಹುದು. ಇದಕ್ಕೂ ಮೊದಲು ಮಲವಿಸರ್ಜನೆಗೆ ಬಂದಿದ್ದ ಇನ್ನೊಬ್ಬ ಖೈದಿಯು ತನ್ನ ಲಂಗೋಟಿಯಲ್ಲಿ ತಂಬಾಕಿನ ಆ ಚೀಲವನ್ನು ಬಚ್ಚಿಟ್ಟುಕೊಂಡಿದ್ದ. ಅವಸರದಲ್ಲಿಯೇ ಕ್ರಿಯೆ ಮುಗಿಸುವಾಗ ಆ ತಂಬಾಕಿನ ಪುಟ್ಟ ಚೀಲ ಬಿದ್ದಿತ್ತು. ಈ ಇನ್ನೊಬ್ಬ ಖೈದಿ ಅಂತ ಹೊಲಸಿನ ಸನ್ನಿವೇಶದಲ್ಲಿಯೂ ಆ ಚೀಲವನ್ನು ತೆಗೆದುಕೊಂಡು ಬಂದನು. ಇದನ್ನು ನೋಡಿದ ದಿವಾಕರರು ತೀವ್ರವಾಗಿ ಭಾವಾವೇಶಗೊಂಡರು. ಅವನಿಗೆ ಕೈ ಜೋಡಿಸಿ ಪ್ರಾರ್ಥನೆ ಮಾಡಿಕೊಂಡು ''ತಮ್ಮಾ ಏನು ಮಾಡಿದರೂ ಮಾಡು. ಇಷ್ಟೊಂದು ಅಧೋಗತಿಗೆ ಹೋಗಬೇಡ. ನಿನ್ನಲ್ಲಿರುವ ಈ ತಂಬಾಕನ್ನು ನಾಲಿಗೆಯ ಮೇಲೆ ಹಾಕಿಕೊಳ್ಳಬಯಸುವೆ. ಅದು ಬಿದ್ದ ಜಾಗೆ ಹೇಸಿಗೆಯ ಜಾಗ ಎಂದರು. ಖೈದಿಯ ಮನ ಕರಗಿರಬೇಕು. ದಿವಾಕರರ ಈ ಮಾತು ಕೇಳಿ ನಾಚಿಕೊಂಡು ಅದನ್ನು ಅಲ್ಲಿಯೇ ಬೀಸಾಡಿ ಹೋಗಿಬಿಟ್ಟ.

ಜೇಲಿನಲ್ಲಿ ಕೆಲ ಖೈದಿಗಳ ಬಳಿ ಹಣವಿರುತ್ತಿತ್ತು. ಇದು ಹೇಗೆ ಎಂಬ ರಹಸ್ಯವೇ ದಿವಾಕರರಿಗೆ ಗೊತ್ತಾಗುತ್ತಿರಲಿಲ್ಲ. ಏಕೆಂದರೆ ಖೈದಿಗಳನ್ನು ಒಳಗೆ ಬಿಡುವಾಗ ಪೂರ್ತಿ ಜಪ್ತಿ ಮಾಡಿಯೇ ಕಳಿಸುತ್ತಿದ್ದರು. ನಿತ್ಯವೂ ಆಯಾ ಖೈದಿಗಳ ಶರೀರ ಮತ್ತು ಅವರಿದ್ದ ಕೋಣೆಯ ಜಡ್ತಿ ನಡೆಯುತ್ತಿತ್ತು. ಇಷ್ಟೆಲ್ಲ ಆದರೂ ಸಹ ಖೈದಿಗಳ ಹತ್ತಿರ ಹಣ ಇರುತ್ತಿದ್ದುದ್ದು ದಿವಾಕರರಿಗೆ ಸಖೇದಾಶ್ಚರ್ಯವನ್ನುಂಟು ಮಾಡಿತ್ತು. ಈ ಬಗ್ಗೆ ಕೊರಳಿನ ಬದಿಗೆ ಸಣ್ಣ ತೆಗ್ಗನ್ನು ಉಂಟು ಮಾಡಿ ಅಲ್ಲಿ ನಾಲ್ಕೈದು ರೂಪಾಯಿಗಳಷ್ಟು ಚಿಲ್ಲರೆ ಹಣವನ್ನು ಅವರು ಇಟ್ಟುಕೊಳ್ಳುತ್ತಿದ್ದರು. ಕೊರಳಿನ ಬದಿಯ ಮೆತ್ತಗಿನ ಗಂಟಲಿನ ಜಾಗವನ್ನು ಒಂದು ಸಣ್ಣ ಸೀಸದ ಗುಂಡನ್ನು ನಿತ್ಯವೂ ಬಾಯಲ್ಲಿ ಇಡುವ ಮೂಲಕ ಅಲ್ಲಿ ಚಿಕ್ಕ ತೆಗ್ಗನ್ನು ಮಾಡುವರು. ಇಲ್ಲಿಯೇ ಅವರು ದುಡ್ಡುಗಳನ್ನು ಇಡುತ್ತಾರೆ. ಇದು ಒಂದು ನಿಟ್ಟಿನಲ್ಲಿ ಖೈದಿಗಳ ಬ್ಯಾಂಕೇ ಆಗಿತ್ತು. ಯರವಡಾ ಜೇಲಿಗೆ ದಿವಾಕರರು ಬಂಧಿತರಾಗಿ ಹೋದಾಗ ಒಂದು ಪ್ರಕರಣವು ನಡೆಯಿತು. ಅಲ್ಲಿ ನಾಲ್ಕೈದು ವಿಭಾಗಗಳು ಇದ್ದವು. ಖೈದಿಗಳಿಗೆ ಆದ ಶಿಕ್ಷೆಗೆ ಅನುಗುಣವಾಗಿ ಅಲ್ಲಿ ಪ್ರತ್ಯೇಕ ವಿಭಾಗಗಳಿದ್ದವು. ಖೈದಿಗಳಿಗೆ ಬಳಕೆಗೆ ಬೇಕಾದ ನೀರನ್ನು ಸಂಗ್ರಹಿಸಲು ದೊಡ್ಡ ಹೌದುಗಳನ್ನು ಅಲ್ಲಿ ನಿರ್ಮಿಸಲಾಗಿತ್ತು. ಈ ನೀರಿನ ಹೌದುಗಳ ಬದಿಗೆ ಚಿಕ್ಕ ಚಿಕ್ಕ ತುಳಸೆ ಕಟ್ಟೆಗಳು, ಶಿವ, ಬಸವಣ್ಣ, ಹನುಮಂತ, ಗಣಪತಿ ಮುಂತಾದ ದೇವತೆಗಳ ಸಣ್ಣ

ಪುಟ್ಟ ಕಟ್ಟೆಗಳು ಇದ್ದವು. ಇದರ ಬದಿಗೆ ಅಲ್ಲಲ್ಲಿ ಹೂವಿನ ಗಿಡಗಳನ್ನು ಹಚ್ಚಲಾಗಿತ್ತು. ಖೈದಿಗಳು ನಿತ್ಯ ಸ್ನಾನವಾದೊಡನೆ ತುಳಸಿಕಟ್ಟೆ ಸೇರಿದಂತೆ ಎಲ್ಲ ಗಿಡಗಳಿಗೂ ನೀರು ಹಾಕುತ್ತಿದ್ದರು. ಅಲ್ಲಿರುವ ದೇವತೆಗಳಿಗೆ ನಮಸ್ಕರಿಸುವುದು ಎಲ್ಲವೂ ನಡೆಯುತ್ತಿತ್ತು. ಏನೇ ಆದರೂ ಅದೊಂದು ಸಾತ್ವಿಕ ಸ್ಥಳವಾಗಿತ್ತು.

೧೯೨೪ ರ ಕೊನೆಗೆ ಜೇಲಿನ ಮುಖ್ಯಸ್ಥರ ಕಾಕದೃಷ್ಟಿ ಇಂಥ ಕಟ್ಟೆಗಳ ಮೇಲೆ ಬಿದ್ದಿತ್ತು. ಇವೆಲ್ಲ ಕಟ್ಟೆಗಳನ್ನು ದೇವರ ಮೂರ್ತಿಗಳನ್ನು ಕಿತ್ತಿ ಬೀಸಾಡಿ ಬಿಡಲು ಆದೇಶಿಸಿದರು. ಹೀಗೆ ಆದೇಶ ಪ್ರಾರಂಭ ಆಗುತ್ತಿದ್ದಂತೆಯೇ ಕೆಲ ಕಟ್ಟೆಗಳನ್ನು ಕೀಳಲಾಯಿತು. ಇವೆಲ್ಲವೂ ಖೈದಿಗಳಿಗೆ ಗೊತ್ತಾದಾಗ ಅವರು ವಿಹ್ವಲಗೊಂಡರು. ಹಲವರು ಆಕ್ರೋಶವನ್ನು ವ್ಯಕ್ತಪಡಿಸತೊಡಗಿದರು. ಆದರೆ ಅವರಿಗಿದ್ದ ಒಂದೇ ಅಸ್ತ್ರವೆಂದರೆ ಅನ್ನ ಸತ್ಯಾಗ್ರಹ. ಸಾಮೂಹಿಕವಾಗಿ ಮಧ್ಯಾಹ್ನದ ಊಟವನ್ನು ಬಿಟ್ಟಕೂಡಲೇ ಜೇಲಿನ ಮುಖ್ಯಸ್ಥರಿಗೆ ವಿಷಯ ಗೊತ್ತಾಗಿ ಕಟ್ಟೆಗಳ ಧ್ವಂಸ ಕಾರ್ಯಗಳನ್ನು ಕೆಲಕಾಲ ಮುಂದೂಡಿದರು. ಕೆಲ ದಿನಗಳ ನಂತರ ಪುನಃ ಇಂಥ ಕಟ್ಟೆಗಳನ್ನು ಕಿತ್ತೆಸೆಯುವ ಕ್ರಮ ಪ್ರಾರಂಭಗೊಂಡಿತು. ಹೀಗಾಗಿ ಖೈದಿಗಳು ಮತ್ತೆ ಕ್ರುದರಾದರು. ಆದರೆ ಅವರಿಗೆ ಉಪವಾಸವನ್ನು ಮಾಡುವುದು ಬಿಟ್ಟು ಯಾವುದೇ ಪ್ರತಿಭಟನೆಯ ಅಸ್ತ್ರ ಇರಲಿಲ್ಲ. ನೂರಾರು ಜನ ಖೈದಿಗಳು ಊಟವನ್ನೇ ಮಾಡಲಿಲ್ಲ. ಆ ದಿನ ಮುಂಜಾನೆ ೧೧.೦೦ ಗಂಟೆಯ ಸುಮಾರು ದಿವಾಕರರು ಇದ್ದ ಕೋಣೆಯ ಎದುರುಗಿನ ಕಟ್ಟೆಯನ್ನು ಒಡೆಯಲು ಓರ್ವ ಹವಾಲ್ದಾರನು ಬಂದನು. ಅವನು ತನ್ನೊಡನಿದ್ದ ಒಂದೆರಡು ಖೈದಿಗಳಿಗೆ ಗುದ್ದಲಿಯನ್ನು ಕೊಟ್ಟು ಈ ದೇವರ ಕಟ್ಟೆಗಳನ್ನು ಒಡೆದು ಹಾಕಿರಿ ಎಂದು ಆದೇಶಿಸಿದ.

ಇದೆನ್ನೆಲ್ಲ ನೋಡುತ್ತಿದ್ದ ದಿವಾಕರರಿಗೆ ಅಸಹನೀಯ ಎನಿಸಿತು. ಅವರು ಖೈದಿಗಳನ್ನು ಉದ್ದೇಶಿಸಿ ''ದೇವರ ಕಟ್ಟೆಗಳಿಗೆ ಈ ರೀತಿ ಗುದ್ದಲಿ ಪೆಟ್ಟು ಹಾಕಿದರೆ ನಿಮ್ಮ ಕಲ್ಯಾಣ ಹೇಗಾದೀತು. ಯಾವ ಪಾಪದಿಂದಲೋ ನೀವು ಈಗ ಸೆರೆಮನೆಗೆ ಬಂದೀರಿ. ಇಲ್ಲಿಯೂ ಇಂಥ ಪಾಪವನ್ನು ಮಾಡಿದರೆ ಮುಂದೆಲ್ಲಿಗೆ ಹೋಗುತ್ತೀರಿ?'' ಎಂದು ಮನಸ್ಸಿಗೆ ಹತ್ತುವ ರೀತಿಯಲ್ಲಿ ಮಾತನಾಡಿದರು. ಇದನ್ನು ಕೇಳಿಸಿಕೊಂಡ ಖೈದಿಗಳು ಗುದ್ದಲಿಗಳನ್ನು ಎಸೆದು ಸುಮ್ಮನೆ ಕುಳಿತುಬಿಟ್ಟರು. ಇದನ್ನೆಲ್ಲ ನೋಡಿ ಹವಾಲ್ದಾರನು ತಾನೇ ಕಟ್ಟೆಗಳನ್ನು ಒಡೆಯುವ ಕೆಲಸಕ್ಕೆ ಸಿದ್ದನಾಗತೊಡಗಿದ. ಆಗ ದಿವಾಕರರು ಅವರನ್ನು ಉದ್ದೇಶಿಸಿ ದೇವರ ಮೇಲೆ ನೀನು ಸಹ ಗುದ್ದಲಿ ಪೆಟ್ಟು ಹಾಕಲು ಸಿದ್ದನಾಗಿರುವೆಯಾ ? ಎಂದು ಪ್ರಶ್ನಿಸಿದರು. ನೌಕರಿ ಎಂದರೆ ಹೇಳಿದ್ದನ್ನು ಮಾಡಬೇಕೆಂಬ ಅರ್ಥವಲ್ಲ. ನಾಳೆ ನಿನ್ನ ಮಕ್ಕಳ ಕೊಲೆ ಮಾಡು ಎಂದು ಹೇಳಿದರೆ ನೀನು ಮಾಡುವೆಯಾ? ಯಾವ ದೇವರು ನಿನಗೆ ಈ ಮಕ್ಕಳನ್ನು ಕೊಟ್ಟಿರುವನೋ ಅವನ ತಲೆಯ ಮೇಲೆ ಈಗ ಪೆಟ್ಟು ಹಾಕುವ ನೀನು ಎಂಥವನು. ಈ

ಕೆಲಸ ಮಾಡದಿದ್ದರೆ ಬಹಳವಾದರೆ ನಿನ್ನನ್ನು ನೌಕರಿಯಿಂದ ತೆಗೆದಾರು. ನಿನ್ನ ಹೊಟ್ಟೆ ಎಲ್ಲಿಯಾದರೂ ತುಂಬೀತು. ದೇವರು ನಿನ್ನನ್ನು ಉಪವಾಸ ಕೆಡವಲಿಕ್ಕಿಲ್ಲ ಎಂದು ಕಳಕಳಿಯಿಂದ ಕೇಳಿದರು. ಇದಕ್ಕೆ ಅವನಲ್ಲಿ ಭಾವ ಪರಿವರ್ತನೆ ಆಯಿತಾದರೂ ಇನ್ನೂ ಸ್ವಲ್ಪ ಗೊಂದಲವೇ ಇತ್ತು. ಆಗ ಮುಂದುವರೆದ ದಿವಾಕರರು ನನ್ನ ಸಲಹೆ ಮೀರಿ ನೀನು ದೇವರ ಕಟ್ಟೆಗಳನ್ನು ಒಡೆಯಲು ಹೋದರೆ ಮೊದಲನೇ ಪೆಟ್ಟನ್ನು ನನ್ನ ತಲೆಯ ಮೇಲೆ ಹಾಕು ಎಂದರು. ಆತನಿಗೆ ಈ ಮಾತು ತುಂಬಾ ನಾಟಿತು. ಪರಿಶಿಷ್ಟ ಜಾತಿಯವನಾಗಿದ್ದ ಆ ಹವಾಲ್ದಾರನು ತನ್ನ ಕೆಲಸವನ್ನು ಕೈಬಿಟ್ಟು ಹೊರನಡೆದ. ಬಹುಶಃ ಅವನು ತನ್ನ ನೌಕರಿಯನ್ನು ಬಿಡಲು ನಿರ್ಧರಿಸಿದ್ದ ಅಂಥ ಕಾಣುತ್ತದೆ. ಆತ ಒಂದುವೇಳೆ ಮನಸ್ಸು ಮಾಡಿದ್ದರೆ ಅವರನ್ನೆಲ್ಲ ಬಂಧಿಸಿ ಪುನಃ ವಿಚಾರಣೆ ನಡೆಸಿ ಶಿಕ್ಷೆಯನ್ನು ಮತ್ತಷ್ಟು ಹೆಚ್ಚು ಮಾಡಬಹುದಿತ್ತು.

ಖೈದಿಗಳ ಅನ್ನ ಸತ್ಯಾಗ್ರಹ ನಡೆದಿರುವಂತೆ ದಿವಾಕರರು ಜೈಲಾಧಿಕಾರಿ ಮೆಜರ್ ಡಾಯಲ್ ಹತ್ತಿರ ಬಂದರು. ಏಕಾ ಏಕೀ ತುಳಸಿಕಟ್ಟೆ ಮತ್ತು ದೇವರ ಕಟ್ಟೆಗಳನ್ನು ಒಡೆಯುವ ಉಪಕ್ರಮವನ್ನು ಖಂಡಿಸಿ ಅವರು ಮಾತನಾಡತೊಡಗಿದರು. ಅದಕ್ಕೆ ಉತ್ತರಿಸಿದ ಅಧಿಕಾರಿ ಇದು ಜೇಲು. ಸಿಕ್ಕ ಸಿಕ್ಕ ಕಡೆಗೆ ತುಳಸಿ ಕಟ್ಟೆ, ದೇವರ ಕಟ್ಟೆಗಳನ್ನು ನಿರ್ಮಿಸುವುದು ಸರಿಯೇ ಎಂದರು. ಈಗ ಇಲ್ಲಿ ಬರೀ ಹಿಂದು ಖೈದಿಗಳು ಮಾತ್ರ ಕಟ್ಟೆಗಳನ್ನು ಕಟ್ಟಿದ್ದಾರೆ. ಮುಂದೆ ಸಿಖ್ಖರು, ಮುಸಲ್ಮಾನರು, ಕ್ರಿಶ್ಚಿಯನ್ ಖೈದಿಗಳು ಇದೇ ರೀತಿ ಬೇಡಿಕೆ ಮಂಡಿಸಿದರೆ ಜೇಲು ಧರ್ಮ ಭೋದನೆಯ ಸ್ಥಳವಾಗುತ್ತದೆ ಎಂದರು.

ಇದರಲ್ಲಿಯ ತಾತ್ವಿಕ ಅಂಶವನ್ನು ದಿವಾಕರರು ಒಪ್ಪಿಕೊಂಡರಾದರೂ ಅವರು ಸಾವಿರಾರು ಖೈದಿಗಳು ಇಲ್ಲಿ ಅನಾಥ ಪ್ರಜ್ಞೆ ಹಾಗೂ ಏಕಾಂಗಿತನದಿಂದ ಬಳಲುತ್ತಾರೆ. ಅವರಿಗೆ ದೇವರ ಧ್ಯಾನದಿಂದ ಏನೋ ಒಂದು ಬಗೆಯ ಸಾಂತ್ವನ ಸಿಗುತ್ತದೆ. ಹೀಗೆ ನೀವು ಕಟ್ಟೆಗಳನ್ನು ಕಿತ್ತೆಸೆದರೆ ಈ ಅನಾಥ ಖೈದಿಗಳ ಅಂತಃಕರಣ ನೊಂದುಕೊಳ್ಳುತ್ತಿದೆ. ಇಂಥ ಕ್ರಮದಿಂದ ಇವರಿಗೆ ಜೈಲಿನ ಆಡಳಿತಕ್ಕೆ ಯಾವ ತೊಂದರೆಯೂ ಆಗಿಲ್ಲ. ಬೇರೆ ಧರ್ಮದವರಿಗೆ ಇಂಥ ಪೂಜಾ ಸ್ಥಾನಗಳನ್ನು ಕಲ್ಪಿಸಿಕೊಡುವುದು ಸೂಕ್ತವೇ ಸರಿ. ಆದರೆ ಅವುಗಳನ್ನು ಮಾಡುವ ಬದಲು ಇದ್ದ ಕಟ್ಟೆಗಳನ್ನೇ ತೆಗೆದು ಹಾಕುವುದು ಸರಿಯಾದ ಕ್ರಮವಲ್ಲ. ಇದಕ್ಕೆ ಪ್ರತಿಯಾಗಿ ಉತ್ತರಿಸಿದ ಜೇಲಾಧಿಕಾರಿ ನಾನು ಕ್ರಮಬದವಾಗಿ ಕಟ್ಟೆಗಳನ್ನು ನಿರ್ಮಿಸಿಕೊಡುತ್ತೇನೆ. ಈ ವರೆಗಿನ ಸತ್ಯಾಗ್ರಹ ಸಾಕು ಎಂದರು. ಮುಂದೆ ಮತ್ತೊಂದು ಸುತ್ತುಗಳ ಮಾತುಕತೆ ನಡೆಯಿತು. ನಂತರ ಲಿಖಿತವಾಗಿ ಆದೇಶವೂ ಬಂದಿತು. ಖೈದಿಗಳೆಲ್ಲರೂ ಸಂತೋಷವಾಗಿ ದೇವರ ಪೂಜೆಯನ್ನು ಮಾಡಿದರಲ್ಲದೆ ನಂತರ ಊಟವನ್ನು ಮಾಡಿದರು. ಆದರೆ ನಿರ್ದಿಷ್ಟ ಕ್ರಮವಾಗಿ ದೇವರ ಕಟ್ಟೆಗಳನ್ನು ಇಡಬೇಕೆಂಬ ಆದೇಶವೂ ಇದರ ಜೊತೆಯಲ್ಲಿಯೇ ಇತ್ತು.

ಜೈಲಿನಲ್ಲಿ ಸಹ ಖೈದಿಗಳಿಗೆ ಓದಲು ಬರೆಯಲು ಕಲಿಸುವ ಒಂದು ವಿಶಿಷ್ಠ ಕಾರ್ಯಕ್ಕೆ ದಿವಾಕರರು ಕೈ ಹಾಕಿದರು. ಇದಕ್ಕೆ ಪ್ರಾರಂಭದಲ್ಲಿ ಖೈದಿಗಳೇ ಅನಾಸಕ್ತಿ ತೋರುತ್ತಿದ್ದರು. ಇದಕ್ಕೆ ಪೂರಕವಾಗಿ ಜೇಲಿನ ಸಿಬ್ಬಂದಿಯೂ ಸಹ ಇಂಥ ಸಾತ್ವಿಕ ಕೆಲಸವನ್ನು

ಅಸಡ್ಡೆಯಿಂದಲೇ ಕಾಣತೊಡಗಿದರು. ಆದರೆ ರಾಜಕೀಯ ಖೈದಿ ಹಾಗೂ ಪ್ರತ್ಯೇಕ ವಿಭಾಗದಲ್ಲಿ ಬಂಧಿತರಾಗಿದ್ದ ದಿವಾಕರರಿಗೆ ಕೆಲಸವಿಲ್ಲದೆ ಖಾಲಿ ಕೂಡ್ರುವುದೂ ಸಹ ದುಸ್ತರವಾಗುತ್ತಿತ್ತು. ಜೊತೆಗೆ ಖೈದಿಗಳ ಅಜ್ಞಾನ ಅಶಿಕ್ಷಿತನ ಇವುಗಳನ್ನು ನೋಡಿ ಅವರಿಗೆ ಬೇಜಾರವೂ ಆಗಿತ್ತು. ಹಾಗೆ ಅವರು ಸುಮ್ಮನೆ ಕುಳಿತುಕೊಳ್ಳದೆ ಅಧಿಕಾರಿಗಳ ಸಂಗಡ ಚರ್ಚಿಸಿ, ಪಾಟಿ ಮತ್ತು ಪೆನ್ಸಿಲ್ಲುಗಳ ವ್ಯವಸ್ಥೆ ಮಾಡಿಕೊಂಡರಲ್ಲದೆ ಕ್ರಮವಾಗಿ ಖೈದಿಗಳಿಗೆ ಮೂಲಾಕ್ಷರಗಳನ್ನು ಕಲಿಸುವ ಮೂಲಕ ಅಕ್ಷರಾಭ್ಯಾಸವನ್ನು ನಡೆಸತೊಡಗಿದರು. ದಿನಗಳೆದಂತೆ ಮಧ್ಯಾಹ್ನ ಎರಡು ಗಂಟೆಗಳ ಕಾಲ ಶಿಕ್ಷಣ ವ್ಯವಸ್ಥೆ ನಡೆಯತೊಡಗಿತು. ಇದರ ಜೊತೆಗೆ ಪ್ರತಿ ವಾರಕ್ಕೊಮ್ಮೆ ಚರ್ಚಾಕೂಟವನ್ನೂ ನಡೆಸಲಾಗುತ್ತಿತ್ತು.

■■

## ಚಲೇಜಾವ ಚಳುವಳಿ

ಕರ ನಿರಾಕರಣೆಯ ಆಂದೋಲನ ಮುಗಿಯುತ್ತಿದ್ದಂತೆಯೇ ಪ್ರಾಂತೀಯ ಸರಕಾರಗಳಿಗೆ ಚುನಾವಣೆಯು ನಡೆಯಿತು. ೧೯೩೭ ಫೆಬ್ರುವರಿಯಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಏಳು ಶಾಸನ ಸಭೆಗಳಲ್ಲಿ ಬಹುಮತ ಪಡೆಯಿತು. ೧೯೩೫ ಭಾರತೀಯ ಸಂವಿಧಾನ ಕಾನೂನಿನ ಮೇರೆಗೆ ಈ ಚುನಾವಣೆಯನ್ನು ನಡೆಸಲಾಯಿತು. ಕಾಂಗ್ರೆಸ್ಸಿನ ಮಟ್ಟಿಗೆ ಇದೊಂದು ಒಳ್ಳೆಯ ಬೆಳವಣಿಗೆಯಾಗಿತ್ತು. ಏಳು ಪ್ರಾಂತಗಳಲ್ಲಿ ಅಂದರೆ ಮುಂಬೈ, ಮದ್ರಾಸ, ಸಂಯುಕ್ತ ಪ್ರಾಂತ (ಈಗಿನ ಅವಿಭಾಜಿತ ಉತ್ತರ ಪ್ರದೇಶ) ಬಿಹಾರ, ಕೇಂದ್ರ ಪ್ರಾಂತ (ನಾಗಪುರ ಅದರ ರಾಜಧಾನಿಯಾಗಿತ್ತು), ಓಡಿಸ್ಸಾ, ಹಾಗೂ ಈಗ ಪಾಕಿಸ್ತಾನದ ಭಾಗವಾಗಿರುವ ವಾಯುವ್ಯ ಪ್ರಾಂತದಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದಿತ್ತು. ಇದರಿಂದಾಗಿ ಕಾಂಗ್ರೆಸ್ ಪಕ್ಷ ಅಭೂತಪೂರ್ವ ಆನಂದವನ್ನು ಅನುಭವಿಸಿತ್ತಲ್ಲದೇ ಇನ್ನು ಸ್ವಾತಂತ್ರ ಸಿಕ್ಕುವಲ್ಲಿ ತಡವಾಗಲಿಕ್ಕಿಲ್ಲ ಎಂಬ ಸಂತೃಪ್ತ ಭಾವನೆಯನ್ನೇ ತಾಳಿತ್ತು. ಇದಕ್ಕೆ ಪೂರಕವಾಗಿ ಬ್ರಿಟಿಷ್ ಸರಕಾರವೂ ಸಹ ಕಾಂಗ್ರೆಸ್ ಆಡಳಿತ ಪ್ರಾಂತಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂಬ ಆಶ್ವಾಸನೆಯನ್ನೂ ನೀಡಿತ್ತು.

ಆದರೆ ಮುಂದೆ ಬ್ರಿಟಿಷರು ತಮ್ಮ ವಚನ ಭಂಗವನ್ನು ಮಾಡುತ್ತಿದ್ದರೇನೋ, ಅದಕ್ಕಿಂತ ಮೊದಲು ಎರಡನೇ ಮಹಾಯುದಕ್ಕೆ ಕಾರಣೀಭೂತನಾದವ ಇದಕ್ಕೆ ಅವಸರ ಪಡಿಸಹತ್ತಿದ. ಹಿಟ್ಲರ್, ಬ್ರಿಟನ್ ಮತ್ತು ಅದರ ಮಿತ್ರ ಪಕ್ಷಗಳ ಮೇಲೆ ದಾಳಿ ನಡೆಸುತ್ತಿದ್ದಂತೆಯೇ ಎರಡನೇ ಮಹಾಯುದ ಸ್ಪಷ್ಟವಾಗಿ ಗೋಚರವಾಗತೊಡಗಿತು. ಸ್ವಾಭಾವಿಕವಾಗಿಯೇ ಬ್ರಿಟನ್ ಜರ್ಮನಿಯ ವಿರುದ ಯುದ ಘೋಷಣೆ ಮಾಡಿತು. ಅದರ ಸಾಮಂತ ಹಾಗೂ ಮಾಂಡಲಿಕ ಇಲ್ಲವೇ ಅಧೀನ ರಾಷ್ಟ್ರಗಳು ಸಹ ಮಹಾಯುದದಲ್ಲಿ ಅನಿವಾರ್ಯವಾಗಿ ಎಳೆಯಲ್ಪಟ್ಟವು. ಹಾಗೂ ಅಲ್ಲಿದ್ದ ಸರಕಾರ ಯುದ ಘೋಷಿಸಿತು. ನೈಜವಾಗಿ ಭಾರತಕ್ಕೆ ಈ ಯುದದಲ್ಲಿ ಆಸಕ್ತಿಯೂ ಇರಲಿಲ್ಲ. ಬೇಕಾಗಿಯೂ ಇರಲಿಲ್ಲ. ಆದರೆ ಕಾಂಗ್ರೆಸ್ ಪಕ್ಷ ಇದರಿಂದ ಸಮಸ್ಯೆಗೆ ಸಿಲುಕಿತು.

ಆಗತಾನೇ ರಾಷ್ಟ್ರದ ಏಳು ಪ್ರಾಂತಗಳಲ್ಲಿ ರಾಜ್ಯ ಆಳಿಕೆ ನಡೆಸಿದ್ದ ಅದು ಈ ಯುದದಿಂದ ಏನು ಮಾಡಬೇಕೆಂಬುದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಅನಿವಾರ್ಯವಾಗತೊಡಗಿತು. ಪ್ರಾಂತಿಕ ಸರಕಾರದ ಆಳಿಕೆ ನಡೆಸುತ್ತಿದ್ದರೂ ಕಾಂಗ್ರೆಸ್ ಸರಕಾರಗಳು ಕೇಂದ್ರವನ್ನು ಮತ್ತು ರಾಷ್ಟ್ರವನ್ನು ನಿಯಂತ್ರಣದಲ್ಲಿ ಇಟ್ಟುಕೊಂಡ ಬ್ರಿಟಿಷರ ಕೇಂದ್ರ ಸರಕಾರದ ಆಣತಿಯನ್ನು ಪಾಲಿಸಲೇ ಬೇಕಿತ್ತು. ಆದ್ದರಿಂದ ಕಾಂಗ್ರೆಸ್ ಸರಕಾರ ಅನಿವಾರ್ಯವಾಗಿ ಭಾರತವನ್ನು ಯುದಕ್ಕೆ ಎಳೆದ ನೀತಿಯ ವಿರುದ ಪ್ರತಿಭಟನೆ ಸಲ್ಲಿಸಿ ತನ್ನ ಮಂತ್ರಿ ಮಂಡಳದ ರಾಜೀನಾಮೆ ಸಲ್ಲಿಸಿತು. ಕಾಂಗ್ರೆಸ್ ಪಕ್ಷ ಯುದದ ವಿಷಯವನ್ನೇ ಒಂದು ವಿವಾದವನ್ನು ಮಾಡಿಕೊಂಡಿತು. ಈ ಯುದದ ಗುರಿಯೇನು? ಭಾರತೀಯರ ಪಾತ್ರ ಇದರಲ್ಲಿ ಏನಿದೆ ಎಂದು ಕೇಳಿ ಕೆಣುಕುವುದರ ಮೂಲಕ ಅದು ಬ್ರಿಟಿಷ್ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸತೊಡಗಿತು. ಇದರ ಜೊತೆಗೆ ಸ್ವಾತಂತ್ರ್ಯದ ಗಳಿಕೆಯ ಒತ್ತಾಸೆಯೂ ಇದರಲ್ಲಿ ಅಡಗಿತ್ತೆನ್ನುವುದು ಬೇರೆ ಮಾತು. ಆದರೆ ತನ್ನ ಸ್ವಂತ ರಾಜ್ಯದ ಗಡಿಗಳನ್ನೇ ರಕ್ಷಿಸುವಲ್ಲಿ ಮಹಾ ಯುದದ ವೇಳೆಯಲ್ಲಿ ತಲ್ಲೀನವಾಗಿದ್ದ ಬ್ರಿಟನ್ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಹೀಗಾಗಿ ಹೋರಾಟ ಒಂದೇ ದೇಶದ ಸ್ವಾತಂತ್ರ್ಯ ಗಳಿಕೆಯ ಸಲುವಾಗಿ ಉಳಿದ ದಾರಿಯಾಯಿತು. ಈ ಮಾತನ್ನು ದಿವಾಕರರು ಹಲವು ಬಾರಿ ಅಂದೂ ತೋರಿಸಿದ್ದರು. ಇದಕ್ಕೆ ಪೂರಕವಾಗಿ ಭಾರತೀಯ ರಕ್ಷಣಾ ಕಾನೂನಿನ ಪ್ರಕಾರ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗಿತ್ತು. ಧಾರವಾಡದಲ್ಲಿ ನಂಜಪ್ಪ ಎನ್ನುವ ಐಸಿಎಸ್. ಅಧಿಕಾರಿ ದಿವಾಕರ ಅವರನ್ನು ಭೆಟ್ಟಿಯಾಗಿ ಸಂಯುಕ್ತ ಕರ್ನಾಟಕ ಪತ್ರಿಕೆಯ ನೀತಿ, ಆಡಳಿತದ ವಿವರ ಹಾಗೂ ಪತ್ರಿಕಾ ಸ್ವಾತಂತ್ರ್ಯದ ಇತಿಮಿತಿಗಳ ಬಗ್ಗೆ ಹಾಗೂ ಸಾಧ್ಯವಾದರೆ ಇನ್ನಷ್ಟು ನಿಯಂತ್ರಣವನ್ನು ಪತ್ರಿಕಾ ಪ್ರಕಟಣೆ ವಿಷಯದಲ್ಲಿ ಹೇರಲು ನಂಜಪ್ಪ ನಿರ್ಧರಿಸಿದಂತಿತ್ತು. ಇದರ ಹಿಂದೆ ಬ್ರಿಟಿಷ್ ಸರಕಾರದ ಕುತಂತ್ರ ಅಡಗಿತ್ತೆಂಬುದು ಬೇರೆ ಮಾತು. ಕಾಂಗ್ರೆಸ್ ಮತ್ತು ಸ್ವಾತಂತ್ರ ಹೋರಾಟದ ಮುಖವಾಣಿಯಂತಿದ್ದ ಸಂಯುಕ್ತ ಕರ್ನಾಟಕ ಪ್ರಕಟಣೆ ನಿಲ್ಲಿಸುವ ದಾರಿಯನ್ನು ಬ್ರಿಟಿಷ್ ಸರಕಾರ ಕಾಣಲು ಇಚ್ಛಿಸಿತ್ತು.

ಆದರೆ ತನ್ನ ಆರ್ಥಿಕ ಪರಿಸ್ಥಿತಿಯ ಸಂಕಷ್ಟದ ಇತಿಮಿತಿಗಳಲ್ಲಿಯೇ ಹೇಗೋ ಪತ್ರಿಕೆಯನ್ನು ಹೊರ ತರಲಾಗುತ್ತಿತ್ತು. ಇದೊಂದು ದೇಶ ಸೇವೆಯೆಂದೇ ಪತ್ರಿಕೆಯ ಕಾರ್ಯಕರ್ತರು ಭಾವಿಸಿದ್ದರಿಂದ ಇದನ್ನು ಓದುವುದು ದೇಶಭಕ್ತಿಯ ಸಂದೇಶ ಎಂದು ಸಾರ್ವಜನಿಕರು ತಿಳಿದಿದ್ದರಿಂದ ಪತ್ರಿಕೆ ಹೊರಬರುತ್ತಿತ್ತು. ಬಹುಶಃ ಬ್ರಿಟಿಷ್ ಸರಕಾರ ಪತ್ರಿಕೆ ಪ್ರಕಟಣೆಯ ನಿಟ್ಟಿನಲ್ಲಿ ಜಾಮೀನು ಠೇವಣಿ ಹಣವನ್ನು ಕೇಳಬಹುದು ಎಂದು ದಿವಾಕರರು ಭಾವಿಸಿದ್ದರು. ಹೊರಲಾರದ ಮೊತ್ತವನ್ನು ಠೇವಣಿ ಹಣವನ್ನಾಗಿ ಇಡಬೇಕೆಂದು ಆದೇಶಿಸಿದರೆ ಇಂಥ ಶ್ರೀಮಂತಿಕೆ ಇಲ್ಲದ ಸಂಯುಕ್ತ ಕರ್ನಾಟಕ ಪತ್ರಿಕೆ ಅಸಹಾಯಕನಾಗಿ ಪ್ರಕಟಣೆ ನಿಲ್ಲಿಸಬಹುದೆಂದು ಬ್ರಿಟಿಷ್ ಸರಕಾರ ಭಾವಿಸಿತು. ಇದನ್ನು ಮುಂದಾಗಿಯೇ ಅರಿತ ದಿವಾಕರರು ತಮ್ಮ ಪತ್ರಿಕೆಯಲ್ಲಿಯೇ ಪ್ರಕಟಣೆ ನೀಡಿ ಸಂಯುಕ್ತ

ಕರ್ನಾಟಕದ ರಕ್ಷಣೆಗೆ ವಂತಿಕೆ ನೀಡಬೇಕೆಂದು ಸಹೃದಯ ಓದುಗರನ್ನು ಪ್ರಾರ್ಥಿಸಿದರು. ಇದು ತಕ್ಷಣವೇ ಫಲ ನೀಡಿತು. ೧೯೪೦ ಎಪ್ರಿಲ್ ೧ ರಂದು ದಿವಾಕರರು ಈ ಬಗ್ಗೆ ಓದುಗರನ್ನು ಪ್ರಾರ್ಥಿಸಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ್ದರು. ಮುಂದಿನ ಒಂದೆರಡು ತಿಂಗಳುಗಳಲ್ಲಿ ಹತ್ತು ಸಹಸ್ರರೂ ಹಣ ಸಂದಾಯವಾಗಿತ್ತು. ಇದರಿಂದಾಗಿ ಸರಕಾರದ ಭೀತಿಯ ನೆತ್ತಿಯ ಮೇಲಿನ ಖಡ್ಗ ಬೀಳುವ ಭಯ ದೂರವಾಯಿತು. ಸ್ವಾತಂತ್ರ್ಯ ದೊರೆತ ನಂತರ ಓದುಗರ ಈ ಹಣವನ್ನು ದಿವಾಕರರು ಹಿಂತಿರುಗಿಸಿದರು.

ಭಾರತ ಮಹಾಯುದ್ಧದಲ್ಲಿ ಪಾಲ್ಗೊಂಡಿಲ್ಲವೆಂದು ತೋರಿಸುವುದು ಕಾಂಗ್ರೆಸ್ ಪಕ್ಷಕ್ಕೆ ಬೇಕಾಗಿತ್ತು. ಇದನ್ನು ಜಗತ್ತಿಗೆ ತೋರಿಸಬೇಕಿತ್ತು. ಹೀಗಾಗಿ ೧೯೪೦ ಅಕ್ಟೋಬರ ತಿಂಗಳಲ್ಲಿ ಮಹಾತ್ಮಾ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿದರು. ಇದು ತುಂಬಾ ಸರಳವಾದ ಸತ್ಯಾಗ್ರಹವಾಗಿತ್ತು. ಆದರೆ ಸತ್ಯಾಗ್ರಹಿಗಳಿಗೆ ಸತ್ಯಾಗ್ರಹ ಮಾಡಲು ಗಾಂಧೀಜಿಯವರ ಅನುಮತಿಯೂ ಬೇಕಿತ್ತು. ಪ್ರತಿಯೊಬ್ಬ ಸತ್ಯಾಗ್ರಹಿಯು, 'ಈ ಯುದ್ಧವನ್ನು ನಾನು ವಿರೋಧಿಸುತ್ತೇನೆ' ಎಂದು ಸರಕಾರಕ್ಕೆ ಪತ್ರ ಮುಖೇನ ಪ್ರತಿಭಟನೆ ಸಲ್ಲಿಸಬೇಕಿತ್ತು. ಆದರೆ ಇದು ಸ್ಪಷ್ಟವಾಗಿ ಕಾನೂನು ಉಲ್ಲಂಘನೆಯಾಗಿತ್ತು. ಇದರಿಂದಾಗಿ ಈ ಪ್ರತಿಭಟನೆಯ ಪತ್ರ ಬರೆದ ಸತ್ಯಾಗ್ರಹಿಯು ಜೇಲಿಗೆ ಹೋಗುವಂತಾಯಿತು. ದಿವಾಕರರಿಗೂ ಸಹ ಸತ್ಯಾಗ್ರಹ ನಡೆಸಲು ಅನುಮತಿ ನೀಡಲಾಗಿತ್ತು. ಇದನ್ನರಿತ ಸರಕಾರ ಅವರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಿ ನಾಸಿಕ ಜೇಲಿಗೆ ತಳ್ಳಿತು. ೧೯೪೧ ಡಿಸೆಂಬರ್ ತಿಂಗಳಲ್ಲಿ ಅವರು ಬಿಡುಗಡೆಯಾದರು. ಬಿಡುಗಡೆಯ ನಂತರ ದಿವಾಕರರ ಪಾತ್ರ ತ್ರಿಮುಖವಾಯಿತು. ಕಾರಾಗೃಹ ವಾಸ, ಪತ್ರಕರ್ತ ಕಾರ್ಯವ್ಯಾಪ್ತಿ ಹಾಗೂ ವಿಧಾಯಕ ಕಾರ್ಯಕರ್ತ ಈ ತ್ರಿಮುಖ ಕಾರ್ಯಗಳನ್ನು ಅವರು ನಿರ್ವಂಚನೆಯಿಂದಲೇ ಕೈಕೊಂಡರು.

ವೈಯಕ್ತಿಕ ಸತ್ಯಾಗ್ರಹ ಸಾಮೂಹಿಕವಾಗಿರಲಿಲ್ಲ. ಮಹಾತ್ಮಾಜಿಯವರಿಂದ ಅನುಮತಿ ಪಡೆದವರಷ್ಟೇ ಈ ಸತ್ಯಾಗ್ರಹ ಮಾಡಬೇಕಿತ್ತು ಹಾಗೂ ಸತ್ಯಾಗ್ರಹಿಗಳ ಸಂಖ್ಯೆ ಕಡಿಮೆ ಇದ್ದಿದ್ದರಿಂದ ಸರಕಾರ ಬಹುಬೇಗನೆ ಈ ಆಂದೋಲನವನ್ನು ಹತೋಟಿಗೆ ತಂದಿತು. ಸ್ವಾತಂತ್ರ್ಯ ಹೋರಾಟದ ಕಾವು ಇನ್ನಿಷ್ಟು ಪ್ರಖರವಾಗುವುದು ಬೇಕಿತ್ತು. ಇದೊಂದು ಬಗೆಯ ಕೊನೆಯ ಹೋರಾಟವೇ ಆಗಬೇಕೆಂದು ಕಾಂಗ್ರೆಸ್‌ನವರು ಬಯಸಿದ್ದರು. ೧೯೪೨ ರ ಜುಲೈ ೧೪ ರಂದು ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಭೆ ಸೇರಿತು. ಅದು ತೆಗೆದುಕೊಂಡ ನಿರ್ಣಯ ''ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ ಇಲ್ಲವೇ ಚಲೇಜಾವ ಚಳುವಳಿ ಅಥವಾ ಮಾಡು ಇಲ್ಲವೇ ಮಡಿ'' ಚಳುವಳಿ ನಿರ್ಧಾರವಾಗಿತ್ತು. ಭಾರತದಲ್ಲಿಯೇ ಈ ರಾಜಕೀಯ ಪರಿಸ್ಥಿತಿ ಗೊತ್ತುವಳಿಯಿಂದಾಗಿ ಕಾವೇರ ತೊಡಗಿತು. ಇದೇ ಹಂತದಲ್ಲಿ ಚೀನಾ ದೇಶದ ಆಗಿನ ಅಧ್ಯಕ್ಷ ಚಿಯಾಂಗ್-ಕೈ-ಶೇಕ್ ಬ್ರಿಟಿಷ್ ಸರಕಾರಕ್ಕೆ

ಸಲಹೆ ನೀಡಿ ಈ ರಾಜಕೀಯ ವಿಷಮತೆಯನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಬೇಕೆಂದು ಸೂಚಿಸಿದರು. ಆದರೆ ಈ ವಿಷಯ ಬ್ರಿಟನ್ನಿನ ಆಗಿನ ಪ್ರಧಾನಿ ಸರ್ ವಿನ್ಸ್ಟನ್ ಚರ್ಚಿಲ್ ಅವರನ್ನು ಕೆರಳಿಸಿತು. ಅವರು ಈ ಬಗ್ಗೆ ಉದಟತನದಿಂದಲೇ ''ನಾನು ಬ್ರಿಟನ್ ಸೇರಿದಂತೆ ನನ್ನ ರಾಷ್ಟ್ರಕ್ಕೆ ಆಧೀನವಾಗಿರುವ ಇತರ ರಾಷ್ಟ್ರಗಳ ಆಡಳಿತಕ್ಕೂ ಸೇರಿದ ಪ್ರಧಾನ ಮಂತ್ರಿಯಾಗಿದ್ದೇನೆಯೇ ಹೊರತು ಬ್ರಿಟನ್‌ನಿಂದ ಕಳೆದುಕೊಳ್ಳುವ ರಾಷ್ಟ್ರಗಳ ಪ್ರಧಾನಿಯಾಗಿಲ್ಲವೆಂದು'' ಸಿಟ್ಟಿನಿಂದ ಹೇಳಿದರು. ಇಂಥ ಅವಿವೇಕದ ಉತ್ತರದಿಂದ ಕಾಂಗ್ರೆಸ್ ಕೆರಳಿ ಕೆಂಡವಾಯಿತು. ಮೊದಲೇ ಕಾವೇರಿದ್ದ ಚಲೇಜಾವ ಚಳುವಳಿಗೆ ಚರ್ಚಿಲ್ ತಮಗೆ ತಿಳಿಯದಂತೆಯೇ ಜ್ವಾಲೆಗೆ ತುಪ್ಪ ಎರೆದಿದ್ದರು.

೧೯೪೨ ಅಗಷ್ಟ ೭ ಹಾಗೂ ೮ ರಂದು ಮುಂಬೈನ ಗವಾಲಿಯಾ ಟ್ಯಾಂಕ್ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಸಭೆ ಸೇರಿತ್ತು. ಆ ಸಂದರ್ಭದಲ್ಲಿಯೇ ಮಹಾತ್ಮಾ ಗಾಂಧೀಜಿಯವರು ನಂತರ ಅಗಷ್ಟ ಕ್ರಾಂತಿ ಘೋಷಣೆಯೆಂದೇ ಹೆಸರಾದ ಐತಿಹಾಸಿಕ ಚಲೇಜಾವ ಚಳುವಳಿಯ ಘೋಷಣೆಯನ್ನು ಮಾಡಿದರು. ಹಾಗೂ ಇದೊಂದು ಅಂತಿಮ ಹೋರಾಟವಾಗಿದ್ದು ಸ್ವಾತಂತ್ರ ಸಿಗಲು ನಾವು ಭಾರತೀಯರೆಲ್ಲ ಮಾಡು ಇಲ್ಲವೇ ಮಡಿ ಸತ್ಯಾಗ್ರಹ ಕೈಕೊಳ್ಳಬೇಕೆಂದು ಹೇಳಿದರು. ಈ ಸುಪ್ರಸಿದ ಸಭೆಯಲ್ಲಿ ರಂಗನಾಥ ದಿವಾಕರ ಅವರೂ ಸಹ ಪಾಲ್ಗೊಂಡಿದ್ದರು. ಆಗ ಅವರೇನು ಕಾಂಗ್ರೆಸ್ ಪಕ್ಷದ ಯಾವುದೇ ಅಧಿಕೃತ ಪದಾಧಿಕಾರಿಯಾಗಿರಲಿಲ್ಲ. ಕರ್ಮವೀರ ಪತ್ರಿಕೆಯ ಸಂಪಾದಕ ಆಗಿದ್ದರು. ಹೀಗಾಗಿ ಪತ್ರಿಕಾ ವರದಿಗಾರರ ಗ್ಯಾಲರಿಯಲ್ಲಿ ದಿವಾಕರರು ಕುಳಿತುಕೊಂಡೇ ತಮ್ಮ ಪತ್ರಿಕೆಗಳಿಗೂ ವರದಿ ಮಾಡುವುದರ ಜೊತೆಗೆ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅಧಿವೇಶನದ ಕಲಾಪ ಮುಗಿಸಿಕೊಂಡು ತಾವು ಇಳಿದುಕೊಂಡಿದ್ದ ವಸತಿ ಗೃಹಕ್ಕೆ ದಿವಾಕರರು ವಾಪಾಸಾಗುತ್ತಿದ್ದಾಗ ಸಹೋದ್ಯೋಗಿ ಒಬ್ಬರಿಗೆ ಹೇಳಿದ ಮಾತು ಮುಂದಿನ ಘಟನಾವಳಿಗಳಿಗೆ ಸಾಕ್ಷಿ ಆದಂತಿತ್ತು. ''ಈ ಹೋರಾಟ ಅಂತಿಮ ಘಟ್ಟ ತಲುಪಿತು. ಬಹುಶಃ ನಾನು ಇನ್ನು ಮನೆಗೆ ವಾಪಸ್ಸು ಬರುವೆನೋ ಇಲ್ಲವೋ ಎಂದು ಒಡನುಡಿದರು''. ಅಗಷ್ಟ ೮ ರಂದು ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಮುಖ್ಯ ವೇದಿಕೆಯ ಮೇಲೆ ಮಹಾತ್ಮಾಜಿ ಆಸೀನರಾಗಿದ್ದರು. ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ಅವರ ಮುಖದಲ್ಲಿ ಉದ್ವಿಗ್ನತೆ ಸೇರಿದ ಕಾರ್ಯಾನುಷ್ಠಾನ ಒಡಮೂಡಿದಂತಿತ್ತು. ಏತನ್ಮಧ್ಯೆ ಕರ್ನಾಟಕದ ಓರ್ವ ವಿಧಾಯಕ ಕಾರ್ಯಕರ್ತ ದಿವಾಕರರನ್ನು ಸಮೀಪಿಸಿ ಕರ್ನಾಟಕದ ಜನತೆಗೆ ಗಾಂಧೀಜಿಯವರ ಸಂದೇಶವನ್ನು ಪಡೆಯಬೇಕೆಂದು ವಿನಂತಿಸಿದರು. ಇದನ್ನು ಅರಿತ ಅವರು ಗಾಂಧೀಜಿಯಡೆಗೆ ನೇರವಾಗಿ ತೆರಳಿದರು. ಕೊನೆಗೆ ಲಿಖಿತವಾಗಿ ಗಾಂಧೀಜಿಯವರು ಹಿಂದಿಯಲ್ಲಿ 'ಮೇರಿ ಉಮ್ಮಿರಾ ಹೈಕಿ ಇಸ್ ಯಜ್ಞ್‌ಮೇ ಸಬ್ ಕರ್ನಾಟಕಕೀ ಪೂರಾ ಹಿಸ್ಸಾ ದೇಂಗೆ' (ಈ ಸ್ವಾತಂತ್ರ್ಯ ಯಜ್ಞದಲ್ಲಿ ಕರ್ನಾಟಕ ಇಡಿಯಾಗಿ ಹಾಗೂ ಸಹೃದಯವಾಗಿ ಪಾಲ್ಗೊಳ್ಳುವುದೆಂಬ ನಂಬಿಕೆ ನನಗೆ ಇದೆ). ಹಾಗೂ ಇದಕ್ಕೆ

ಎಂ.ಕೆ. ಗಾಂಧಿ ಎಂದು ಸಹಿ ಮಾಡಿದರು. ಇದರ ಸಂಗಡ ಅವರು ಇನ್ನೊಂದು ಸಂದೇಶ ''ಕರೇಂಗೆ ಯಾ ಮರೇಂಗೆ'' (ಮಾಡು ಇಲ್ಲವೇ ಮಡಿ) ಎಂಬ ಸಂದೇಶವನ್ನು ನೀಡಿದ್ದರು.

ಅಧಿವೇಶನ ಮುಗಿದಿದ್ದರೂ ಸಹ ಮೈದಾನದಲ್ಲಿಯೇ ಹಲವಾರು ಜನ ತಾವು ಇಳಿದ ವಸತಿ ಗೃಹಕ್ಕೂ ಹೋಗದೆ ಅಂತಿಮ ಹೋರಾಟವನ್ನು ಹೇಗೆ ಯಶಸ್ಸುಗೊಳಿಸಬೇಕೆಂಬ ಚರ್ಚೆಯಲ್ಲೇ ಮುಳುಗಿದ್ದರು. ಅಂದೇ ಸಂಜೆ ದಿವಾಕರರು ತಮ್ಮ ವಕೀಲ ಮಿತ್ರ ಆರ್.ಎ. ಜಾಹಗೀರದಾರ (ನಂತರ ಇವರು ಹೈಕೋರ್ಟ್ ನ್ಯಾಯಾಧೀಶರಾದರು) ಅವರ ಜೊತೆಗೆ ಚೌಪಾಟಿಗೆ ತೆರಳಿದರು. ಮರುದಿನ ಮುಂಜಾನೆ ಕರ್ನಾಟಕದ ಕಾಂಗ್ರೆಸ್ ಕಾರ್ಯಕರ್ತರು ದಿವಾಕರರನ್ನು ಸಂಪರ್ಕಿಸಲು ಯತ್ನಿಸಿದಾಗ ಅವರು ಸಿಕ್ಕಲಿಲ್ಲ. ಯಾಕೆಂದರೆ ರಂಗನಾಥ ದಿವಾಕರರು ಆಗಲೇ ಭೂಗತರಾಗಿದ್ದರು. ಪೊಲೀಸರ ಕಣ್ಣು ತಪ್ಪಿಸಿ ಇಲ್ಲವೇ ಬಂಧಿತನಾಗಿ ಕಾರಾಗೃಹದಲ್ಲಿ ಇರುವಕ್ಕಿಂತಲೂ ಜನತೆಯ ಸಂಘಟನೆಯ ಕೆಲಸ ದಿವಾಕರರಿಗೆ ಬೆಟ್ಟದಷ್ಟಿತ್ತು., ಈ ಅಂತಿಮ ಹೋರಾಟವನ್ನು ಹಾಗೂ ಚಲೇಜಾವ ಚಳುವಳಿಯನ್ನು ಯಶಸ್ವಿ ಮಾಡಲೇಬೇಕೆಂಬ ಹುಮ್ಮಸ್ಸು ಅವರಿಗಿತ್ತು. ಈ ಕಾರಣದಿಂದಲೇ ಅವರು ಭೂಗತರಾಗಿದ್ದರು. ಇದರ ಜೊತೆಗೆ ಕಾಂಗ್ರೆಸ್ ಅಧಿವೇಶನದ ಮುಕ್ತಾಯದ ದಿನದ ಸಂಜೆಯೇ ಪ್ರಮುಖ ಧುರೀಣರನ್ನು ಪೊಲೀಸರು ಬಂಧಿಸಬಹುದೆಂಬ ಅಂದಾಜು ಇತ್ತು. ಇವೆಲ್ಲ ಕಾರಣದಿಂದ ದಿವಾಕರರು ಭೂಗತರಾಗಲೇಬೇಕಾಗಿತ್ತು. ಆದರೆ ಕಾರ್ಯಕರ್ತರ ಅಂದಾಜು ಹುಸಿ ಹೋಗಲಿಲ್ಲ. ಮುಂಬೈ ಸೇರಿದಂತೆ ಅಂದಿನಿಂದಲೇ ಕಾಂಗ್ರೆಸ್ ಧುರೀಣರ ಬಂಧನ ಸತ್ರ ದೇಶಾದ್ಯಂತ ಆರಂಭಗೊಂಡಿತು. ಅಂದೇ ಬ್ರಿಟಿಷ್ ಪೊಲೀಸರು ಮಹಾತ್ಮಾ ಗಾಂಧೀಜಿ ಅವರ ಪತ್ನಿ ಕಸ್ತೂರಬಾ ಹಾಗೂ ಕಾರ್ಯದರ್ಶಿ ಮಹಾದೇವ ದೇಸಾಯಿಯವರನ್ನು ಬಂಧಿಸಿ ಪುಣೆಯಲ್ಲಿಯ ಆಗಾಖಾನ ಅರಮನೆಯಲ್ಲಿ ಇರಿಸಿತು.

ದಿವಾಕರ ಸಂಗಡ ಆರ್.ಎಸ್. ಹುಕ್ಕೇರಿಕರ ಹಾಗೂ ನಂತರ ದ.ಪ. ಕರಮರಕರ ಇವರೆಲ್ಲರೂ ಭೂಗತರಾಗಿದ್ದರು. ದೇಶದಲ್ಲಿ ಆಚಾರ್ಯ ಕೃಪಲಾನಿ, ಅಚ್ಯುತ್ ಪಟವರ್ಧನ, ಅರುಣಾ ಅಸಫ್ ಅಲಿ ಮುಂತಾದ ಪ್ರಮುಖ ಧುರೀಣರು ಸಹ ಭೂಗತರಾಗಿದ್ದರು. ಅಗಷ್ಟ ದಿನಾಂಕ ೯ ಭಾರತದಲ್ಲಿ ಕ್ರಾಂತಿಯ ದಿವಸವಾಗಿತ್ತು. ಜನತೆ ಭುಗಿಲೆದ್ದಿತ್ತು. ಸ್ವಾತಂತ್ರ್ಯೋತ್ಸಾಹ ಅವರಲ್ಲಿ ಸಮ್ಮಿಲಿತಗೊಂಡಿತು. ಬೀದಿಗೆ ಬಿದ್ದ ಜನ ತಮ್ಮನ್ನು ಬಂಧಿಸಲು ಬಂದ ಪೊಲೀಸರ ಜೊತೆಗೆ ಉಗ್ರ ಪ್ರತಿಭಟನೆಯನ್ನೇ ನಡೆಸತೊಡಗಿದರು. ಮುಂಬೈ ಸೇರಿದಂತೆ ದೆಹಲಿ, ಕಲ್ಕತ್ತಾ, ಅಲಹಾಬಾದ, ಮದ್ರಾಸ, ಬಂಧನ ಸತ್ರ ಲಾಠಿ ಪ್ರಹಾರ ನಡೆಯಿತು. ಜನತೆಯನ್ನು ನಿಯಂತ್ರಿಸಲು ಪೊಲೀಸರು, ಕಾದಿಟ್ಟ ಪೊಲೀಸರು ಹಾಗೂ ಸೈನಿಕರು ಬಂದರು. ಇದರಿಂದಲೇ ಹೋರಾಟ ಎಷ್ಟೊಂದು ಉಗ್ರವಾಗಿತ್ತೆಂಬುದು ಅರಿವಾಗುತ್ತದೆ. ಬ್ರಿಟಿಷ್ ಸರಕಾರವು ಸಹ ಹಠದಿಂದಲೇ ಬಂಧನ ಸತ್ರವನ್ನು ಪ್ರಾರಂಭಿಸಿತು. ಕಳ್ಳರು, ಸುಳ್ಳರು, ಕೊಲೆ ಪಾತಕರನ್ನು ಬಂಧಿಸುವ ರೀತಿ

ನೀತಿಗಳನ್ನು ಬ್ರಿಟಿಷ್ ಪೊಲೀಸರು ರಾಷ್ಟ್ರೀಯ ಧುರೀಣರನ್ನು ಬಂಧಿಸುವಾಗ ತೋರಿಸಿದರು. ಇದರಿಂದ ಮನನೊಂದ ಗಾಂಧೀಜಿ ಭಾರತದ ವೈಸರಾಯರಿಗೆ ಪೊಲೀಸರ ವರ್ತನೆಯ ಬಗ್ಗೆ ಪತ್ರವನ್ನು ಬರೆದರು. ಆದರೆ ಸರಕಾರ ತುಂಬಾ ಉನ್ಮತ್ತವಾಗಿತ್ತು. ಅಗಷ್ಟ ೧೧ ಹಾಗೂ ೧೨ ಎರಡು ದಿನಗಳಲ್ಲಿಯೇ ದಿಲ್ಲಿಯಲ್ಲಿ ೪೭ ಬಾರಿ ಬ್ರಿಟಿಷ ಪೊಲೀಸರು ಗೋಲಿಬಾರ ಮಾಡಿದರು. ೭೨ ಜನ ಇದಕ್ಕೆ ಬಲಿಯಾಗಿದ್ದರು.

ರಂಗನಾಥ ದಿವಾಕರರು ಈ ಹಿಂದಿನ ಸತ್ಯಾಗ್ರಹಗಳಲ್ಲಿ ಅವರನ್ನು ಮೊದಲು ಇಲ್ಲವೇ ಚಳುವಳಿ ವೇಳೆಯಲ್ಲಿ ಪೊಲೀಸರು ಬಂಧಿಸಿದ್ದರು. ಆದರೆ ಚಲೇಜಾವ ಚಳುವಳಿಯ ಈ ಉದ್ವೇಗದ ದಿನಗಳಲ್ಲಿ ಪೊಲೀಸರ ನಿರೀಕ್ಷೆಯನ್ನು ದಿವಾಕರರು ಪ್ರಥಮ ಬಾರಿ ಹುಸಿಗೊಳಿಸಿದರು. ಎರಡು ವರ್ಷಗಳ ಕಾಲ ಭೂಗತರಾಗಿದ್ದುಕೊಂಡೇ ಅವರು ಪೊಲೀಸರಿಗೆ ಚಳ್ಳೇ ಹಣ್ಣು ತಿನ್ನಿಸಿದರು. ನಂತರವಾದರೂ ಗಾಂಧೀಜಿಯವರು ನೀಡಿದ ಕರೆಯಂತೆ ಭೂಗತರೆಲ್ಲರೂ ಪ್ರಕಟವಾಗಿ ಪೊಲೀಸರ ಬಂಧನಕ್ಕೆ ಒಳಪಡಬೇಕೆಂದು ಮಹಾತ್ಮಾ ಗಾಂಧೀಜಿ ಹೇಳಿದಾಗಲೇ ಅವರು ಬಹಿರಂಗವಾಗಿ ಕಾಣಿಸಿಕೊಂಡಿದ್ದು. ಮುಂಬೈಯಲ್ಲಿ ಭೂಗತರಾದ ಅವರು ಹುಬ್ಬಳ್ಳಿಗೆ ಬೇರೆ ಬೇರೆ ಮಾರ್ಗದಿಂದ ಬಂದು ತಲುಪಿದರು. ಅವರಿಗೆ ರಾಷ್ಟ್ರಮಟ್ಟದಲ್ಲಿ ಭೂಗತರಾದ ಹಿರಿಯ ಧುರೀಣರ ಸಂಪರ್ಕವೂ ಇತ್ತು. ಸಂಯುಕ್ತ ಕರ್ನಾಟಕದ ಪತ್ರಿಕಾ ಬಳಗದ ಕಾರ್ಯಕರ್ತರು, ಕರ್ನಾಟಕದ ಹೋರಾಟಗಾರರಿಗೆ ದಿವಾಕರರ ಮಾರ್ಗದರ್ಶನ ಅವಶ್ಯವಿತ್ತು. ಹೀಗಾಗಿ ಅವರು ಪೊಲೀಸರ ದೃಷ್ಟಿಗೆ ಬೀಳದೆ ಆದರೆ ಕಾರ್ಯಕರ್ತರ ಅರಿವಿಗೆ ಬರುವಂತೆ ಪ್ರಕಟಗೊಳ್ಳುತ್ತಿದ್ದರು ಹಾಗೂ ಸಹಾಯವನ್ನು ಸಲ್ಲಿಸುತ್ತಿದ್ದರು. ಆ ಕಾಲದಲ್ಲಿ ಪತ್ರಿಕೆ ಮುಚ್ಚಬೇಕೆಂಬ ಒತ್ತಾಯ ಜಿಲ್ಲಾಡಳಿತದಿಂದ ಇದ್ದೇ ಇತ್ತು. ಹೀಗೆ ಅವರು ಒಮ್ಮೆ ಹುಬ್ಬಳ್ಳಿಗೆ ಬಂದಾಗ ಪುನಃ ಗುಂತಕಲ್ ಮೂಲಕ ಮುಂಬೈಗೆ ತೆರಳಿದರು. ಆಗ ಹುಬ್ಬಳ್ಳಿಯ ಖ್ಯಾತ ಸರ್ಜನ್ ಡಾ. ಜೆ.ವಿ. ಜೋಶಿ ಅವರು ದಿವಾಕರ ಹಾಗೂ ಹುಕ್ಕೇರಿಕರ ಅವರನ್ನು ಹುಬ್ಬಳ್ಳಿಯಿಂದ ಪೊಲೀಸರ ಕಣ್ಣು ತಪ್ಪಿಸಿ ತೆರಳುವಲ್ಲಿ ಸಹಾಯ ನೀಡಿದರು. ತಮ್ಮ ಕಾರಿನಲ್ಲಿಯೇ ವೇಷಾಂತರದಿಂದ ಅವರನ್ನು ಡಾ. ಜೋಶಿ ಕರೆದೊಯ್ದಿದ್ದರು. ಅವರೊಂದಿಗೆ ಓರ್ವ ನರ್ಸು ಇದ್ದಳು. ಈ ಕಾರನ್ನು ನಿಲ್ಲಿಸಿದಾಗ ನರ್ಸ ಹಾಗೂ ಡಾ. ಜೋಶಿ ಪೊಲೀಸರಿಗೆ ವಿನಂತಿಸುತ್ತ ಕಾರಿನಲ್ಲಿ ಗರ್ಭಿಣಿ ಮಹಿಳೆ ಒಬ್ಬಳಿದ್ದಾಳೆ. ಆಕೆ ಬೇನೆ ತಿನ್ನುತ್ತಿದ್ದು ಅವಳನ್ನು ಬೇಗನೆ ಆಸ್ಪತ್ರೆಗೆ ಸೇರಿಸಬೇಕಾಗಿದೆ ಎಂದು ಅವರು ಹೇಳುತ್ತಿದ್ದರು. ಅವರು ಗದಗನ್ನು ದಾಟಿ ಲಕ್ಕುಂಡಿ ಕ್ರಾಸ ಬಳಿಯ ಹರ್ಲಾಪೂರ ಸಮೀಪ ಇಬ್ಬರನ್ನು ಇಳಿಸಿದರು. ನಂತರ ಮಾರುವೇಷದಲ್ಲಿದ್ದ ದಿವಾಕರ ಮತ್ತು ಹುಕ್ಕೇರಿಕರ ಅವರು ಹರ್ಲಾಪೂರ ರೇಲ್ವೆ ನಿಲ್ದಾಣದಿಂದ ಗುಂತಕಲ್ ಮೂಲಕ ಮುಂಬೈಗೆ ತೆರಳಿದರು. ಭೂಗತರಾದ ಕೆಲವೇ ದಿನಗಳಲ್ಲಿ ದಿವಾಕರ ನೇತೃತ್ವದಲ್ಲಿ ಹುಕ್ಕೇರಿಕರ, ಕರಮರಕರ, ಚನ್ನಬಸಪ್ಪ ಅಂಬ್ಲಿ, ನರಸಿಂಹ ದಾಬಡೆ ಇತರರೆಲ್ಲರೂ ಸೇರಿ ಚರ್ಚೆ ನಡೆಸಿದರು. ಸತ್ಯಾಗ್ರಹ ಹೇಗೆ ನಡೆಯಬೇಕೆಂಬುದರ ಬಗ್ಗೆ ಅವರ ಚರ್ಚೆ ಸಾಗಿತ್ತು. ಅದೇ ವಾರದ

ಹರಿಜನ ಪತ್ರಿಕೆಯಲ್ಲಿ ಕಿಶೋರ ಮುಶ್ರುವಾಲಾ ಎಂಬುವರು ಲೇಖನ ಬರೆದಿದ್ದರು. ಅವರ ಅಭಿಪ್ರಾಯದಂತೆ ಉದ್ದೇಶಿತ ಚಲೇಜಾವ ಚಳುವಳಿಯು ಸರಕಾರಿ ಕಟ್ಟಡವನ್ನು ನಾಶ ಪಡಿಸುವುದು. ಅಂಚೆ ತಂತಿ ಧ್ವಂಸಗೊಳಿಸುವುದು, ಪೊಲೀಸರ ಸಮವಸ್ತ್ರ ಹಾಗೂ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವುದು. ಬಂಧನ ವಾರಂಟ ಇದ್ದವರು ಬಂಧನ ಸತ್ರ ತಪ್ಪಿಸಿ ಭೂಗತರಾಗುವುದು ಇವೆಲ್ಲ ಸಲಹೆಗಳಿದ್ದವು. ಚರ್ಚೆ ನಂತರ ಇವೆಲ್ಲ ವಿಷಯಗಳ ಬಗ್ಗೆ ಸಮ್ಮತಿ ವ್ಯಕ್ತಪಡಿಸಲಾಯಿತು. ರಾಮಮನೋಹರ ಲೋಹಿಯಾಯವರು ಎಐಸಿಸಿ ಕಛೇರಿಯ ನಿಮಂತ್ರಕರಾಗಿದ್ದರು. ಹಾಗೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಮುಂಬೈಯಿಂದ ಈ ಚಳುವಳಿ ಕಾಲದಲ್ಲಿ ಮಾರ್ಗದರ್ಶನಬೇಕೆಂದು ನಿರ್ಧರಿಸಲಾಯಿತು. ಈ ನಿಟ್ಟಿನಲ್ಲಿ ಒಂದು ಸಣ್ಣ ಸಮಿತಿಯನ್ನು ರಚಿಸಲಾಯಿತು. ಇದಕ್ಕೆ ಚನಬಸಪ್ಪ ಅಂಬ್ಲಿ ಅಧ್ಯಕ್ಷರಾದರೆ ದಿವಾಕರ ಕಾರ್ಯದರ್ಶಿಗಳಾದರು. ಮುಂಬೈನ ಕೊಲಾಬಾದೇವಿ ಪ್ರದೇಶದಲ್ಲಿ ಒಂದು ಚಿಕ್ಕ ಕತ್ತಲೆ ರೂಮು ಕೆಪಿಸಿಸಿಯ ಕಚೇರಿಯಾಯಿತು. ಆ ಹಂತದಲ್ಲಿ ದೇಶಾದ್ಯಂತದ ಕಾರ್ಯಕರ್ತರು ಸ್ಥಾಪಿಸಿದ್ದ ಅಜಾದ ರೇಡಿಯೋ ಚಳುವಳಿಕಾರರಿಗೆ ಸಂದೇಶ ನೀಡುವ ಮಾರ್ಗದರ್ಶಿ ರೇಡಿಯೋ ಆಯಿತು.

ಭೂಗತರಾಗಿದ್ದಾಗ ದಿವಾಕರ ಅವರ ವೇಷ ಭೂಷಣಗಳು ಸಮಗ್ರವಾಗಿ ಬದಲಾವಣೆಗೊಂಡವು. ದಿವಾಕರ ಅವರು ತಮ್ಮ ಪರಂಪರಾಗತ ಸಾಂಪ್ರದಾಯಕ ಉಡುಗೆಗಳನ್ನು ತ್ಯಜಿಸಿದರು. ಹಾಫ್ ಪ್ಯಾಂಟನ್ನು ಹಾಗೂ ತಲೆಯ ಮೇಲೆ ಕಪ್ಪನೆಯ ಟೊಪ್ಪಿಗೆ ಇಲ್ಲವೇ ಹ್ಯಾಟನ್ನು ಧರಿಸಿದರು. ಹೀಗೆ ಅಪ್ಪಟ ಖಾದಿ ಮತ್ತು ಬಿಳಿ ಬಟ್ಟೆ ಧರಿಸುತ್ತಿದ್ದ ಅವರು ಈ ವಸ್ತ್ರಾಂತರದಿಂದಾಗಿ ಅವರನ್ನು ಗುರುತಿಸುವುದು ಕಾರ್ಯಕರ್ತರಿಗೆ ಕಠಿಣವಾಗತೊಡಗಿತು. ಇನ್ನು ಪೊಲೀಸರ ಮಾತಂತೂ ದೂರವೇ ದೂರ. ಮೊಹರೆ ಹನುಮಂತರಾಯರು ನಿಗದಿತ ಸಮಯಕ್ಕೆ ಕರ್ನಾಟಕದಲ್ಲಿಯ ಚಳುವಳಿಯ ವಿವರಗಳನ್ನು ಹಾಗೂ ಸಂಯುಕ್ತ ಕರ್ನಾಟಕ ಪತ್ರಿಕೆಯ ಆಗು ಹೋಗುಗಳ ಬಗ್ಗೆ ದಿವಾಕರರೊಂದಿಗೆ ಚರ್ಚಿಸುತ್ತಿದ್ದರು. ನಿಗದಿತ ಸಮಯಕ್ಕೆ ಈ ಭೇಟಿ ನಿಯಮಿತವಾಗಿಯೇ ನಡೆಯುತ್ತಿತ್ತು. ವೃತ್ತ ಪತ್ರಿಕಾ ಸಂಪಾದಕರು ಚಳುವಳಿಯಲ್ಲಿ ಭಾಗಿಯಾಗಬಾರದೆಂದು ಮೊಹರೆಯವರು ಗಾಂಧೀಜಿಯವರ ಮಾರ್ಗದರ್ಶಿ ಸೂತ್ರಗಳಂತೆ ಹೋರಾಟದಲ್ಲಿ ನೇರವಾಗಿ ಪಾಲ್ಗೊಂಡಿರಲಿಲ್ಲ. ಆದರೆ ಅಪರೋಕ್ಷವಾಗಿ ಅವರು ಸಂಪೂರ್ಣ ಸಹಾಯ ಸಹಕಾರವನ್ನು ನೀಡುತ್ತಿದ್ದರು. ಒಂದು ನಿಟ್ಟಿನಲ್ಲಿ ಅವರು ಅಂಚೆ ಕಛೇರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು ಎಂದರೆ ತಪ್ಪಾಗಲಾರದು. ಹಲವಾರು ಕಾರ್ಯಕರ್ತರಿಂದ ಸಂದೇಶ, ಸಲಹೆ ಹೋರಾಟದ ವಿವರಗಳನ್ನು ಸಂಗ್ರಹಿಸಿ ಅವರು ವರದಿಯನ್ನು ದಿವಾಕರರಿಗೆ ಒಪ್ಪಿಸುತ್ತಿದ್ದರು. ಅವರ ಜೊತೆಗೆ ಸಮಾಲೋಚನೆ ನಡೆಸಿದ ನಂತರ ಅಗತ್ಯವಿದ್ದ ಹಣಕಾಸಿನ ನೆರವನ್ನು ಸಹ ಪಡೆಯುತ್ತಿದ್ದರು. ಮೊಹರೆಯವರ ಈ ಚಟುವಟಿಕೆಗಳ ವಾಸನೆ ಬ್ರಿಟಿಷ್ ಪೊಲೀಸರಿಗೆ ಗೊತ್ತಾಗಿ ಅವರ ಬಂಧನಕ್ಕೆ ವಾರಂಟ್‌ನ್ನು ಸಹ ಸಿದ್ಧಪಡಿಸಿದರು. ಒಟ್ಟಾರೆ ಈ ಸಮಾಲೋಚನೆ ಮಾರ್ಗದರ್ಶನಗಳಿಂದ ಮುಂಬೈ

ಕರ್ನಾಟಕದ ಜಿಲ್ಲೆಗಳಲ್ಲಿ ಚಲೇಜಾವ್ ಚಳುವಳಿ ಉತ್ತುಂಗ ಸ್ಥಿತಿಯಲ್ಲಿತ್ತು ಎಂದರೆ ತಪ್ಪಾಗಲಾರದು. ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರವೀರರಾದ ವಾಮನರಾವ್ ದೇಸಾಯಿ ಬಿದರಿ, ಅಣ್ಣುಗುರೂಜಿ, ಶ್ರೀರಂಗ ಕಾಮತ್, ಜಯದೇವ ಕುಲಕರ್ಣಿ, ಚನ್ನಪ್ಪ ವಾಲಿ, ಮತ್ತಿತರ ನೇತೃತ್ವದಲ್ಲಿ ಚಳುವಳಿ ತುಂಬಾ ಭರಾಟೆಯಲ್ಲಿತ್ತು. ಮಿರಜ ಬೆಂಗಳೂರು ರೇಲ್ವೆ ಮಾರ್ಗದ ಬೆಳಗಾವಿ ಜಿಲ್ಲೆಯ ರೇಲ್ವೆ ನಿಲ್ದಾಣಗಳನ್ನು ಸುಟ್ಟು ಹಾಕಲಾಗಿತ್ತು. ಧಾರವಾಡ ಜಿಲ್ಲೆಯ ಸ್ವಾತಂತ್ರಯೋಧರು ಧಾರವಾಡ ಬನ್ನಿಕೊಪ್ಪ ರೇಲ್ವೆ ಮಾರ್ಗದ ಕೆಲವು ರೈಲು ನಿಲ್ದಾಣಗಳನ್ನು ಧ್ವಂಸ ಮಾಡಿದ್ದರು. ಟೆಲಿಗ್ರಾಫ್ ತಂತಿಗಳನ್ನು ಕಡಿಯುವುದು, ಅಂಚೆ ಚೀಲಗಳನ್ನು ಜಪ್ತಿ ಮಾಡುವುದು ಇವೆಲ್ಲವು ಸಹ ಅವ್ಯಾಹತವಾಗಿಯೇ ನಡೆದಿತ್ತು. ಈ ಚಳುವಳಿ ಉಗ್ರವಾದ ಕಾಲದಲ್ಲಿಯೇ ಹುಬ್ಬಳ್ಳಿಯಲ್ಲಿ ನಡೆದ ಗೋಲಿಬಾರಿಗೆ ನಾರಾಯಣ ಎಂಬ ಬಾಲಕ ಬಲಿಯಾದ. ಈಗ ಆತನ ಸ್ಮರಣಾರ್ಥ ಹುಬ್ಬಳ್ಳಿಯ ಬ್ರಾಡವೇದಲ್ಲಿ ಹುತಾತ್ಮಚೌಕ ನಿರ್ಮಿಸಲಾಗಿದೆ. ಇದೇ ಸಮಯದಲ್ಲಿ ಮಹಾದೇವಪ್ಪ ಮೈಲಾರ ಅವರು ಪೊಲೀಸರ ಗುಂಡಿಗೆ ಬಲಿಯಾದರು.

ಭೂಗತರಾಗಿದ್ದ ದಿವಾಕರ ಅವರ ಸಂಘಟನೆಯ ಜಾಡು ಹಿಡಿದ ಪೊಲೀಸರಿಗೆ ಎಲ್ಲಿಡೆಯೂ ನಿರಾಶೆಯೇ ಕಂಡಿತ್ತು. ಏತನ್ಮಧ್ಯೆ ದಿವಾಕರರು ಕಂಡಕೂಡಲೇ ಅವರನ್ನು ಗುಂಡಿಟ್ಟು ಕೊಲ್ಲಬೇಕೆಂಬ ಆದೇಶವನ್ನೂ ಪೊಲೀಸರಿಗೆ ನೀಡಲಾಗಿತ್ತು. ಇದರ ಜೊತೆಗೆ ಅವರ ಸುಳಿವು ನೀಡುವವರಿಗೆ ಐದು ಸಹಸ್ರ ರೂಪಾಯಿ ಬಹುಮಾನವನ್ನೂ ಸಾರಲಾಗಿತ್ತು. ಇವಾವವೂ ದಿವಾಕರರನ್ನು ಬಂಧಿಸುವಲ್ಲಿ ಸಹಕಾರಿಯಾಗಲಿಲ್ಲ. ಮುಂಬೈ ಕರ್ನಾಟಕದಲ್ಲಿ ನಡೆಯುತ್ತಿದ್ದ ಚಲೇಜಾವ ಚಳುವಳಿ ಮಾದರಿ ನಂತರ ಲೋಕನಾಯಕ ಎಂದೇ ಪ್ರಸಿದರಾದ ಜಯಪ್ರಕಾಶ ನಾರಾಯಣ ಅವರನ್ನೂ ಪ್ರಭಾವಿತಗೊಳಿಸಿತು. ಅವರು ಭೂಗತರಾದ ಸಮಯದಲ್ಲಿ ತಮ್ಮ ಸಂಪರ್ಕಕ್ಕೆ ಬಂದ ದಿವಾಕರರಿಗೆ ಈ ವಿಷಯವಾಗಿ ತಮ್ಮ ಮೆಚ್ಚುಗೆಯನ್ನು ತಿಳಿಸಿದರು.

ಮುಂಬೈ ಕರ್ನಾಟಕದಲ್ಲಿ ಒಟ್ಟಿಗೆ ೧೩. ಗುಂಪುಗಳು ಸಕ್ರಿಯವಾಗಿ ಚಲೇಜಾವ ಚಳುವಳಿಯಲ್ಲಿ ಪಾಲ್ಗೊಂಡಿದ್ದವು. ಈ ಎಲ್ಲ ತಂಡಗಳ ಸಂಗಡವೂ ದಿವಾಕರ ಅವರ ಸಂಪರ್ಕ ಇತ್ತು. ಕಡಿಮೆ ಎಂದರೂ ತಿಂಗಳಿಗೆ ಒಂದು ಬಾರಿಯಾದರೂ ಪ್ರತಿ ತಂಡದ ಮುಖ್ಯಸ್ಥರ ಸಂಗಡ ಸಮಾಲೋಚನೆಯನ್ನು ಮಾಡುತ್ತಲೇ ಇದ್ದರು. ಏತನ್ಮಧ್ಯೆ ಅವರು ರಾಷ್ಟ್ರಮಟ್ಟದಲ್ಲಿ ನಡೆಯುತ್ತಿದ್ದ ಹೋರಾಟಗಳಲ್ಲಿಯೂ ಸಂಪರ್ಕ ಸೇತುವೆಯಂತಿದ್ದರು.

ಈ ಹಂತದಲ್ಲಿ ಅವರು ಭೂಗತರಾಗಿಯೇ ಕಲ್ಕತ್ತಾ, ಮದ್ರಾಸ, ನಾಗಪೂರಗಳಿಗೂ ಸಹ ಭೇಟಿ ನೀಡಿದ್ದರು. ಗಾಂಧೀಜಿಯವರಿಗೆ ೭೫ ವರ್ಷಗಳು ತುಂಬಿದ ಪ್ರಯುಕ್ತ ಡಿ.ಜಿ. ತೆಂಡೂಲ್ಕರ್ ಹಾಗೂ ವಿಠ್ಠಲಬಾಯಿ ಝುವೇರಿ ಅವರು ಒಂದು ಸಂಸ್ಮರಣ ಗ್ರಂಥವನ್ನು ಅವರಿಗೆ ಸಲ್ಲಿಸಲು ನಿರ್ಧರಿಸಿದ್ದರು. ಈ ಸಂಚಿಕೆಗೆ ದಿವಾಕರರು ತಮ್ಮ ಒಂದು ಲೇಖನವನ್ನೂ ಕೊಟ್ಟಿದ್ದರಲ್ಲದೇ ಅದು ಮುದ್ರಣವೂ ಆಗಿತ್ತು ಎಂಬುದು ಇಲ್ಲಿ

ಗಮನಾರ್ಹ. ಚಲೇಜಾವ ಚಳುವಳಿ ಪ್ರಾರಂಭಗೊಂಡ ಒಂದು ವರ್ಷದ ನಂತರ ಗಾಂಧೀಜಿಯವರು ಆಗಾಖಾನ್ ಅರಮನೆಯಲ್ಲಿ ಬಂಧಿತರಾಗಿದ್ದಾಗಲೇ ಅವರ ಆಪ್ತ ಕಾರ್ಯದರ್ಶಿ ಮಹಾದೇವ ದೇಸಾಯಿ ನಿಧನರಾದರು. ಕಸ್ತೂರಬಾ ಸಹ ತೀರಿ ಹೋದರು. ಇದಾದ ನಂತರ ಗಾಂಧೀಜಿಯವರು ಸ್ವಯಂ ಶುದೀಕರಣ ಸಲುವಾಗಿ ಉಪವಾಸ ಸತ್ಯಾಗ್ರಹ ಕೈಕೊಳ್ಳಲು ೧೬ ದಿನಗಳ ನಂತರ ಹಣ್ಣಿನ ರಸವನ್ನು ಸೇವಿಸಲು ಅವರು ಪ್ರಾರಂಭಿಸಿದರು. ಇದು ನಡೆದಿದ್ದು ೧೯೪೩ ಫೆಬ್ರುವರಿಯ ಸುಮಾರು. ಆಗ ಚಳುವಳಿ ಸ್ವಲ್ಪ ಮಂದಗತಿಯಾಗಿತ್ತೆಂಬ ವರದಿಗಳಿದ್ದವು. ಗಾಂಧೀಜಿಯವರ ಉಪವಾಸ ನಡೆದಾಗಲೂ ಸಹ ದಿವಾಕರರು ಭೂಗತರಾಗಿಯೇ ಇದ್ದರು. ಆದರೆ ತಮ್ಮ ಕಳವಳವನ್ನು ಹಾಗೂ ಮುಂಬೈ ಕರ್ನಾಟಕದಲ್ಲಿಯ ಚಳುವಳಿಯ ವಿವರಗಳನ್ನು ದೇವದಾಸ ಗಾಂಧೀಜಿಯವರ ಮೂಲಕ ಮಹಾತ್ಮಾಜಿಯವರಿಗೆ ವಿಷಯ ತಲುಪಿಸುತ್ತಿದ್ದರು. ಮುಂಬೈ ಕರ್ನಾಟಕದಲ್ಲಿ ಚಳುವಳಿ ಬಗ್ಗೆ ಗಾಂಧೀಜಿಯವರು ತಮ್ಮ ಸಮಾಧಾನ ವ್ಯಕ್ತಪಡಿಸಿದರೂ ಸಹ ಈಗಿರುವ ರೀತಿಯಲ್ಲಿಯೇ ಚಲೇಜಾವ ಚಳುವಳಿ ನಡೆಸುವುದು ಸರಿಯಲ್ಲ ಎಂಬ ಅಭಿಮತಕ್ಕೆ ಬಂದಂತಿತ್ತು. ಆದರೆ ಈ ಚಳುವಳಿ ಮುಂದುವರೆಯುವುದೂ ಅಷ್ಟೇ ಅವಶ್ಯಕವಿತ್ತು. ಗಾಂಧೀಜಿಯವರ ಈ ಎಲ್ಲ ಮೌಲಿಕ ಸಲಹೆ ಸೂತ್ರಗಳನ್ನು ದಿವಾಕರರು ಪಾಲಿಸುತ್ತಿದ್ದರು. ಮೇ ೧೯೪೪ ರಲ್ಲಿ ಗಾಂಧೀಜಿಯವರನ್ನು ಜೇಲಿನಿಂದ ಬಿಡುಗಡೆ ಮಾಡಿ ಕಳುಹಿಸಲಾಗಿತ್ತು. ತುಂಬಾ ಬಳಲಿದಂತಿದ್ದ ಅವರು ಕೆಲ ದಿನ ವಿಶ್ರಾಂತಿ ಪಡೆಯಬೇಕಿತ್ತು. ಅವರ ವಿಶ್ರಾಂತಿಯ ಸಮಯದಲ್ಲಿಯೇ ದಿವಾಕರ ಹಾಗೂ ಸಂಗಡಿಗರು ಗಾಂಧೀಜಿ ತಂಗಿದ್ದ ಜುಹು ಬೀಚಿನ ಮನೆಯೊಂದರಲ್ಲಿ ಅವರನ್ನು ಕಂಡರು. ಚರಕದಿಂದ ನೂಲು ತೆಗೆಯುತ್ತಿದ್ದ ಗಾಂಧೀಜಿ ದಿವಾಕರರನ್ನು ನೋಡುತ್ತಲೇ ಮುಗುಳ್ನಗುತ್ತ ''ಓ ಭೂಗತ ಬ್ರಿಗೇಡ್'' ಎಂದು ಹಾಸ್ಯ ಮಾಡಿದರು. ಆ ವರೆಗೆ ನಡೆದ ಚಳುವಳಿಯ ಎಲ್ಲ ವಿವರಗಳನ್ನು ದಿವಾಕರ ಅವರು ಗಾಂಧೀಜಿಗೆ ತಿಳಿಸಿದರು. ಮುಂದಿನ ಮಾರ್ಗದರ್ಶನವನ್ನೂ ನೀಡಲು ವಿನಂತಿಸಿದರು. ಆ ಹಂತದಲ್ಲಿ ಗಾಂಧೀಜಿಯವರು ಮಾತನಾಡುತ್ತ ಚಳುವಳಿ ಮುಂದುವರೆಯಬೇಕು, ಆದರೆ ಭೂಗತರಾಗುವುದು ಸರಿ ಎನಿಸುವುದಿಲ್ಲ ಎಂದು ಅಭಿಪ್ರಾಯ ಪಟ್ಟರು. ಇಷ್ಟಾದರೂ ಸಹ ನನಗೆ ನೀವು ಪೊಲೀಸರೆಡೆಗೆ ತೆರಳಿ ಬಂಧಿತರಾಗಬೇಕೆಂದು ಎನ್ನಿಸುವುದಿಲ್ಲ ಎಂದರು. ದಿವಾಕರರು ನಂತರ ೧೭ ಮೇ ೧೯೪೪ ರಂದು ವಿವರವಾದ ಪತ್ರವೊಂದನ್ನು ಗಾಂಧೀಜಿಗೆ ಬರೆದರು. ಅದರಲ್ಲಿ ತಾವು ಏಕೆ ಭೂಗತರಾಗಬೇಕಾಯಿತು ಎಂಬುದನ್ನು ವಿವರಿಸಿದರು. ಇದಕ್ಕೆ ಕೂಡಲೇ ಉತ್ತರಿಸಿದ ಗಾಂಧೀಜಿ ನಿಮ್ಮದೊಂದು ಒಳ್ಳೆಯ ಪತ್ರ. ಭೂಗತರಾಗಬೇಕೆಂಬುದು ನೀವು ತೆಗೆದುಕೊಂಡಿರುವ ನಿರ್ಧಾರ ಸರಿ. ಅದರಂತೆ ನನ್ನದೂ ಕೂಡ. ನೀವು ನಿಮ್ಮ ಆತ್ಮ ಸಾಕ್ಷಿಗೆ ನಡೆದುಕೊಳ್ಳಿರಿ. ನನ್ನನ್ನು ನೀವು ಚೆನ್ನಾಗಿ ಬಲ್ಲಿರಿ. ಮತ್ತೆ ನನ್ನಿಂದ ಮಾರ್ಗದರ್ಶನ ಅಪೇಕ್ಷಿಸುವುದು ಸರಿಯೇ? ಎಂದಿದ್ದರು.

ಇದೆಲ್ಲ ತುಮುಲಗಳ ನಂತರ ದಿವಾಕರ ಅವರಿಗೆ ಗಾಂಧೀಜಿ ವಿಚಾರ ಸರಣಿ ಸರಿ ಎನಿಸಿತು. ಭೂಗತರಾಗುವ ಬದಲು ಮುಕ್ತವಾಗಿಯೇ ಸತ್ಯಾಗ್ರಹ ಕೈಕೊಳ್ಳುವುದು ಉಚಿತ ಎನಿಸಿತು. ಇದರ ಅಂಗವಾಗಿ ಅವರು ಗಾಂಧೀಜಿಯವರಿಗೆ ಮತ್ತೆ ಪತ್ರವನ್ನು ಬರೆದರು.

ಆಗ ಗಾಂಧೀಜಿ ಪಂಚಗಣಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆಗ ಉತ್ತರಿಸಿದ ಗಾಂಧೀಜಿ ತಮಾಷೆಯಾಗಿ ದಿವಾಕರ ಅವರಿಗೆ, ಹೇಗೋ ನಿಮ್ಮ ಸುಳಿವಿಗೆ ಐದು ಸಹಸ್ರ ರೂಪಾಯಿ ಬಹುಮಾನ ಇಡಲಾಗಿದೆ. ನೀವು ಪಂಚಗಣಿಗೆ ಬಂದು ಬಂಧಿತರಾದರೆ ಅದರೆ ಸಿಕ್ಕುವ ಬಹುಮಾನದ ಫಂಡನ್ನು ಹರಿಜನ ನಿಧಿಗಾದರೂ ಜಮೆ ಮಾಡಬಹುದಲ್ಲ ಎಂದಿದ್ದರು.

ಗಾಂಧೀಜಿ ಪುನಃ ಜುಲೈ ೨೦ ರಂದು ದಿವಾಕರರಿಗೆ ಪತ್ರ ಬರೆದು ಭೂಗತರಾದವರೆಲ್ಲ ಪ್ರಕಟವಾಗುವುದು ಸೂಕ್ತ ಎಂದರು. ಈ ಆದೇಶಕ್ಕೆ ದಿವಾಕರರು ಕೂಡಲೇ ಪ್ರತಿಕ್ರಿಯಿಸಿದರು. ಗಾಂಧೀಜಿಯವರು ಅವರಿಗೆ ಬರೆದಿದ್ದ ಪತ್ರಗಳ ಪ್ರತಿಗಳನ್ನೆಲ್ಲ ತಮ್ಮ ಭೂಗತ ಸಹೋದ್ಯೋಗಿಗಳಿಗೆಲ್ಲ ಹಂಚಿದರು. ಏಕೆಂದರೆ ಗಾಂಧೀಜಿಯವರ ನಿರ್ದೇಶನ ಎಲ್ಲರಿಗೂ ಅವಶ್ಯವಾಗಿತ್ತು. ಪ್ರಕಟಗೊಳ್ಳುವ ನಿರ್ಧಾರದಂತೆ ದಿವಾಕರರು ಹುಬ್ಬಳ್ಳಿಗೆ ತಕ್ಷಣವೇ ತೆರಳಿದರು. ಆಗ ಹಬ್ಬಿದ ವದಂತಿಗಳ ಪ್ರಕಾರ ೧೯೪೪ ಅಗಷ್ಟ ಎಂಟರಂದು ದಿವಾಕರ ಅವರು ಬೆಂಗಳೂರು, ಹುಬ್ಬಳ್ಳಿ ಟ್ರೇನ್ ಮೂಲಕ ಹುಬ್ಬಳ್ಳಿಯಲ್ಲಿ ಬಂದು ಬಂಧಿತರಾಗುವ ಸಂಭವವಿದೆ ಎನ್ನಲಾಗಿತ್ತು. ಈ ಟ್ರೇನು ರಾತ್ರಿ ೧೦ ಗಂಟೆಗೆ ಹುಬ್ಬಳ್ಳಿಯನ್ನು ತಲುಪುವದಿತ್ತು. ರೇಲ್ವೆ ನಿಲ್ದಾಣದಲ್ಲಿ ಸುಮಾರು ೫೦ ಜನ ಪೊಲೀಸರು ಶಸ್ತ್ರಾಸ್ತ್ರಗಳೊಂದಿಗೆ ದಿವಾಕರರನ್ನು ಬಂಧಿಸಲು ಕಾದಿದ್ದರು. ಸಂಯುಕ್ತ ಕರ್ನಾಟಕ ಪತ್ರಿಕೆಯ ಹಲವಾರು ಕಾರ್ಯಕರ್ತರೂ ಸಹ ಅಲ್ಲಿ ಇದ್ದರು. ಟ್ರೇನು ಹುಬ್ಬಳ್ಳಿ ರೇಲ್ವೆ ನಿಲ್ದಾಣಕ್ಕೆ ಬಂದಿಳಿದಂತೆ ದಿವಾಕರರು ಅದರಲ್ಲಿ ಕಾಣಲೇ ಇಲ್ಲ. ಆದರೆ ಓರ್ವ ಕಾರ್ಯಕರ್ತ ಅವನು ಗುರುತಿಸಿದ್ದ. ಆದರೆ ಇಡೀ ಹುಬ್ಬಳ್ಳಿ ರೇಲ್ವೆ ನಿಲ್ದಾಣದಲ್ಲಿ ದಿವಾಕರ ಬಂದಿದ್ದಾರೋ ಇಲ್ಲವೋ ಎಂಬ ಗೊಂದಲ ಉಂಟಾಗಿತ್ತು.

ಅದೇ ಟ್ರೇನಿನಿಂದ ಪೊಲೀಸರ ಎದುರಿಗೆ ಮಿಂಚಿನಂತೆ ತೆರಳಿದ ರಂಗನಾಥ ದಿವಾಕರ ಹುಬ್ಬಳ್ಳಿಯ ಕಿಲ್ಲೆಯಲ್ಲಿದ್ದ ತಮ್ಮ ಮನೆಗೆ ಸುರಕ್ಷಿತವಾಗಿ ತಲುಪಿದರು. ಅಲ್ಲಿದ್ದ ತಮ್ಮ ವೃದ ತಾಯಿಯನ್ನು ಕಂಡು ನಮಸ್ಕರಿಸಿದರು. ಹಾಗೂ ತಾವು ಹುಬ್ಬಳ್ಳಿಗೆ ಬಂದಿರುವುದಾಗಿಯೂ ತಿಳಿಸಿದರು. ಮರುದಿನ ಅವರು ಸಂಯುಕ್ತ ಕರ್ನಾಟಕ ಪತ್ರಿಕಾ ಕಛೇರಿಗೆ ಆಗಮಿಸಿದರು. ಹಾಗೂ ತಾವೇ ಸ್ವತಃ ಪೊಲೀಸ್ ಠಾಣೆಗೆ ಫೋನು ಮಾಡಿ ತಾವು ತಮ್ಮ ಪತ್ರಿಕಾ ಕಛೇರಿಯಲ್ಲಿಯೇ ಇರುವುದಾಗಿಯೂ ತಿಳಿಸಿದರು. ಕೂಡಲೇ ಪತ್ರಿಕಾಲಯಕ್ಕೆ ಆಗಮಿಸಿದ ಪೊಲೀಸರು ದಿವಾಕರರನ್ನು ಬಂಧಿಸಿದರು. ನಂತರ ಅವರನ್ನು ಬೆಳಗಾವಿಯ ಹಿಂಡಲಗಾ ಜೇಲಿಗೆ ಕಳಿಸಲಾಯಿತು.

೯ ಅಗಷ್ಟ ೧೯೪೨ ರಂದು ದಿವಾಕರರವರು ಮುಂಬೈಯ ಗವಾಲಿಯ ಮೈದಾನದಿಂದ ಭೂಗತರಾಗಿದ್ದರು. ಅವರು ಸರಿಯಾಗಿ ಎರಡು ವರ್ಷಗಳ ನಂತರ ಇದೇ ದಿನ ಪ್ರಕಟಗೊಂಡರು. ನಂತರ ಅವರನ್ನು ೧೯೪೫ ಜುಲೈ ೨೫ ರಂದು ಬಿಡುಗಡೆಗೊಳಿಸಲಾಯಿತು. ಆಗ ಹಿಂಡಲಗಾ ಜೇಲನ್ನು ಸ್ವಾತಂತ್ರ್ಯಯೋಧರು ಪ್ರೀತಿಯಿಂದ ಸ್ವರಾಜ್ಯ ಆಶ್ರಮ ಎಂದೇ ಕರೆಯುತ್ತಿದ್ದರು. ದಿವಾಕರ ಅವರದು ಈ ಸ್ವರಾಜ್ಯ ಆಶ್ರಮಕ್ಕೆ ಅದೇ ಕೊನೆಯ ಭೇಟಿಯಾಗಿತ್ತು.

■

# ಸ್ವಾತಂತ್ರ್ಯದ ಉದಯ ಮತ್ತು ಅಧಿಕಾರ

ಸ್ವರಾಜ್ಯ ಆಶ್ರಮಕ್ಕೆ ೧೯೪೫ ರಲ್ಲಿ ಕೊನೆಯ ಭೆಟ್ಟಿ ಮತ್ತು 'ಕೊನೆಯ ನಮಸ್ಕಾರ' ಹೇಳಿದ ನಂತರ ದಿವಾಕರ ಅವರ ಭವಿಷ್ಯವು ಸೇರಿದಂತೆ ಹಿಂದುಸ್ಥಾನದಲ್ಲಿ ಹೊಸ ಪರ್ವವೇ ಉದಯವಾದಂತಾಯಿತು. ಆಗ ದಿವಾಕರರು ರಾಷ್ಟ್ರ ಮಟ್ಟದ ಮೊದಲ ದರ್ಜೆಯ ಧುರೀಣರಲ್ಲಿ ಒಬ್ಬರೆಂದು ಪರಿಗಣಿತರಾಗಿದ್ದರು.

ಮಹಾತ್ಮಾ ಗಾಂಧೀಜಿಯವರ ಸಂಗಡ ಅವರ ಆತ್ಮೀಯತೆ, ಸತತ ಸಂಪರ್ಕ ರಾಜ್ಯ ಘಟನೆಯ ಬಗ್ಗೆ ಮಾಡಿದ್ದ ಚರ್ಚೆ, ಆಸಕ್ತಿ, ಇದಲ್ಲದೇ ಜವಾಹರಲಾಲ ನೆಹರು, ಸರ್ದಾರ ಪಟೇಲ್, ಬಾಬು ರಾಜೇಂದ್ರ ಪ್ರಸಾದ, ಚಕ್ರವರ್ತಿ ರಾಜಗೋಪಾಲಾಚಾರಿ, ಕನ್ನಯ್ಯಲಾಲ ಮುನ್ಷಿ ಮುಂತಾದ ಧುರೀಣರ ಸಂಗಡ ದಿವಾಕರರಿಗೆ ಇದ್ದ ಸಂಪರ್ಕ ಇವೆಲ್ಲವು ಅವರನ್ನು ವಿವಾದಾತೀತ ಧುರೀಣರನ್ನಾಗಿ ಮಾಡಿದ್ದವು. ೧೯೪೫ ರ ನಂತರ ಹೆಚ್ಚು ಕಡಿಮೆ ಎರಡನೇ ಮಹಾಯುದ ಮುಕ್ತಾಯಗೊಂಡಂತಾಗಿತ್ತು. ೧೯೪೨ ರಲ್ಲಿ ದೇಶದಲ್ಲಿ ಕೋಲಾಹಲ ಎಬ್ಬಿಸಿದ್ದ ಚಲೇಜಾವ ಚಳುವಳಿಯಿಂದ ಬ್ರಿಟಿಷ್ ಸರಕಾರ ಎದೆ ನಡುಗಿತ್ತು. ಇದಲ್ಲದೆ ೧೯೪೫ ರಲ್ಲಿ ಬ್ರಿಟನ್‌ನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮೇಜರ್ ಆ್ಯಟ್ಲಿ ಅವರ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು. ಈ ಪಕ್ಷ ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಸಹಾನುಭೂತಿಯಿಂದ ಇತ್ತು. ಹೀಗಾಗಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕುವುದು ಕಷ್ಟಕರವಲ್ಲ ಎಂದೆನಿಸತೊಡಗಿತು. ಮುಂದೆ ನಡೆದ ಘಟನೆಗಳಿಗಾಗಿ ಭಾರತದ ಸ್ವಾತಂತ್ರ ೧೯೪೭ ಅಗಷ್ಟ ೧೫ ರಂದು ದೊರಕುವುದು ಖಾತ್ರಿಯಾಯಿತು. ದೇಶದ ವಿಭಜನೆಯೊಂದಿಗೆ ಸ್ವಾತಂತ್ರ್ಯವೂ ದೊರಕಿತು ಹಾಗೂ ೧೯೫೦ ಜನೇವರಿ ೨೬ ರಂದು ಭಾರತ ಸಾರ್ವಭೌಮ ಪ್ರಜಾರಾಜ್ಯವಾಯಿತು.

೧೮೮೫ ರಲ್ಲಿ ಸ್ಥಾಪಿತಗೊಂಡಿದ್ದ ಕಾಂಗ್ರೆಸ್ ಪಕ್ಷ ಭಾರತದ ಸ್ವಾತಂತ್ರ್ಯದೊಂದಿಗೆ ತನ್ನ ಒಂದು ಗುರಿಯನ್ನು ತಲುಪಿತ್ತು. ರಂಗನಾಥ ದಿವಾಕರ ಅವರು ಸ್ವಾತಂತ್ರ್ಯದ ಗಳಿಕೆ ಸಮೀಪಿಸುತ್ತಿದ್ದಂತೆಯೇ ದೇಶದ ರಾಜ್ಯ ಘಟನೆಯ ನಿರ್ವಹಣೆಯಲ್ಲಿ ಮಹತ್ವದ ಪಾತ್ರ

ವಹಿಸತೊಡಗಿದರು. ಇಷ್ಟಾಗುತ್ತಿದ್ದಂತೆಯೇ ಅವರು ಸಂಸತ್ತಿನ ರಾಜ್ಯ ಸಭೆಯ ಸದಸ್ಯರೂ ಆದರು. ೧೯೪೮ ರ ಮಧ್ಯದಲ್ಲಿ ದಿವಾಕರ ಅವರು ಪಂಡಿತ ಜವಾಹರಲಾಲ ನೆಹರು ಅವರ ಸಚಿವ ಸಂಪುಟವನ್ನು ಸೇರಿ ವಾರ್ತಾ ಮತ್ತು ಪ್ರಸಾರ ಖಾತೆಯ ರಾಜ್ಯ ಸಚಿವರಾದರು. ಅದು ಕರ್ನಾಟಕದ ಈ ಭಾಗಕ್ಕೆ ಸ್ವತಂತ್ರ ಭಾರತದಲ್ಲಿ ದೊರೆತ ಮೊದಲ ಹುದ್ದೆಯಾಗಿತ್ತು. ಇದರ ಜೊತೆಗೆ ದಿವಾಕರ ಅವರ ಸೇವೆಯನ್ನು ಪರಿಗಣಿಸಿದಂತಾಗಿತ್ತು. ದಿವಾಕರ ಅವರು ಪ್ರಸಾರ ಖಾತೆಯ ಮಂತ್ರಿಗಳಾಗುತ್ತಿದ್ದಂತೆ ದಿಲ್ಲಿ ಆಕಾಶವಾಣಿ ಕೇಂದ್ರದಿಂದ ಪ್ರತಿದಿನ ಬೆಳಿಗ್ಗೆ ೭.೩೦ಕ್ಕೆ ಕನ್ನಡ ವಾರ್ತೆ ಪ್ರಾರಂಭವಾಯಿತು. ಇದು ಕನ್ನಡಿಗರಿಗೆ ನೀಡಿದ ಮೊಟ್ಟ ಮೊದಲ ಕೊಡುಗೆಯಾಗಿತ್ತು. ನಂತರ ಧಾರವಾಡದಲ್ಲಿ ಆಕಾಶವಾಣಿ ಕೇಂದ್ರವನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನೂ ಕೈಕೊಂಡರು. ಇದು ತ್ವರಿತಗತಿಯಲ್ಲಿ ನಡೆಯಿತಲ್ಲದೇ ೧೯೫೦ ಜನೆವರಿ ಮೂರನೇ ವಾರದಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದ ಉದ್ಘಾಟನೆಯೂ ನೆರವೇರಿತು. ಅಲ್ಲಿಯವರೆಗೆ ಉತ್ತರ ಕರ್ನಾಟಕದ ಕನ್ನಡಿಗರು ಮುಂಬೈ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗುತ್ತಿದ್ದ ಕನ್ನಡ ಕಾರ್ಯಕ್ರಮಗಳನ್ನು ಕೇಳಬೇಕಾಗುತ್ತಿತ್ತು.

ಸಚಿವ ದಿವಾಕರರ ಮನೆಯಲ್ಲಿ ಎರಡು ರೇಡಿಯೋ ಸೆಟ್‌ಗಳಿದ್ದವು. ಒಂದನ್ನು ಸರಕಾರವೇ ಉಚಿತವಾಗಿ ಅವರಿಗೆ ಕೊಟ್ಟಿತ್ತು. ಇನ್ನೊಂದು ಅವರ ಸ್ವಂತದ್ದು. ಆಗ ಪ್ರತಿ ರೇಡಿಯೋಗಳಿಗೂ ಪ್ರತಿ ತಿಂಗಳು ನಿರ್ದಿಷ್ಟ ಪಡಿಸಿದ ಶುಲ್ಕವಿತ್ತು. ಆ ಹಣವನ್ನು ತುಂಬದಿದ್ದಲ್ಲಿ ರೇಡಿಯೋ ಇನ್‌ಸ್ಪೆಕ್ಟರುಗಳು ಬಂದು ದಂಡ ವಿಧಿಸುತ್ತಿದ್ದರಲ್ಲದೇ ರೇಡಿಯೋ ಸೆಟ್‌ನ್ನು ಸಹ ಜಪ್ತ ಮಾಡುತ್ತಿದ್ದರು. ತಮ್ಮ ಸ್ವಂತ ರೇಡಿಯೋ ಸೆಟ್‌ಗೆ ದಿವಾಕರರು ಪ್ರತಿತಿಂಗಳು ೧೫ ರೂ. ಸರಕಾರ ನಿರ್ದಿಷ್ಟ ಪಡಿಸಿದ್ದ ಹಣವನ್ನು ತುಂಬುತ್ತಿದ್ದರು ಎಂಬುದು ಇಲ್ಲಿ ಉಲ್ಲೇಖನೀಯ. ಪಂಡಿತ ನೆಹರು ಸೇರಿದಂತೆ ಕೇಂದ್ರ ಸಚಿವ ಸಂಪುಟದಲ್ಲಿದ್ದ ಎಲ್ಲ ಸಚಿವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದವರೇ. ಹೀಗಾಗಿ ದಿವಾಕರರಿಗೆ ಎಲ್ಲ ಸಚಿವರ ಪರಿಚಯ ನಿಕಟವಾಗಿತ್ತು. ಒಮ್ಮೆ ದಿವಾಕರ ಅವರು ತಮ್ಮ ನಿವಾಸದ ಅಂಗಳದಲ್ಲಿಯೇ ಪ್ರಧಾನಿ ಪಂಡಿತ ನೆಹರು ಸೇರಿದಂತೆ ಸಚಿವ ಸಂಪುಟ ಸದಸ್ಯರಿಗೆ ಸಂತೋಷ ಕೂಟವನ್ನು ಏರ್ಪಡಿಸಿದ್ದರು.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿಯೇ ಅಂದರೆ ಪತ್ನಿ ರಾಧಾಬಾಯಿಯವರು ಪುತ್ರ ಅನಂತನನ್ನು ಹೆತ್ತು (ಅನಂತ ದಿವಾಕರ ಅವರ ಜನನ ೧೪ ಸೆಪ್ಟೆಂಬರ್ ೧೯೩೧) ಕೆಲವೇ ದಿನಗಳಲ್ಲಿ ನಿಧನರಾದರು. ಭವ್ಯವಾದ ಸಚಿವರ ನಿವಾಸದಲ್ಲಿ ಅವರೊಂದಿಗೆ ಪುತ್ರ ಬಾಬು ಎಂದು ಅಚ್ಚೆಯಿಂದ ಕರೆಯಲಾಗುತ್ತಿದ್ದ ಅನಂತ ಹಾಗೂ ದಿವಾಕರ ಅವರ ಖಾಸಗಿ ಕಾರ್ಯದರ್ಶಿ ಶ್ರೀನಿವಾಸರಾವ್, ತಂಗಿಯ ಮಗ ಹನುಮಂತ ಗುತ್ತಲ ಕೆಲ ಕಾಲ ಅವರ ಖಾಸಗಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ ಮಥಿಯ್‌ರಾವ್ ಕೌಜಲಗಿ ಇಷ್ಟೇ ಜನರಿದ್ದರು. ಬೆಳಿಗ್ಗೆ ೮ ಗಂಟೆಗೆ ಮುಂಜಾನೆಯ ತಿಂಡಿ ಆಯಿತೆಂದರೆ ದಿವಾಕರ ಅವರು

ಮುಂದೆ ಆ ದಿನದ ಚಟುವಟಿಕೆಗಳಿಗೆ ಸಿದರಾಗುತ್ತಿದ್ದರು. ಅವರ ವೇಷಭೂಷಣವು ಅರ್ಧ ಅರ್ವಾಚೀನವೂ ಆಗಿಜಯಿರಿತ್ತಿದ್ದವು. ಪ್ಯಾಂಟು, ಶರ್ಟ್ ಮೇಲೆ ಗಾಂಧೀ ಟೋಪ್ಪಿಗೆ ಧರಿಸಿ ಅವರು ಕಛೇರಿಗೆ ಹೋಗುತ್ತಿದ್ದರು. ಸಂಸತ್ ಅಧಿವೇಶನ ಪ್ರಾರಂಭವಾದಾಗ ಒಂದು ಗಂಟೆ ಮುಂಚಿತವಾಗಿಯೇ ಅವರು ಸಂಸತ್ ಭವನಕ್ಕೆ ತೆರಳುತ್ತಿದ್ದರು. ತಮ್ಮ ಮಂತ್ರಿ ಶಾಖೆಗೆ ಸಂಬಂಧಿಸಿದ ಪ್ರಶ್ನೆ ಉತ್ತರಗಳು ಮತ್ತಿತರ ಟಿಪ್ಪಣಿಗಳ ಅಧ್ಯಯನವನ್ನು ಅವರು ಮಾಡುತ್ತಿದ್ದರು. ೧೯೫೨ರಲ್ಲಿ ದೇಶದಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆಗಳು ನಡೆದವು. ಆಗಲೇ ಅವರು ರಾಜ್ಯಸಭೆ ಸದಸ್ಯರಾಗಿದ್ದರು. ಆದರೆ ಲೋಕಸಭೆಗೆ ಸ್ಪರ್ಧಿಸಿ ತಾವು ಸಕ್ರಿಯ ರಾಜಕಾರಣದಲ್ಲಿ ಪಾಲ್ಗೊಳ್ಳಬೇಕೆಂಬ ಇಚ್ಛೆ ಅವರದಿತ್ತು. ಆದರೆ ಈ ಇಚ್ಛೆ ಈಡೇರಲೇ ಇಲ್ಲ. ಏಕೆಂದರೆ ಚುನಾವಣೆ ಘೋಷಣೆಗೆ ಮೊದಲೇ ಅವರನ್ನು ಬಿಹಾರದ ರಾಜ್ಯಪಾಲ ಎಂದು ರಾಷ್ಟ್ರಪತಿಯವರು ನೇಮಕ ಮಾಡಿದರು. ಅವರ ನಿಕಟವರ್ತಿಗಳು ಆಗಿದ್ದ ಮತ್ತೊಬ್ಬ ಸಚಿವ ಕೆ.ಎಮ್. ಮುನ್ಷಿಯವರನ್ನು ಉತ್ತರ ಪ್ರದೇಶದ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗಿತ್ತು. ದಿವಾಕರ ಹಾಗೂ ಮುನ್ಷಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಆತ್ಮೀಯರಾಗಿದ್ದರು. ತುಂಬಾ ಸ್ನೇಹಿತರೂ ಆಗಿದ್ದರು. ಇಬ್ಬರೂ ಒಂದೇ ಬಾರಿಗೆ ಸಚಿವರಾಗಿದ್ದರು ಹಾಗೂ ಒಂದೇ ಬಾರಿಗೆ ರಾಜ್ಯಪಾಲರೂ ಆದರು. ಇದಾದ ನಂತರ ಮುಂಬೈಯಲ್ಲಿ ಮುನ್ಷಿಯವರು ಭಾರತೀಯ ವಿದ್ಯಾಭವನವನ್ನು ಪ್ರಾರಂಭಿಸಿದರು. ನಂತರ ಮುನ್ಷಿಯವರು ವಿದ್ಯಾಭವನದ ಪ್ರಕಟಣೆಗಳ ಹಾಗೂ ಭವನ್ಸ್ ಜರ್ನಲ್‌ನ ಸಂಪಾದಕರೂ ಆದರು. ದಿವಾಕರ ಅವರು ಪ್ರಕಟಣೆಗಳ ಜಂಟಿ ಸಂಪಾದಕರು ಆದರು. ರಾಜ್ಯಪಾಲರ ನೇಮಕದ ಆದೇಶ ಬಂದ ಮೇಲೆ ಕೆ.ಎಮ್. ಮುನ್ಷಿಯವರು ದಿವಾಕರ ಅವರಿಗೆ ದೂರವಾಣಿ ಕರೆ ಮಾಡಿ ''ಸ್ವಾಮಿ ದಿವಾಕರರೇ ನಾವು ರಾಜ್ಯಪಾಲರಾಗಿದ್ದೇವೆ. ಇದು ನಮಗೆ ಬಡ್ತಿಯೋ, ಹಿಂಬಡ್ತಿಯೋ ?'' ಎಂದರು. ಇದೇ ಜಾಡನ್ನು ಹಿಡಿದು ದಿವಾಕರ ಅವರು ಮಾತನಾಡಿ, 'ಸ್ವಾಮೀ ನಾನು ನಿಮಗೆ ಧನ್ಯವಾದ ಹೇಳಬೇಕೋ ಇಲ್ಲವೇ ಸಾಂತ್ವನ ಹೇಳಬೇಕೋ' ಎಂದು ಕೇಳಿದರು. ಪರಸ್ಪರರ ಮಾತಿನಲ್ಲಿ ಚೇಷ್ಟೆಯೂ ಇತ್ತು ಹಾಗೂ ನೋವೂ ಇತ್ತು.

ಬಿಹಾರದ ರಾಜ್ಯಪಾಲರಾಗಿ ೧೯೫೨ ಎಪ್ರಿಲ್‌ದಲ್ಲಿ ದಿವಾಕರರು ತಮ್ಮ ಅಧಿಕಾರ ಸ್ವೀಕರಿಸಿದರು. ಅಲ್ಲಿ ಅವರು ಐದು ವರ್ಷಗಳ ಕಾಲ ಇದ್ದರು. ದೇಶದ ಪ್ರಥಮ ರಾಷ್ಟ್ರಪತಿ ಆಗಿದ್ದ ಡಾ. ರಾಜೇಂದ್ರ ಪ್ರಸಾದ ಅವರ ಸ್ವಂತ ರಾಜ್ಯವೂ ಬಿಹಾರ ಆಗಿತ್ತು. ಮೊದಲಿನಿಂದಲೂ ರಾಜೇಂದ್ರ ಪ್ರಸಾದ ಅವರಿಗೂ ದಿವಾಕರ ಅವರಿಗೂ ಅಚ್ಚುಮೆಚ್ಚು. ಬಿಹಾರಿಗೆ ರಾಜೇಂದ್ರ ಪ್ರಸಾದ ಬಂದಾಗ ದಿವಾಕರರು ಬಿಹಾರ ರಾಜ್ಯದ ಅಭಿವೃದಿಯ ಬಗ್ಗೆ ಚರ್ಚೆ ನಡೆಸುತ್ತಿದ್ದರು. ದಿವಾಕರ ಅವರ ಒತ್ತಾಯದಿಂದಲೇ ರಾಷ್ಟ್ರಪತಿಯಾಗಿದ್ದ ರಾಜೇಂದ್ರ ಪ್ರಸಾದ ಅವರು ತಮ್ಮ ಆಳ್ವಿಕೆಯಲ್ಲಿ ಉತ್ತರ ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಹುಬ್ಬಳ್ಳಿಗೂ ಸಹ ಬಂದಿದ್ದರು.

ತಮ್ಮ ಅಧಿಕಾರಾವಧಿಯಲ್ಲಿ ದಿವಾಕರ ಅವರು ಆ ರಾಜ್ಯದ ವಿದ್ವಾಂಸರನ್ನೆಲ್ಲ ಸಭೆ ಸೇರಿಸಿ, ಬಿಹಾರದ ಇತಿಹಾಸದ ಬಗ್ಗೆ ಒಂದು ಗ್ರಂಥವನ್ನು ಬರೆಯಬೇಕೆಂದು ಸೂಚಿಸಿದರು. ಇದಕ್ಕೆ ಅಗತ್ಯವಾದ ನೆರವು ಹಾಗೂ ಮಾರ್ಗದರ್ಶನ ಮಾಡಿದರು. ಹೀಗಾಗಿ Bihar Through the Ages ಎಂಬ ವಿದ್ವತ್‌ಪೂರ್ಣ ಗ್ರಂಥ ನಿರ್ಮಾಣವಾಯಿತು. ಬಿಹಾರದ ಮಹತ್ವ, ಇತಿಹಾಸ, ಪರಂಪರೆ ಎಲ್ಲರಿಗೂ ಇದರಿಂದಾಗಿ ತಿಳಿಯುವಂತಾಯಿತು. ಇದು ದಿವಾಕರ ಅವರು ಬಿಹಾರಿಗಳಿಗೆ ನೀಡಿದ ದೇಣಿಗೆ ಎಂದೇ ಭಾವಿಸಲಾಗಿತ್ತು. ಈಗ ಪ್ರತ್ಯೇಕ ರಾಜ್ಯವಾಗಿರುವ ಝಾರಖಂಡ ರಾಜಧಾನಿಯಾಗಿರುವ ರಾಂಚಿ ಆಗ ಬಿಹಾರದ ಬೇಸಿಗೆ ರಾಜಧಾನಿಯಾಗಿತ್ತು. ಅಲ್ಲಿಯೂ ಕೆಲಕಾಲ ದಿವಾಕರ ವಾಸಿಸುತ್ತಿದ್ದರು. ೧೯೫೭ ರಲ್ಲಿ ರಾಜ್ಯಪಾಲ ಹುದ್ದೆಯಿಂದ ದಿವಾಕರ ಅವರು ಬಿಡುಗಡೆ ಹೊಂದಿದರು. ಎಲ್ಲಿದ್ದರೂ ಉತ್ತರ ಕರ್ನಾಟಕಿಯರಂತೆಯೇ ದಿವಾಕರ ಅವರ ಭೋಜನ ಇರುತ್ತಿತ್ತು. ಹೀಗಾಗಿ ರಾಜಭವನದಲ್ಲಿಯೂ ಉಪ್ಪಿಟ್ಟು, ಮುದ್ದಿ ಪಲ್ಲೆ (ಹಸಿರು ತೊಪ್ಪಲು ಪಲ್ಲೆ) ಭಕ್ರಿ, (ರೊಟ್ಟಿ) ಇವು ಸಹ ತಿನ್ನಲು ಸಿಗುತ್ತಿದ್ದವು !

■

# ಕರ್ನಾಟಕ ಏಕೀಕರಣ

ಭಾಷಾವಾರು ಪ್ರಾಂತಗಳ ರಚನೆಗೆ ಸುಮಾರು ೧೮೦ ವರ್ಷಕ್ಕೂ ಮಿಕ್ಕಿದ ಇತಿಹಾಸವಿದೆ ಎಂದರೆ ಅಚ್ಚರಿ ತರುತ್ತದೆ. ೧೮೨೩ ರಷ್ಟು ಹಿಂದೆಯೇ ಸರ್ ಥಾಮಸ್ ಮನ್ರೋ ಎಂಬ ಬ್ರಿಟಿಷ್ ಅಧಿಕಾರಿ ಈ ಬಗ್ಗೆ ವಿಚಾರ ಮಾಡಿದ್ದನು. ಇದಕ್ಕೆ ಕಾರಣವೂ ಇತ್ತು. ೧೮೧೮ ರಲ್ಲಿ ಬ್ರಿಟಿಷರು ಧಾರವಾಡ ಪ್ರದೇಶವನ್ನು ಗೆದ್ದುಕೊಂಡ ನಂತರ ಅದನ್ನು ಯಾವ ಭಾಗಕ್ಕೆ ಸೇರಿಸಬೇಕೆಂಬ ಬಗ್ಗೆ ಮದ್ರಾಸ ಹಾಗೂ ಮುಂಬೈ ಸರ್ಕಾರಗಳ ಸಂಗಡ ಪತ್ರ ವ್ಯವಹಾರ ನಡೆಯಿತು. ಮನ್ರೋ ಅವರ ಪ್ರಕಾರ ಬೆಳಗಾವಿ, ವಿಜಾಪೂರ ಸೇರಿದಂತೆ ಧಾರವಾಡ ಪ್ರದೇಶವನ್ನು ಮುಂಬೈ ಪ್ರಾಂತಕ್ಕೆ ಹಾಗೂ ಮೈಸೂರು, ಬಳ್ಳಾರಿ ಮೊದಲಾದ ಪ್ರದೇಶಗಳನ್ನು ಮದ್ರಾಸ ಭಾಗಕ್ಕೆ ಜೋಡಿಸಬೇಕೆಂದು ಅವರು ಸೂಚಿಸಿದರು. ಇದರ ಅರ್ಥವೆಂದರೆ ಈ ಎರಡೂ ಭಾಗಗಳಲ್ಲಿ ಕನ್ನಡ ಭಾಷೆಯೇ ಪ್ರಾಧಾನ್ಯವಾಗಿದ್ದರೂ ಆಗ ಈಸ್ಟ ಇಂಡಿಯಾ ಕಂಪನಿ ಹಾಗೂ ಆಡಳಿತದ ದೃಷ್ಟಿಕೋನದಿಂದ ಈ ವಿಭಜನೆಯನ್ನು ಮಾಡಿದರು.

ಬ್ರಿಟಿಷರು ಯಾವಾಗಲೂ ಗೆದ್ದ ಪ್ರಾಂತಗಳನ್ನು ಅವುಗಳಷ್ಟಕ್ಕೆ ಬಿಡುತ್ತಿರಲಿಲ್ಲ. ಅವುಗಳನ್ನು ದೊಡ್ಡ ಪ್ರಾಂತಗಳ ಬಾಲಂಗೋಚಿಯಾಗಿ ಸೇರಿಸಿ ಬಿಡುತ್ತಿದ್ದರು. ಇದಕ್ಕೆ ವಿಪರ್ಯಾಸವೆಂದರೂ ಸಹ ೧೮೬೨ ರಷ್ಟು ಹಿಂದೆಯೇ ಈಗ ಉತ್ತರ ಕನ್ನಡ, ದಕ್ಷಿಣ ಕನ್ನಡ (ಉಡುಪಿ ಜಿಲ್ಲೆಯೂ ಸೇರಿದಂತೆ) ಎಂಬ ಭೇದವನ್ನು ಮತ್ತು ವಿಭಜನೆಯನ್ನು ಮಾಡಿದರು. ಈ ಕನ್ನಡ ಜಿಲ್ಲೆಯ ಒಗ್ಗಟ್ಟು ಮುರಿಯಲೆಂದೇ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಮದ್ರಾಸ್ ಪ್ರಾಂತಕ್ಕೂ ಸೇರಿಸಿದರು. ಮೊದಲಿನ ನೂರು ವರ್ಷಗಳ ಬ್ರಿಟಿಷರ ಆಡಳಿತದಲ್ಲಿ ಬ್ರಿಟಿಷರು ಕೇವಲ ತಮಗೆ ನಿಷ್ಠೆ ಹಾಗೂ ಆಡಳಿತಕ್ಕೆ ಅನುಕೂಲ ಇರುವ ವಿಷಯವನ್ನು ಅಷ್ಟೇ ಗಮನಿಸಿದರು.

೧೯೧೮ ರಲ್ಲಿ ಹೊರಬಿದ್ದ ಮೌಂಟ್ ಫೋರ್ಡ್ ವರದಿಯಲ್ಲಿ ಹೀಗೆ ಹೇಳಲಾಗಿತ್ತು. ''ಇಂದಿನ ಬ್ರಿಟಿಷ್ ಭಾರತದ ನಕಾಶೆಯನ್ನು ಸೈನಿಕ, ರಾಜಕೀಯ ಅಥವಾ ಆಡಳಿತದ ಅವಸರದ ಅಗತ್ಯಕ್ಕಾಗಿ ಅಥವಾ ಆಗಿನ ಅನುಕೂಲತೆಗಾಗಿ ಮಾತ್ರ ರೂಪಿಸಲಾಗಿತ್ತೇ ವಿನಃ

ಹೀಗೆ ಮಾಡುವಾಗ ಜನತೆಯ ನಿಕಟ ಸಂಬಂಧವನ್ನಾಗಲಿ ಅಥವಾ ಜನತೆಯ ಇಚ್ಛೆಯನ್ನಾಗಲಿ ಗಮನಿಸಲಿಲ್ಲ. ೧೯೨೮ ರಲ್ಲಿ ಪ್ರಕಟವಾದ ನೆಹರು ಸಮಿತಿ ವರದಿಯಲ್ಲಿ ಸಂಕ್ಷಿಪ್ತವಾಗಿ ಹೀಗೆ ಹೇಳಲಾಗಿತ್ತು. ಒಂದು ಪ್ರಾಂತವು ಸುಶಿಕ್ಷಿತವಾಗಿ ತನ್ನ ದೈನಂದಿನ ಕಾರ್ಯ ಕಲಾಪವನ್ನು ತನ್ನದೇ ಆದ ಭಾಷೆಯ ಮೂಲಕವಾಗಿ ಸಾಗಿಸುವುದಾದರೆ ಆ ಪ್ರಾಂತವು ಭಾಷಾನ್ವಯ ಪ್ರದೇಶ ಆಗಿರದೇ ಗತ್ಯಂತರವಿಲ್ಲ. ಅಖಿಲ ಭಾರತ ಕಾಂಗ್ರೆಸ್ಸು ೧೯೩೮ ರಲ್ಲಿ ಭಾಷಾವಾರು ಪ್ರಾಂತ ರಚನೆಗಳ ಬಗ್ಗೆ ತನ್ನ ನಿಶ್ಚಿತ ಧೋರಣೆಯನ್ನು ಮೊದಲ ಬಾರಿಗೆ ತಾಳಿತು.'' ಭಾಷಾನ್ವಯ ತಳಹದಿಯ ಮೇರೆಗೆ ಆಡಳಿತಕ್ಕಾಗಿ ಪ್ರಾಂತಗಳ ಪುನರ್‌ಘಟನೆಯನ್ನು ಮಾಡಬೇಕೆಂದು ಒತ್ತಿ ಹೇಳುವ ಆಂಧ್ರ, ಕೇರಳ ಸೇರಿದಂತೆ ಕರ್ನಾಟಕ ಏಕೀಕರಣ ಸಮಿತಿ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಇವುಗಳ ಶಿಷ್ಟಮಂಡಲದ ಅಭಿಪ್ರಾಯವನ್ನು ಅರಿತುಕೊಂಡ ನಂತರ ಈ ಸಮಿತಿಯು ಹೇಳುವುದೇನೆಂದರೆ ಭಾಷಾನ್ವಯ ಪ್ರಾಂತಗಳನ್ನು ರಚಿಸಬೇಕೆಂಬ ಮದ್ರಾಸ ವಿಧಿ ಮಂಡಲದ ಗೊತ್ತುವಳಿಯು ಕಾಂಗ್ರೆಸ್‌ನ ಉಪ ಸಮಿತಿಯ ಮಂಜೂರಿಯನ್ನು ಹಾಗೂ ಈ ಸಮಿತಿಯ ಸಂಪೂರ್ಣ ಒಪ್ಪಿಗೆಯನ್ನು ಉಚಿತವಾಗಿ ಪಡೆದುಕೊಂಡ ನಂತರವೇ ಸ್ವೀಕೃತವಾಗಿದೆ ಎಂದಿತು.

೨೧.೦೯.೧೯೩೭ ನೇ ದಿನ ವರ್ಧಾದಲ್ಲಿ ಮಹಾತ್ಮಾ ಗಾಂಧೀಜಿಯವರು ''ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವನ್ನಾಗಿ ಮಾಡುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಜೊತೆಗೆ ಕರ್ನಾಟಕ ಪ್ರಾಂತ ರಚನೆಯ ವಿಚಾರವನ್ನು ನಾನು ಮನಸಾ ಸ್ವಾಗತಿಸುತ್ತೇನೆ ಎಂದರು. ೨೫.೦೧.೧೯೪೮ ರ ಪ್ರಾರ್ಥನೋತ್ತರ ಭಾಷಣದಲ್ಲಿ ಅಂದರೆ ಬಾಪೂಜಿ ತಾವು ಹುತಾತ್ಮ ರಾಗುವ ಐದು ದಿನಗಳ ಮೊದಲು ಹೀಗೆಂದಿದ್ದರು. ''ಪ್ರಾಂತಿಕ ಭಾಷೆಗಳು ಬೆಳೆದು ಪರಿಪೂರ್ಣಾವಸ್ಥೆಯನ್ನು ಹೊಂದಬೇಕಾದರೆ ಭಾಷೆಯ ಆಧಾರದ ಮೇಲೆ ಈಗಿರುವ ಪ್ರಾಂತಗಳನ್ನು ಪುನರ್ ವಿಂಗಡಿಸುವುದು ಅವಶ್ಯಕ ಎಂದರು.

೧೯೧೬ ರಷ್ಟು ಹಿಂದೆಯೇ ರಾಜಕೀಯವಾಗಿ ಭಾಷಾವಾರು ಪ್ರಾಂತ ರಚನೆಯ ಸಮಸ್ಯೆಯನ್ನು ಕರ್ನಾಟಕದಲ್ಲಿ ಕೈಗೆತ್ತಿಕೊಳ್ಳಲಾಯಿತು. ಅದೇ ವರ್ಷ ಧಾರವಾಡದಲ್ಲಿ ಕರ್ನಾಟಕ ಸಭೆಯು ಜನ್ಮವೆತ್ತಿ ಈ ಚಳುವಳಿಯನ್ನು ಜೋರಾಗಿ ಪ್ರಾರಂಭಿಸಿತು. ೧೯೨೪ ರಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಕರ್ನಾಟಕ ಏಕೀಕರಣ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆರ್ಥಿಕ ಆಡಳಿತ ದೃಷ್ಟಿಯಿಂದ ಕರ್ನಾಟಕ ಪ್ರತ್ಯೇಕ ಪ್ರಾಂತ ಆಗಬೇಕೆಂದು ಆಗಲೇ ಪ್ರತಿಪಾದಿಸಲಾಗಿತ್ತು.

೦೧.೧೦.೧೯೫೩ ರಂದು ಭಾಷಾನ್ವಯ ತಳಹದಿ ಮೇಲೆ ಮದ್ರಾಸ್ ಪ್ರಾಂತದಿಂದ ಬೇರ್ಪಡಿಸಿ ಆಂಧ್ರ ಪ್ರಾಂತವನ್ನು ರಚಿಸಲಾಯಿತು. ಆಗ ಸುಮಾರು ಮೂರನೇ ಎರಡು ಭಾಗ ಬಳ್ಳಾರಿ ಜಿಲ್ಲೆಯನ್ನು ಅದೇ ತತ್ವದ ಅನ್ವಯ ಮೈಸೂರು ಸಂಸ್ಥಾನಕ್ಕೆ ಕೂಡಿಸಿ

ಮೂರು ತಾಲೂಕುಗಳನ್ನು ಮಾತ್ರ ಹೊಸ ಆಂಧ್ರಕ್ಕೆ ಜೋಡಿಸಲಾಯಿತು. ಇದು ಕರ್ನಾಟಕ ಏಕೀಕರಣಕ್ಕೆ ತೀವ್ರ ಗತಿಯನ್ನು ನೀಡಿತು.

ರಂಗನಾಥ ದಿವಾಕರರವರು ಸ್ವಾತಂತ್ರ್ಯ, ಕರ್ನಾಟಕ ಏಕೀಕರಣಕ್ಕೆ ಒಂದೇ ಬಗೆಯ ಪ್ರಾಮುಖ್ಯತೆ ನೀಡಿದವರು. ಮೊದಲು ಸ್ವಾತಂತ್ರ್ಯ ನಂತರ ಏಕೀಕರಣ ಎನ್ನುವ ಮನೋಭಿಲಾಷೆ ಅವರದಿತ್ತು. ಆದರೆ ಕರ್ನಾಟಕ ಏಕೀಕರಣಕ್ಕೆ ಬೇಕಾದ ಎಲ್ಲ ಸಂಘಟನೆಗಳಲ್ಲಿಯೂ ಮತ್ತು ವೈಚಾರಿಕ ಮಂಥನದಲ್ಲಿಯೂ ಅವರ ಸಕ್ರಿಯ ಪಾಲಿತ್ತು. ಸಂಯುಕ್ತ ಕರ್ನಾಟಕ ಎಂಬ ಪತ್ರಿಕೆ ಹೆಸರೇ ಇದನ್ನು ಸಾಬೀತು ಪಡಿಸುತ್ತಿದೆ.

ವಾಸ್ತವವಾಗಿ ಗಾಂಧೀಜಿಯವರೇ ಪ್ರಾದೇಶಿಕ ಭಾಷೆಗಳ ಪರವಾಗಿ ೧೯೨೦ ರಷ್ಟು ಹಿಂದೆಯೇ ವಕಾಲತ್ತು ಮಾಡಿದ್ದರೆನ್ನಬಹುದು. ಏಕೆಂದರೆ ಅವರು ಕಾಂಗ್ರೆಸ್ ಪಕ್ಷವನ್ನು ಪ್ರವೇಶಿಸುವ ವರೆಗೂ ಇಂಗ್ಲೀಷೇ ಆ ಪಕ್ಷದ ವ್ಯವಹಾರಿಕ ಭಾಷೆಯಾಗಿತ್ತು. ಆದರೆ ಕಾಂಗ್ರೆಸ್ಸಿನ ವಿಷಯ ಅದರ ನಡಾವಳಿಕೆ, ನಿಲುವು ಜನಸಾಮಾನ್ಯರನ್ನು ತಲುಪುವ ಅಗತ್ಯತೆ ಇತ್ತು. ಇದು ಇಂಗ್ಲೀಷಿನಿಂದ ಆಗದ ಕೆಲಸವೆಂದೇ ಅವರು ಮನಗಂಡಿದ್ದರು. ಆದ್ದರಿಂದಲೇ ಅವರಲ್ಲಿ ಭಾಷಾವಾರು ಪ್ರಾಂತ ರಚನೆಯ ವಿಷಯಕ್ಕೆ ಬೆಂಬಲ ದೊರಕಿದ್ದು ಹಾಗೂ ಹಿಂದಿ ಎಲ್ಲರಿಗೂ ಸುರಳಿತವಾಗಿ ತಿಳಿಯುವ ಭಾಷೆಯಾಗಿದ್ದರಿಂದ ರಾಷ್ಟ್ರ ಭಾಷೆಯ ಸ್ಥಾನ ಅದಕ್ಕೆ ನೀಡಬೇಕೆಂಬ ಇಚ್ಛೆಯೂ ಅವರಿಗಿತ್ತು. ಸ್ವತಃ ಗುಜರಾತಿ ಮಾತೃಭಾಷೆಯನ್ನು ಹೊಂದಿದ್ದ ಗಾಂಧೀಜಿಯವರ ಈ ವಿಚಾರ ತುಂಬಾ ಮುಂದಾಲೋಚನೆ ಎನ್ನಬಹುದು.

೧೯೨೫ ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಸ್ತಿತ್ವದಲ್ಲಿ ಬಂದಿತು. ಹೀಗೆ ಮೊಟ್ಟ ಮೊದಲ ಬಾರಿಗೆ ಕರ್ನಾಟಕ ಎಂಬ ಹೆಸರು ಕಾಂಗ್ರೆಸ್ ಎಂಬ ನಡಾವಳಿಕೆಯಲ್ಲಿಯೇ ಬಂದು ಬಿಟ್ಟಿತು. ದಿವಾಕರರು ಪ್ರಾರಂಭದಲ್ಲಿ ಈ ಸಮಿತಿಯ ಕಾರ್ಯದರ್ಶಿಯಾಗಿಯೂ ೧೯೨೯ ರಲ್ಲಿ ಇದರ ಅಧ್ಯಕ್ಷರಾಗಿಯೂ ನಿಯುಕ್ತಗೊಂಡರು. ಕರ್ನಾಟಕ ಏಕೀಕರಣಕ್ಕೆ ಆಗಿನಿಂದಲೇ ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸ್ಸಿನ ಬೆಂಬಲ ಅದಕ್ಕೆ ಸಿಕ್ಕಿತೆನ್ನಬಹುದು. ೧೯೨೭ ರ ಸುಮಾರು ಸೈಮನ್ ಕಮೀಶನ್‌ನ್ನು ಕಾಂಗ್ರೆಸ್ ಪಕ್ಷ ಧಿಕ್ಕರಿಸಿದ ಮೇಲೆ ಮೋತಿಲಾಲ ನೆಹರು ಅವರ ಅಧ್ಯಕ್ಷತೆಯಲ್ಲಿ ಸಮಾನಾಂತರ ಸಮಿತಿಯೊಂದನ್ನು ಆ ಪಕ್ಷ ನೇಮಿಸಿತು. ಭಾರತಕ್ಕೆ ರಾಜ ಘಟನೆ ಇರಬೇಕೆಂಬುದು ಅದರ ಚಿಂತನೆಯಾಗಿತ್ತು. ಆಗ ಕರ್ನಾಟಕ ಏಕೀಕರಣ ಸಮಿತಿಯ ಏಕಮೇವ ಪ್ರತಿನಿಧಿಯಾಗಿ ದಿವಾಕರರು ಆಯ್ಕೆಗೊಂಡಿದ್ದರು. ಅವರು ಮೊತಿಲಾಲ ನೆಹರು ಸಮಿತಿಯ ಮುಂದೆ ಸಮಗ್ರ ಮತ್ತು ಸಂಯುಕ್ತ ಕರ್ನಾಟಕ ಪ್ರಾಂತದ ಅಗತ್ಯತೆಯನ್ನು ಬಲವಾಗಿ ಪ್ರತಿಪಾದಿಸಿದರು. ಇದಾದ ನಂತರ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅವರ ಪಾತ್ರ ಹಿರಿಯದಾಯಿತೆನ್ನಬಹುದು.

ಈ ವೈಚಾರಿಕ ಒತ್ತಡ ಹೆಚ್ಚಾಗತೊಡಗಿದಂತೆಯೇ ಮಹಾತ್ಮಾ ಗಾಂಧೀಜಿ, ಸರ್ದಾರ್ ವಲ್ಲಭಭಾಯಿ ಪಟೇಲ ಮತ್ತಿತರ ಪ್ರಮುಖ ಕಾಂಗ್ರೆಸ್ ಧುರೀಣರು ಸ್ವಾತಂತ್ರ್ಯ ದೊರೆತ ನಂತರ ಕರ್ನಾಟಕ ಏಕೀಕರಣ ಪ್ರಾಂತದ ಬಗ್ಗೆ ಪರಿಶೀಲಿಸುವ ಭರವಸೆಯನ್ನು ನೀಡಿದರು. ೧೯೪೭ ರಲ್ಲಿ ಸ್ವಾತಂತ್ರ್ಯ ದೊರೆತ ನಂತರ ಕರ್ನಾಟಕ ಏಕೀಕರಣಕ್ಕೆ ಕನಸು ನನಸಾಗುವ ಸಂದರ್ಭ ಒದಗಿ ಬಂತಾದರೂ ಅದು ಸಾಗುವ ಮಾರ್ಗ ಹಲವಾರು ಕಲ್ಲು ಮುಳ್ಳುಗಳನ್ನು ಒಳಗೊಂಡಿತ್ತು. ೧೯೪೭ ನೇ ವರ್ಷದ ಡಿಸೆಂಬರ್ ೨೯ ರಂದು ಕಾಸರಗೋಡಿನಲ್ಲಿ ೧೧ನೇಯ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನ ನಡೆಯಿತು. ಮುಂಬೈ ಮದ್ರಾಸ್ ಹೈದ್ರಾಬಾದ, ಕೊಡಗು, ನೀಲಗಿರಿ, ಕೊಯಿಮತ್ತೂರು, ಸೇಲಂ ಮತ್ತಿತರ ಪ್ರದೇಶಗಳಿಂದ ಕರ್ನಾಟಕ ಏಕೀಕರಣವಾಗಬೇಕೆಂಬ ಬಲವಾದ ಕೂಗಿನಿಂದ ಪ್ರತಿನಿಧಿಗಳು ಆಗಮಿಸಿದರು. ಕೆ.ಆರ್. ಕಾರಂತರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಆಗ ಈ ಸಮ್ಮೇಳನದ ಉದ್ದೇಶಿತ ಅಧ್ಯಕ್ಷ ಎ.ಬಿ. ಶೆಟ್ಟಿಯವರು ಬಾರದೆ ಇದ್ದುದರಿಂದ ಈ ಸಮ್ಮೇಳನಕ್ಕೆಂದೇ ವಿಶೇಷವಾಗಿ ಆಹ್ವಾನಿಸಲಾಗಿದ್ದ ರಂಗನಾಥ ದಿವಾಕರರು ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ತಮ್ಮ ಒಂದು ಘಂಟೆಗೂ ಮಿಕ್ಕಿದ ಭಾಷಣದಲ್ಲಿ ಕರ್ನಾಟಕ ಏಕೀಕರಣವನ್ನು ಅವರು ಬಲವಾಗಿ ಪ್ರತಿಪಾದಿಸಿದರು. ಊಟದ ತಟ್ಟೆ ಇಡಲ್ಪಟ್ಟಿದೆ ಅನ್ನವನ್ನೂ ತಟ್ಟೆಯಲ್ಲಿ ಬಡಿಸಲಾಗಿದೆ. ಊಟ ಪ್ರಾರಂಭಿಸುವ ಸೂಚನೆಯಾಗಿರುವ ತುಪ್ಪವನ್ನು ಬಡಿಸದೇ ಇರುವಲ್ಲಿ ವಿಳಂಬ ಏಕೆ ಮಾಡಲಾಗುತ್ತಿದೆ ? ಎಂದು ಅವರು ಪ್ರಶ್ನಿಸಿದ್ದರು. ಇದಕ್ಕೂ ಮೊದಲು ಘಟನಾ ಸಮಿತಿ ಎದುರೂ ಸಹ ದಿವಾಕರರು ಗೊತ್ತುವಳಿಯೊಂದನ್ನು ಮಂಡಿಸಿ, ಏಕೀಕರಣದ ಬಗ್ಗೆ ಅದು ಅಂಗೀಕಾರವಾಗುವಂತೆ ಮಾಡಿದ್ದರು. ೧೯೪೮ ರಲ್ಲಿ ಸರಕಾರ ಧಾರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತು. ಇದಕ್ಕೆ ದಿವಾಕರ ಅವರು ಸಹ ಸದಸ್ಯರಾಗಿದ್ದರು. ಕರ್ನಾಟಕ ಏಕೀಕರಣವಾಗಬೇಕೆಂಬ ನಿರ್ಣಯವನ್ನು ಸಮಿತಿ ಪಾಸು ಮಾಡಿತಾದರೂ ಇದನ್ನು ಒಪ್ಪಲಿಲ್ಲ. ಇದರಿಂದ ಕೋಪೋದ್ರಿಕ್ತರಾದ ಕನ್ನಡಿಗ ಸಂಸದರು ಮತ್ತು ಶಾಸಕರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕೆಂದೂ ಸಹ ಬಯಸಿದ್ದರು. ಇದು ಸಾಗಿದ್ದಂತೆಯೇ ವಿಶಾಲಾಂಧ್ರ ಚಳುವಳಿಯು ಪ್ರಾರಂಭವಾಯಿತು. ಆಗ ಹೈದ್ರಾಬಾದ ಸಮೀಪದ ನಾನಲ್ ನಗರ ಕಾಂಗ್ರೆಸ್ ಅಧಿವೇಶನದಲ್ಲಿ ಆಂಧ್ರ ಸ್ಥಾಪನೆಯ ಬಗ್ಗೆ ಕಾಂಗ್ರೆಸ್ ಒಪ್ಪಿಗೆ ನೀಡಿತು. ಇದರಿಂದ ಕನ್ನಡಿಗರು ಆಶ್ಚರ್ಯಚಕಿತರಾದರು. ಸಿಟ್ಟಿಗೆದ್ದ ಅವರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆ ಸೇರಬೇಕೆಂದು ಆಗ್ರಹಿಸಿದರು. ೧೯೫೩ ಎಪ್ರಿಲ್ ೧೯ ಹಾಗೂ ೨೦ ರಂದು ಹುಬ್ಬಳ್ಳಿಯಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆ ಸೇರಲು ನಿರ್ಧಾರವಾಯಿತು. ಇದೇ ಸಂದರ್ಭದಲ್ಲಿ ಹುಬ್ಬಳ್ಳಿ ಸಮೀಪದ ಅದರಗುಂಚಿ ಗ್ರಾಮದ ಶಂಕರಗೌಡ ಪಾಟೀಲರು ಅನಿರ್ದಿಷ್ಟ ಅವಧಿಯ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಹುಬ್ಬಳ್ಳಿ ತಾಲೂಕಿನ ಅದರಗುಂಚಿ ಗ್ರಾಮದವರಾದ ಶಂಕರಪ್ಪಗೌಡ ಗೌಡಪ್ಪಗೌಡ ಪಾಟೀಲ (ಹುಣಸಿಕಟ್ಟಿ) ಇವರು ಆಗ ೨೧ ದಿನಗಳ ಉಪವಾಸ ಸತ್ಯಾಗ್ರಹವನ್ನು ತಮ್ಮ ಗ್ರಾಮದ ದೊಡ್ಡಪ್ಪನ ದೇವಸ್ಥಾನದಲ್ಲಿ ಕೈಕೊಂಡಿದ್ದರು. ಈ ವಿಷಯ ಕುರಿತು ಪ್ರತ್ಯಕ್ಷದರ್ಶಿಯಾಗಿರುವ ಹುಬ್ಬಳ್ಳಿಯ ವೀರಾಪೂರ ರಸ್ತೆ, ಚೋಳಿನವರ ಓಣಿಯ ೮೬ ವರ್ಷದ ಓಂಕಾರೆಪ್ಪ ಸಂಕಪ್ಪ ಶಿವಳ್ಳಿ ಅವರು ಈ ಪುಸ್ತಕ ಬರೆಯುವ ಸಂದರ್ಭದಲ್ಲಿ ಅದೇ ಸ್ಫೂರ್ತಿಯಿಂದ ೧೯೫೩ ರ ಅನುಭವವನ್ನು ಹೇಳುತ್ತಾರೆ. ಆಗ ಶಂಕರಗೌಡರಿಗೆ ಕೇವಲ ೩೩ ವರ್ಷ ವಯಸ್ಸಾಗಿತ್ತು. ಈ ಉಪವಾಸ ಸತ್ಯಾಗ್ರಹವನ್ನು ಬಿಡಿಸಲು ನಂತರ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಇನ್ನಿತರ ಕೆಲ ಕಾಂಗ್ರೆಸ್ಸಿಗರು ಬಂದು ಪ್ರಯತ್ನ ಮಾಡಿದರು. ಮೂರು ಗಂಟೆಗಳ ಕಾಲ ನಡೆದ ಚರ್ಚೆ ವಿಫಲವಾಯಿತು. ಆಗ ನಂತರ ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯ ಸರ್ಕಾರದಿಂದ ನಾಮಕರಣಗೊಂಡ ಮೇಯರ್ ಆಗಿದ್ದ ಡಾ. ವ್ಹಿ. ವ್ಹಿ. ತೆಗ್ಗಿಮನಿ ಅವರು ಶಂಕರಗೌಡರ ಆರೋಗ್ಯ ತಪಾಸಣೆಗಾಗಿ ಬರುತ್ತಿದ್ದರು. ಅವರು ಹಾಗೂ ಹಿರಿಯ ಕಾಂಗ್ರೆಸ್ ನಾಯಕರು ಮತ್ತು ಓಂಕಾರೆಪ್ಪ ಶಿವಳ್ಳಿ ಇವರೆಲ್ಲರೂ ಸೇರಿ ಆರೋಗ್ಯದ ಹಿನ್ನೆಲೆಯಲ್ಲಿ ಈ ಉಪವಾಸ ಕೈಬಿಡಬೇಕೆಂದು ಹೇಳಿ ಮೋಸಂಬಿ ರಸ ಕುಡಿಸಿದ್ದಾಗಿ ಹೇಳಿಕೊಳ್ಳುತ್ತಾರೆ.

ಮರುದಿನ ಮುಂಜಾನೆ ಅದರಗುಂಚಿ ಗ್ರಾಮಸ್ಥರೆಲ್ಲರೂ ಸೇರಿ ಹಲವಾರು ಚಕ್ಕಡಿಗಳನ್ನು ಹೂಡಿಕೊಂಡು ಹುಬ್ಬಳ್ಳಿ ತಹಶೀಲ್ದಾರ ಕಚೇರಿ ಎದುರಿಗೆ ಮನವಿ ಸಲ್ಲಿಸಿ ನಂತರ ಈಗಿನ ನೆಹರು ಮೈದಾನದಲ್ಲಿ ಬಂದರು. ಆಗ ನೆಹರು ಮೈದಾನದಲ್ಲಿ ಸರ್ಕಸ್ ಕಂಪನಿಯೊಂದು ಟೆಂಟು ಹೊಡೆದುಕೊಂಡು ಪ್ರದರ್ಶನ ಮಾಡುತ್ತಿತ್ತು. ಬದಿಗಿನ ಟೌನ್ ಹಾಲ್ ಮುಂದೆ ಮತ್ತು ಒಳಗೆ ಜನರೆಲ್ಲ ಕೂಡಿದ್ದರು. ಸುಮಾರು ಹೊತ್ತಾದರೂ ನಿಜಲಿಂಗಪ್ಪನವರು ಬಾರದೇ ಇದ್ದಿದ್ದರಿಂದ ಹೊರಗೆ ಇದ್ದ ಜನರ ಸಂಯಮ ಮಿತಿಮೀರುವಂತಾಯಿತು. ಆಗ ನೆರೆದಿದ್ದ ಪೊಲೀಸರು ಶಾಂತರೀತಿಯಿಂದ ಇರಬೇಕೆಂದು ತಿಳಿಸಹತ್ತಿದರು. ಸಂಜೆ ೬ ಗಂಟೆಯ ಸುಮಾರು ಪೊಲೀಸರ ಜೀಪು ಮತ್ತು ಮಂತ್ರಿಗಳ ಕಾರು ಬಂದು ಸಚಿವರು ಟೌನ್ ಹಾಲ್ ಒಳಗೆ ಹೋದರು. ಆದರೆ ಶಂಕರಗೌಡರು ಉಪವಾಸ ಬಿಟ್ಟಿಲ್ಲ ಎಂಬ ಸುದ್ದಿ ಹರಡಿತು. ಇಷ್ಟಾಗುತ್ತಿದ್ದಂತೆಯೇ ರೇಲ್ವೆ ಕಾರ್ಮಿಕರ ಕಟ್ಟಡ ಹತ್ತಿರ ನಿಂತಿದ್ದ ಪೊಲೀಸ್ ಜೀಪಿನ ಪೆಟ್ರೋಲ್ ಟ್ಯಾಂಕಿನ ಮುಚ್ಚಳವನ್ನು ಒಬ್ಬ ತೆಗೆದು ಅದಕ್ಕೆ ಬೆಂಕಿ ಇಟ್ಟು ಬಿಟ್ಟ. ಇದರಿಂದಾಗಿ ಗಲಿಬಿಲಿ ಉಂಟಾಯಿತು. ಅಷ್ಟರಲ್ಲಿ ಸಂಯಮ ಕಳೆದುಕೊಂಡ ಪೊಲೀಸರು ಗುಂಡು ಹಾರಿಸಲು ಪ್ರಾರಂಭಿಸಿದರು. ಸಾಲಿಮಠ ಎಂಬ ಹುಡುಗನ ಎಡಗೈಗೆ ಗುಂಡು ತಗಲಿತು. ಅವನು ಮೇಲಿಂದ ಕೆಳಕ್ಕೆ ಬಿದ್ದ. ಇದರ ಜೊತೆಗೆ ಇಬ್ಬರು ಮೂವರಿಗೆ ಗಾಯಗಳೂ ಆದವು. ಅವರನ್ನೆಲ್ಲ ಹುಬ್ಬಳ್ಳಿಯ ಚಿಟಗುಪ್ಪಿ ಆಸ್ಪತ್ರೆಗೆ ಸೇರಿಸಲಾಯಿತು. ಈ ಘಟನೆಯ ಪ್ರತ್ಯಕ್ಷ ಸಾಕ್ಷಿಯಾದ ಓಂಕಾರೆಪ್ಪ ಹೇಗೋ

ಗದ್ದಲದಿಂದ ಪಾರಾಗಿ ಸುರಕ್ಷಿತವಾಗಿ ತಲುಪಿದ್ದಾಗಿ ಈಗಲೂ ನೆನಪಿಸಿಕೊಳ್ಳುತ್ತಾರೆ. ಇದಲ್ಲದೆ ಟೌನ್ ಹಾಲ್ ಒಳಗಿದ್ದ ಸಭೆಯೂ ಸಹ ಗೊಂದಲಮಯವಾಗಿತ್ತೆಂದು ಅಶಾಂತವಾಗಿ ನಡೆಯಿತೆಂದು ಹೇಳುತ್ತಾರೆ.

ಅದೇ ಸಮಯಕ್ಕೆ ನಡೆದ ಗೊಂದಲ ಪ್ರತಿಭಟನೆಯಲ್ಲಿ ಪೊಲೀಸರು ಗೋಳಿಬಾರ ಮಾಡಬೇಕಾಯಿತು. ಇದಾದ ನಂತರ ಸರಕಾರ ಫಜಲ್ ಅಲಿ ಸಮಿತಿಯನ್ನು ನೇಮಿಸಿತು. ಇವೆಲ್ಲ ಸಮಿತಿಗಳ ಶಿಫಾರಸುಗಳ ಮೇರೆಗೆ ಏಕೀಕರಣ ಈಢಿಯಿ ಕರ್ನಾಟಕ ೧೯೫೬ ರ ನವೆಂಬರ್ ೧ ರಂದು ಸ್ವತಂತ್ರ ಭಾರತದಲ್ಲಿ ಸ್ಥಾನ ಪಡೆಯಿತು ಹಾಗೂ ದಿವಾಕರ ರಂಗರಾಯರು ಸುಮಾರು ನಾಲ್ಕು ದಶಕಗಳ ಹಿಂದೆಯೇ ಕನಸು ಕಂಡಿದ್ದ ಹಾಗೂ ಪತ್ರಿಕೆಯ ಮೂಲಕ ಪ್ರತಿಪಾದಿಸಿದ್ದ ಏಕೀಕೃತ ಸಂಯುಕ್ತ ಕರ್ನಾಟಕವು ನಿರ್ಮಾಣಗೊಂಡಿತು.

■

## ಲೇಖಕರಾಗಿ ದಿವಾಕರ

ದಿವಾಕರ ಇವರು ಉಜ್ವಲ ದೇಶಭಕ್ತ, ಕನ್ನಡಿಗ, ಪರಿಪೂರ್ಣ ಪತ್ರಕರ್ತ ಇದರ ಜೊತೆಗೆ ಉತ್ತಮ ಲೇಖಕರೂ ಆಗಿದ್ದರೆಂಬುದು ನಿರ್ವಿವಾದ. ಸಾಮಾನ್ಯವಾಗಿ ಹೋರಾಟಗಾರರು ಹಾಗೂ ಸ್ವಾತಂತ್ರ್ಯ ಯೋಧರು ಲೇಖನ ಕಲೆಯಲ್ಲಿ ಹಿಂದುಳಿದವರೆಂದೇ ಹೇಳಬೇಕು. ಆದರೆ ಇದಕ್ಕೆ ರಂಗನಾಥ ದಿವಾಕರ ಅಂಥ ಗಟ್ಟಿಮುಟ್ಟಾದ ಅಪವಾದಗಳೂ ಉಂಟು.

ದಿವಾಕರ ಅವರು ಸ್ವಾತಂತ್ರ್ಯಯೋಧರಾಗಿ, ಬಿಹಾರದ ರಾಜ್ಯಪಾಲರಾಗಿ, ಕೇಂದ್ರ ವಾರ್ತಾ ಖಾತೆಯ ಸಚಿವರಾಗಿ, ರಾಜ್ಯಸಭಾ ಸದಸ್ಯರಾಗಿ, ಸಂಯುಕ್ತ ಕರ್ನಾಟಕ ಪತ್ರಿಕೆ ಸಂಪಾದಕರಾಗಿ, ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಹೀಗೆ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಆದರೆ ಅವರಿಗೆ ಬಜ್ಜುಯುವ ಪ್ರೇರಣೆ ಮಾತ್ರ ವಿದ್ಯಾರ್ಥಿ ದೆಸೆಯಿಂದಲೇ ಇತ್ತು. ಸ್ವಾತಂತ್ರ್ಯದ ಹೋರಾಟ, ಜೈಲು, ಇಲ್ಲವೇ ಸ್ವಾತಂತ್ರ್ಯ ನಂತರದ ಸಚಿವ, ರಾಜ್ಯಪಾಲರ ದಿನಗಳಲ್ಲಿಯೂ ಸಹ ಅವರ ಬರವಣಿಗೆ ಇತ್ತು. ಅದೇಕೆ ಸಾಯುವ ಕೆಲ ದಿನಗಳ ಮೊದಲೂ ಅವರು ಲೇಖನವೊಂದನ್ನು ಬರೆದಿದ್ದರು ಎಂಬುದು ಇಲ್ಲಿ ಗಮನಾರ್ಹ.

ಅವರ ಲೇಖನದ ವೈವಿಧ್ಯತೆ ವಿಸ್ತೃತವಾದದ್ದು. ಭಗವದ್ಗೀತೆ ಮತ್ತು ಉಪನಿಷತ್ತುಗಳು ಅವರ ಮೆಚ್ಚಿನ ಜ್ಞಾನದಾಹಿ ಗ್ರಂಥಗಳು. ನಂತರದ್ದು ಸ್ವಾತಂತ್ರ್ಯ ಹೋರಾಟ ಹಾಗೂ ಮಹಾತ್ಮಾ ಗಾಂಧೀಜಿಯವರ ವ್ಯಕ್ತಿತ್ವ. ಸ್ವಾತಂತ್ರ್ಯಾ ನಂತರ ಕರ್ನಾಟಕ ಏಕೀಕರಣ ಅವರ ಬರವಣಿಗೆಯ ವಿಷಯಗಳಾಗಿದ್ದವು. ವೇದ ಉಪನಿಷತ್ತುಗಳು ಇಲ್ಲವೇ ಭಗವದ್ಗೀತೆ ಇವೆಲ್ಲವುಗಳನ್ನು ಶ್ರೀ ಸಾಮಾನ್ಯರಿಗೆ ತಲುಪಿಸಬೇಕೆಂಬ ಮಿಡಿತ ಅವರಲ್ಲಿತ್ತು. ಕಥೆ ಕಾದಂಬರಿ ಅಂತಹ ರಂಜನೀಯ ವಿಷಯಗಳು ಅವರಿಗೆ ಬೇಕಿರಲಿಲ್ಲ ಎಂದೇನಲ್ಲ. ಆದರೆ ಜೀವನವನ್ನು ರೂಪಿಸುವಲ್ಲಿ ಹಾಗೂ ವಿವರಗಳನ್ನು ಜನತೆಗೆ ತಲುಪಿಸುವಲ್ಲಿ ಇಂಥ ಶಿಷ್ಟ ಬರವಣಿಗೆಯೇ ಮುಖ್ಯವೆಂದು ಅವರು ನಂಬಿಕೊಂಡಿದ್ದರು. ಮೊದಲ ಬಾರಿ ಜೈಲಿಗೆ ಹೋದಾಗ ಅವರು ಬರೆದಿದ್ದು ಉಪನಿಷತ್ ಪ್ರಕಾಶನ ಎಂಬ ಗ್ರಂಥವನ್ನು. ಇದು ಈಶ,

ಕೇಣ, ಕಥಾ, ಮಂಡೂಕ್ಯ, ಪ್ರಶ್ನ, ಔತ್ರೇಯ ಹಾಗೂ ತೈತ್ಯರೀಯ ಉಪನಿಷತ್ತುಗಳ ಸಾರಸಂಗ್ರಹವಾಗಿತ್ತು. ಇದಾದ ನಂತರ ಬೃಹದಾರಣ್ಯ ಉಪನಿಷತ್ ಎಂಬ ಗ್ರಂಥವನ್ನು ಅವರು ಬರೆದರು. ಮುಂದೆ ಉಪನಿಷತ್ ಕಥಾವಳಿ ಎಂಬ ಪುಸ್ತಕ ರಚಿಸಿದರು. ಇದರಲ್ಲಿ ೨೦ ಅತ್ಯುತ್ತಮ ಕಥೆಗಳು ಇವೆ. ಉಪನಿಷತ್‌ಗಳ ಸಾರ ಸಂಗ್ರಹವೇ ಇದರಲ್ಲಿದೆ ಎಂದರೆ ತಪ್ಪಾಗಲಾರದು. ಇವು ಕಥನ ಸಾಹಿತ್ಯದ ಮೂಲಕ ನೇರವಾಗಿ ಓದುಗರ ಹೃದಯವನ್ನೇ ತಲುಪುವಂತಹವು.

ನಂತರ ದಿವಾಕರ ಅವರು ಬರೆದಿದ್ದು ''ಗೀತೆಯ ಗುಟ್ಟು ''ಎಂಬ ಗ್ರಂಥವನ್ನು. ಇದಕ್ಕೆ ಪರಮಾತ್ಮ ಯೋಗವೆಂದೂ ಕರೆಯಲಾಗುತ್ತಿತ್ತು. ತುಂಬಾ ಜನಪ್ರಿಯಗೊಂಡು ಆರು ಆವೃತ್ತಿಗಳನ್ನು ಇದು ಕಂಡಿತು. ಶ್ರೀಕೃಷ್ಣ ಪರಮಾತ್ಮ ಅರ್ಜುನನಿಗೆ ಬೋಧಿಸಿದ ಗೀತೆ ಸಾರ ಜೊತೆಗೆ ಇದಕ್ಕೆ ಲೋಕಮಾನ್ಯ ಬಾಳಗಂಗಾದರ ತಿಳಕರವರು ಮಂಡಾಲೆ ಜೇಲಿನಲ್ಲಿದ್ದಾಗ ಬರೆದಿದ್ದ ಗೀತಾ ರಹಸ್ಯ ಎಂಬ ಪುಸ್ತಕ ಸ್ಪೂರ್ತಿಯನ್ನು ಒದಗಿಸಿತು. ಹಿಂಡಲಗಾ ಜೇಲಿನಲ್ಲಿದ್ದಾಗ ''ಅಂತರಾತ್ಮನಿಗೆ'' ಎಂಬ ಪುಟ್ಟ ಪುಸ್ತಕವನ್ನು ಅವರು ಬರೆದರು. ಅಧ್ಯಾತ್ಮ ಮತ್ತು ತತ್ವಜ್ಞಾನಗಳ ಮೇಲೆ ಆಧಾರಿತ ಈ ಪುಟ್ಟ ಪುಸ್ತಕದಲ್ಲಿ ೬೦ ಅಂತರ್ಮುಖಿ ಒಳ ನುಡಿಗಳಿವೆ. ಹಿಂಡಲಗಾ ಜೇಲಿನಲ್ಲಿದ್ದಾಗ ಬರೆದ ಮತ್ತೊಂದು ಪುಸ್ತಕವೆಂದರೆ ''ಕರ್ಮಯೋಗ''. ಭಗವದ್ಗೀತೆಯಲ್ಲಿ ಬೋಧಿಸಲಾದ ಕರ್ಮಯೋಗವನ್ನು ಈ ಪುಸ್ತಕ ವಿವರಿಸುತ್ತಿದೆ. 'ಹರಿಭಕ್ತಿಸುಧಾ', 'ನಾರದ - ಶಾಂಡಿಲ್ಯ', ಭಕ್ತಿಸೂತ್ರಗಳು ಹಾಗೂ 'ವಚನ ಶಾಸ್ತ್ರರಹಸ್ಯ' ಇವು ನಂತರ ಹೊರಬಂದ ಪುಸ್ತಕಗಳು.

ಸ್ವಾತಂತ್ರ್ಯ ಹೋರಾಟ ಮತ್ತು ಮಹಾತ್ಮಾ ಗಾಂಧೀಜಿಯವರ ವ್ಯಕ್ತಿತ್ವದ ಹಿನ್ನೆಲೆಯಲ್ಲಿ 'ಸತ್ಯಾಗ್ರಹ - ಇತಿಹಾಸ ಮತ್ತು ತಂತ್ರ', 'ಮಹಾತ್ಮರ ಮನೋರಂಗ', 'ಗಾಂಧೀಜಿ ಕಥೆಗಳು', 'ಗಾಂಧೀಜಿ ನಾನು ಕಂಡಂತೆ' ಮತ್ತು 'ಬಾಪೂ' ಇವೆಲ್ಲವೂ ಅವರು ಈ ಹಿನ್ನೆಲೆಯಲ್ಲಿ ಬರೆದ ಪುಸ್ತಕಗಳು. ಗಾಂಧೀಜಿಯ ಜೀವನ ಮತ್ತು ಕಾರ್ಯ ಎಂಬ ಅವರ ಕನ್ನಡದ ಪುಸ್ತಕ ಇಂಗ್ಲೀಷಿನಿಂದ ಭಾಷಾಂತರವಾಗಿದ್ದು. ಸೆರೆ ಮರೆಯಲ್ಲಿ ಪುಸ್ತಕ ದಿವಾಕರರು ಕಾರಾಗೃಹವನ್ನು ಕಂಡ ದಿನಗಳನ್ನು ವಿವರಿಸುತ್ತಿದೆ. ಗ್ರಾಮೀಣ ಜನತೆಗೆ ಒಂದು ಕೈಪಿಡಿಯನ್ನು ತಯಾರಿಸಿ ಅದಕ್ಕೆ 'ಹಳ್ಳಿಗರ ಕೈಪಿಡಿ' ಎಂದು ಹೆಸರಿಟ್ಟು ಆ ಮೂಲಕ ರಾಜಕೀಯ ಪ್ರಜ್ಞೆ ಜನರಲ್ಲಿ ವರ್ಧಿಸುವಂತೆ ದಿವಾಕರರು ಯತ್ನಿಸಿದರು. ಇದಲ್ಲದೆ ರಾಮಕೃಷ್ಣ ಪರಮಹಂಸ ಹಾಗೂ ಅರವಿಂದರ ಬಗ್ಗೆಯೂ ಅವರು ಚಿಕ್ಕ ಪುಸ್ತಕಗಳನ್ನು ಬರೆದರು.

ಎರಡನೇ ಮಹಾಯುದದ ಹಿನ್ನೆಲೆಯಲ್ಲಿ ಅವರು 'ನರಮೇಧ' ಎಂಬ ಪುಸ್ತಕವನ್ನು ಸಂಪಾದಿಸಿದರು. ಹಾಗೂ ಕಾಂಗ್ರೆಸ್ ಪಕ್ಷದ ವಜ್ರ ಮಹೋತ್ಸವದ ಹಿನ್ನೆಲೆಯಲ್ಲಿ ಅವರು ಸ್ಮರಣ ಗ್ರಂಥವೊಂದನ್ನೂ ಸಹ ಸಂಪಾದಿಸಿದರು. ೧೯೩೦-೩೨ ರಲ್ಲಿ ಕರ್ನಾಟಕದಲ್ಲಿ ನಡೆದ ಕರ ನಿರಾಕರಣೆಯ ಆಂದೋಲನದ ಬಗ್ಗೆ ಅವರು ಪುಸ್ತಕವೊಂದನ್ನು

ರಚಿಸಿದರಲ್ಲದೇ ಅದಕ್ಕೆ 'ಕರ ನಿರಾಕರಣೆಯ ವೀರ ಕಥೆ' ಎಂದು ಹೆಸರನ್ನು ಇಟ್ಟರು. ಇದಕ್ಕೆ ಆಗ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಖ್ಯಾತ ಸಾಹಿತಿ ರಾವ್ ಬಹಾದ್ದೂರ ನಾಮಾಂಕಿತ ಆರ್.ಬಿ. ಕುಲಕರ್ಣಿಯವರು ಸಹಾಯಕರಾಗಿದ್ದರು. ೧೯೫೬ ರಲ್ಲಿ ಕರ್ನಾಟಕ ಏಕೀಕರಣವಾದಾಗ 'ಕರ್ನಾಟಕ ಏಕೀಕರಣ ಕಥೆ' ಎಂಬ ಪುಸ್ತಕವೂ ಬಂದಿತು. ದಿವಾಕರರಿಗೆ ಕಾರಾಗೃಹ ಒಂದು ನಿಟ್ಟಿನಲ್ಲಿ ತಾತ್ವಿಕ ಚಿಂತನೆಯ ಕುಲುಮೆ ಆಗಿತ್ತೆಂದರೆ ತಪ್ಪಾಗಲಾರದು. ವಿಚಾರಗಳ ನಿಗಿ ನಿಗಿ ಕೆಂಡಗಳೇ ಅವರ ಮನದಲ್ಲಿ ಹುಟ್ಟಿ ಬರೆಯುವ ಬಿಸಿಯನ್ನು ಹುಟ್ಟಿಸುತ್ತಿದ್ದವು. ಹಾಗೆಯೇ ಇದರ ಪ್ರಯೋಜನವಾಗಿ ವಿವಿಧ ಪುಸ್ತಕಗಳು ಬಂದವು. ೧೯೭೩ ರಲ್ಲಿ 'ವೀರಕರ್ಮದ ಪ್ರೇರಣೆ' ಎಂಬ ಅವರ ಪುಸ್ತಕ ಹೊರಬಂದಿತು. ಇದರಲ್ಲಿ ಅವರು ಪತ್ರಕರ್ತರಾಗಿ ಕಾರ್ಯ ನಿರ್ವಹಿಸಿದ ಹಾಗೂ ಲೋಕ ಶಿಕ್ಷಣ ಟ್ರಸ್ಟ ಸ್ಥಾಪನೆಗಳ ಬಗ್ಗೆ ವಿವರಗಳಿದ್ದವು. ದಿವಾಕರ ಅವರಿಗೆ ಕನ್ನಡ ಮಾತೃ ಭಾಷೆಯಾಗಿದ್ದಿತು. ಅವರು ಮರಾಠಿಯನ್ನು ಅಷ್ಟೇ ಸೊಗಸಾಗಿ ಮಾತನಾಡುತ್ತಿದ್ದರು. ಇಂಗ್ಲೀಷ, ಹಿಂದಿ, ಸಂಸ್ಕೃತ ಅವರಿಗೆ ಕರತಲಾಮಲಕವಾಗಿದ್ದವು. ಬಂಗಾಲಿ ಹಾಗೂ ಗುಜರಾತಿ ಎರಡೂ ಭಾಷೆಗಳ ಪರಿಚಯವೂ ಇತ್ತು. ಅವರು ತಮ್ಮ ಕೆಲ ಕನ್ನಡ ಕೃತಿಗಳನ್ನು ಹಿಂದಿಯಲ್ಲಿಯೂ ಭಾಷಾಂತರಿಸಿದ್ದರು. ಅವೆಂದರೆ ಸತ್ಯಾಗ್ರಹ ಮೀಮಾಂಸೆ, ಗಾಂಧೀಜಿ ಜೈಸೆ ಮೈನೆ ದೇಖಾ ಉಪನಿಷದೋಂಕಿ ಕಹಾನಿಯಾ ಮತ್ತು ಕರ್ಮಯೋಗ. ದಿವಾಕರರು ೧೨ ಪ್ರಮುಖ ಪುಸ್ತಕಗಳನ್ನು ಇಂಗ್ಲೀಷಿನಲ್ಲಿ ರಚಿಸಿದ್ದಾರೆ. ಇದನ್ನು ಭಾರತೀಯ ವಿದ್ಯಾಭವನ ಪ್ರಕಾಶಿಸಿದೆ. ಅವರ ಕನ್ನಡ ಪುಸ್ತಕ ಗಾಂಧೀಜಿ ನಾನು ಕಂಡಂತೆ My Encounter with Gandhiji ಎಂದು ಭಾಷಾಂತರವಾಯಿತು.

ಬಿಹಾರದ ರಾಜ್ಯಪಾಲರಾಗಿ ನಿವೃತ್ತರಾದ ನಂತರ Karnataka through the Ages ಎಂಬ ಪುಸ್ತಕವನ್ನು ಅವರು ಸಂಪಾದಿಸಿದ್ದರು. ಈ ಪುಸ್ತಕ ಈಗಲೂ ಕರ್ನಾಟಕದ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡುವ ವಿರಳ ಪುಸ್ತಕಗಳಲ್ಲಿ ಒಂದಾಗಿದೆ. ೨೦ ನೇ ಶತಮಾನದ ಎರಡನೇ ದಶಕದಲ್ಲಿ ಅವರು ನವಶಕ್ತಿ ಎಂಬ ಇಂಗ್ಲೀಷ್ ವಾರ ಪತ್ರಿಕೆಯ ಸಂಪಾದಕರೂ ಆಗಿದ್ದರು. ಈ ಪ್ರೇರಣೆಯೇ ಅವರಿಗೆ ಕರ್ಮವೀರ ಪತ್ರಿಕೆಯನ್ನು ಸ್ಥಾಪಿಸಲು ಸ್ಫೂರ್ತಿ ಒದಗಿಸಿತ್ತು.

ದಿವಾಕರ ರಂಗರಾಯರು ಬಳ್ಳಾರಿಯಲ್ಲಿ ೧೯೩೮ ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದು ಹಲವರಿಗೆ ಗೊತ್ತಿರಲಿಕ್ಕಿಲ್ಲ. ಇದು ಆ ಕಾಲಕ್ಕೆ ಅವರ ಸಾಹಿತ್ಯ ಪ್ರೇಮಕ್ಕೆ ಸಂದ ಗೌರವದ ಪ್ರತೀಕವಾಗಿತ್ತು.

ದಿವಾಕರ ಅವರ ಶೈಲಿ ತುಂಬಾ ಸರಳ ಹಾಗೂ ಅರ್ಥಪೂರ್ಣ. ಅಂತರಾತ್ಮನಿಗೆ ಎಂಬ ಅವರ ಪುಟ್ಟ ಪುಸ್ತಿಕೆಯ ೪೯ ನೇ ನುಡಿಯಲ್ಲಿ ಅವರು ಹೀಗೆ ಬರೆಯುತ್ತಾರೆ. ''ಎಲೇ ಜೀವಾ ಗಾಬರಿ ಗೊಳ್ಳಬೇಡ. ಸಾವು ಸುತ್ತಲೂ ಕುಣಿದರೇನು, ಪ್ರಾಣ ತಾ

ಬದುಕಲೆತ್ನಿಸದೇ? ತಮಂಧಃ ಮುಸುಕಿದರೇನು, ತಾರಕೆ ತನ್ನ ತೊಳೆಯುವುದೇ ? ಕತ್ತಲೆ ಕಳೆಯದಿದ್ದರೇನು ದೀಪ ತಾ ಮಿಣುಕಲರಿಯದೇ ? ಎಷ್ಟು ಅಜ್ಞಾನವಿದ್ದರೇನು, ನಿನ್ನ ಅಂತರ್‌ಜ್ಯೋತಿಯ ಬೆಳಕಿನಿಂದ ಸಾಗಿ ಜನರಿಗೆ ದಾರಿ ತೋರು, ಜೀವಾ, ಧೈರ್ಯಗೆಡಬೇಡ. ಎಷ್ಟು ಬಡತನವಿದ್ದರೇನು, ನಿನ್ನ ಬದುಕ ಹಂಚಿ ಬಾಂಧವರ ಹಿತ ನೋಡು. ಎಷ್ಟು ದುರುಳುತನವಿದ್ದರೇನು, ಸಜ್ಜನತನದ ಸತ್ಯ ಧ್ವಜವನ್ನು ಊರು. ದೈನ್ಯ ಎಷ್ಟಿದ್ದರೇನು, ಎದೆ ಗಟ್ಟಿಮಾಡಿ ಎಲ್ಲರಲ್ಲಿ ಉತ್ಸಾಹವ ತುಂಬು. ದಿನಕ್ಕೊಂದು ಹೆಜ್ಜೆ ಮುಂದೆ ಸಾಗಿದರೆ ಸಾಲದೆ ನಿನಗೆ? ಅದೇ ನಿನ್ನ ಕರ್ತವ್ಯ ಜೀವಾ. ಅದನ್ನು ಮಾಡಿ ಅಂತರಾತ್ಮನ ಆಶೀರ್ವಾದ ಪಡೆದು ಧನ್ಯನಾಗು. ಎಲೆ ಜೀವಾ ಏಳು, ಎದೆಗಾರನಾಗಿ ಮುಂದೆ ನಡೆ.

ಮಹಾತ್ಮರ ಮನೋರಂಗ ಎಂಬುದನ್ನು ಆರ್. ಕೆ. ಪ್ರಭು ಹಾಗೂ ಯು.ಆರ್. ರಾವ್ ಎಂಬುವರು ಬರೆದಿದ್ದರು. ಅದನ್ನು ೧೯೪೭ ರಲ್ಲಿ ರಂಗನಾಥ ದಿವಾಕರ ಅವರು ಕನ್ನಡಿಸಿದ್ದರು. ೧೯೪೫ ರಲ್ಲಿ ಈ ಪುಸ್ತಕ The Mind of Mahatma ಎಂದು ಪ್ರಕಟಗೊಂಡಿತ್ತು. ಇದಕ್ಕೆ ಮುಂದೆ ಭಾರತದ ರಾಷ್ಟ್ರಪತಿಯೂ ಆದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಮುನ್ನುಡಿಯನ್ನು ಬರೆದಿದ್ದರು. ಇವುಗಳನ್ನು ಅಂದರೆ ಗಾಂಧೀಜಿಯವರು ಲೇಖನದೊಳಗಿನ ಸನಾತನ ಸತ್ಯಗಳನ್ನು ಆಯ್ದು ಒಂದೆಡೆಗೆ ಕೂಡಿಸಿ ಅದರಲ್ಲಿಯ ತತ್ವಜ್ಞಾನದ ಅರ್ಥವು ಜನರಿಗೆ ಆಗಬೇಕೆಂಬ ಉದ್ದೇಶದಿಂದಲೇ ಪ್ರಭು ಮತ್ತು ರಾವ್ ಅವರು ಈ ಲೇಖನಗಳನ್ನೆಲ್ಲ ಒಗ್ಗೂಡಿಸಿದ್ದರು. ಇವುಗಳನ್ನೆಲ್ಲ ಸಮರ್ಥವಾಗಿ ದಿವಾಕರರು ಕನ್ನಡೀಕರಿಸಿದ್ದರು. ಈ ಪುಸ್ತಕದ ಸತ್ಯವೇ ದೇವರು ಎಂಬ ಶೀರ್ಷಿಕೆ ಅಡಿಯಲ್ಲಿ ಗಾಂಧೀಜಿಯವರ ಚಿಂತನೆ ಹೀಗೆ ಬರುತ್ತಿದೆ. ಕೆಡುಕಿನ ವಿರುದ ನಾನು ಹೋರಾಡದೇ ಹೋದರೆ ನನಗೆ ಪರಮಾತ್ಮನ ದರ್ಶನ ಆಗಲಾರದು ಎಂಬುದನ್ನು ನಾನು ಬಲ್ಲೆ. ನನಗಾದ ಮರ್ಯಾದಿತ ಅನುಭವವು ನನ್ನಲ್ಲಿ ಈ ವಿಶ್ವಾಸವನ್ನು ದೃಢ ಪಡಿಸಿದೆ....... ಅಹಿಂಸೆಯ ಸಂದೇಶ ಎಂಬ ಶೀರ್ಷಿಕೆಯ ಅಡಿಯಲ್ಲಿ ದಿವಾಕರ ಅವರ ಭಾಷಾಂತರ ಹೀಗೆ ಸಾಗುತ್ತದೆ. ''ಗಾಂಧೀಜಿಯವರ ಪ್ರಕಾರ ಸ್ವ ಸಂರಕ್ಷಣೆಗಾಗಿ ಕೊಲ್ಲುವ ಸಾಮರ್ಥ್ಯ ಎಂಬುದು ಅವಶ್ಯವಿಲ್ಲ. ಆದರೆ ಸಾಯುವ ಧೈರ್ಯವೂ ಬೇಕು. ಸಾಯಲು ಪೂರ್ಣ ಸಿದನಿದ್ದವನು ಹಿಂಸೆ ಮಾಡಲು ಎಂದೂ ಇಚ್ಛಿಸಲಾರನು. ನಿಜವಾಗಿ ಸಾಯುವ ಇಚ್ಛೆ, ಕೊಲ್ಲುವ ಇಚ್ಛೆ ಇವೆರಡೂ ವ್ಯಸ್ತ ಪ್ರಮಾಣದಲ್ಲಿ ಇರುವವೆಂದು ಸಿದಾಂತವನ್ನೇ ಮಾಡಬಹುದು...... ಪ್ರತೀಕಾರ ಶಕ್ತಿ ಇಲ್ಲದ, ಸಾವಿಗೆ ಅಂಜುವ ವ್ಯಕ್ತಿಗೆ ಅಹಿಂಸಾ ಪಾಠವನ್ನು ಹೇಳುವುದು ಸಾಧ್ಯವಿಲ್ಲ. ಅಸಹಾಯಕ ಇಲಿ ಯಾವಾಗಲೂ ಬೆಕ್ಕಿಗೆ ತುತ್ತಾಗುವುದು. ಆ ಮಾತ್ರಕ್ಕೆ ಅದು ಅಹಿಂಸಿಕ ಎನಿಸಲಾರದು. ತನ್ನಲ್ಲಿ ಶಕ್ಯ ವಿದ್ದರೆ ಇಲಿಯೇ ಬೆಕ್ಕನ್ನು ಸಂತೋಷದಿಂದ ತಿಂದು ಬಿಡಲು ಬಯಸುವುದು. ಆದರೆ ಅದು ಯಾವಾಗಲೂ ಭಯದಿಂದ ಓಡಿಯೇ ಹೋಗುವುದು. ಅದಕ್ಕೆ ನಾನು ಹೇಡಿ ಅನ್ನುವುದಿಲ್ಲ. ಏಕೆಂದರೆ ಅದು ಅದರ ನಿಸರ್ಗ ಗುಣ. ಮನುಷ್ಯನು ಮಾತ್ರ ಭಯವು ಎದುರು ಬಂದಾಗ ಇಲಿಯಂತೆ ವರ್ತಿಸಿದರೆ

ಅವನು ಹೇಡಿ ಎಂದು ಕರೆಯಲ್ಪಡುವುದು. ಅವನ ಅಂತಃಕರುಣದಲ್ಲಿ ಹಿಂಸೆ, ದ್ವೇಷ ತುಂಬಿರುವವು. ತನಗೆ ನೋವು ಉಂಟಾಗದೆ ತನ್ನ ಎದುರಾಳಿಯನ್ನು ಕೊಲ್ಲುವುದು ಸಾಧ್ಯವಿದ್ದರೆ ಅವನು ಹಾಗೆ ಮಾಡಿ ಬಿಡುವನು. ಅವನಲ್ಲಿ ಅಹಿಂಸೆಯ ಗಂಧವೂ ಕೂಡ ಇರುವುದಿಲ್ಲ. ಅಹಿಂಸೆಯ ದೊಡ್ಡ ಪುರಾಣವನ್ನು ಅವನ ಎದುರಿಗೆ ಹೇಳಿದರೆ ಅದು ಕೋಣನ ಎದುರು ಕಿನ್ನರಿ ಬಾರಿಸಿದಂತೆ. ಶೌರ್ಯ ಅವನ ಸ್ವಭಾವದಲ್ಲಿಯೇ ಇಲ್ಲ. ಅಹಿಂಸೆಯ ತಿಳುವಳಿಕೆ ಅವನಿಗೆ ಹುಟ್ಟುವ ಮೊದಲು ಅವನು ಸೆಟೆದು ನಿಲ್ಲಲು ಕಲಿಯಬೇಕು. ಅವನ ಮೇಲೆ ಆಕ್ರಮಣ ಮಾಡುತ್ತಿರುವವನ ವಿರುದ ಹೋರಾಡಿ ಸಾಯಲು ಕಲಿಯಬೇಕು. ಈ ರೀತಿ ನಡೆಯದೇ ಹೋದರೆ ಅವನ ಹೇಡಿತನವೇ ಹೆಚ್ಚುವುದು. ಅಹಿಂಸೆಯಂತೂ ದೂರವೇ ಉಳಿಯಿತು.....''

'ಗೀತೆಯ ಗುಟ್ಟು' ಪುಸ್ತಕದ ಆರನೇ ಆವೃತ್ತಿಯ ಮುನ್ನುಡಿಯಲ್ಲಿ ಅವರು ಹೀಗೆ ಹೇಳಿದ್ದರು. ಭಗವದ್ಗೀತೆಯು ನಮ್ಮ ಆಧ್ಯಾತ್ಮ ಶಾಸ್ತ್ರದ ಸಾರ ಸರ್ವಸ್ವವೂ. ಕರ್ನಾಟಕದ ನವ ಜಾಗೃತಿಯ ಕಾಲದಲ್ಲಿ ಈ ಗ್ರಂಥದ ಅಭ್ಯಾಸವು ಹೆಚ್ಚಾಗುವುದು ಅವಶ್ಯಕ. ನಮ್ಮಲ್ಲಿಯ ಜಾಗೃತಿಯು ಯಾವಾಗಲೂ ಆಧ್ಯಾತ್ಮಿಕ ಜಾಗೃತಿಯನ್ನು ಅವಲಂಬಿಸಿರುವುದು ಎಂದು ಅವರು ಹೇಳಿದ್ದಾರೆ.

■

**ರಂಗನಾಥ ದಿವಾಕರ ಅವರು ಬರೆದ ಪ್ರಮುಖ ಪುಸ್ತಕಗಳು ಕೆಳಗಿನಂತಿವೆ**

೧. ಉಪನಿಷತ್ ಪ್ರಕಾಶನ

೨. ಬೃಹದಾರಣ್ಯ ಉಪನಿಷತ್

೩. ಉಪನಿಷತ್ ಕಥಾವಳಿ

೪. ಗೀತೆಯ ಗುಟ್ಟು

೫. ಅಂತರಾತ್ಮನಿಗೆ

೬. ಕರ್ಮಯೋಗ

೭. ಹರಿಭಕ್ತಿಸುಧಾ

೮. ಭಕ್ತಿಸೂತ್ರಗಳು (ನಾರದ - ಶ್ಯಾಂಡಿಲ್ಯ ಕೃತ)

೯. ವಚನಶಾಸ್ತ್ರರಹಸ್ಯ

೧೦. ಸತ್ಯಾಗ್ರಹ ಇತಿಹಾಸ ಮತ್ತು ತಂತ್ರ

೧೧. ಮಹಾತ್ಮರ ಮನೋರಂಗ

೧೨. ಗಾಂಧೀಜಿ ಕಥೆಗಳು

೧೩. ಗಾಂಧೀಜಿ ನಾನು ಕಂಡಂತೆ

೧೪. ಬಾಪೂ

೧೫. ಗಾಂಧೀಜಿಯ ಜೀವನ ಮತ್ತು ಕಾರ್ಯ

೧೬. ಸೆರೆಯ ಮರೆಯಲ್ಲಿ

೧೭. ಹಳ್ಳಿಗರ ಕೈಪಿಡಿ

೧೮. ನರಮೇಧ

೧೯. ಕರ ನಿರಾಕರಣೆಯ ವೀರ ಕಥೆ

೨೦. ಕರ್ನಾಟಕ ಏಕೀಕರಣ ಕಥೆ

೨೧. ವೀರ ಕರ್ಮದ ಪ್ರೇರಣೆ

ರಂಗನಾಥ ದಿವಾಕರ ಅವರು ಬರೆದ ೧೨ ಪ್ರಮುಖ ಇಂಗ್ಲೀಷ ಪುಸ್ತಕಗಳು ಹೀಗಿವೆ. ಇವುಗಳನ್ನು ಭಾರತೀಯ ವಿದ್ಯಾಭವನ ಹೊರತಂದಿದೆ.

1. Bhagavan Buddha
೨. Upanishads in Story and Dialogue
3. Maha Yogi. Life, Sadhana and Teachings of Aurobindo
4. Gandhiji's Basic Ideas and Some Modern Problems
5. Gandhiji's Life, Thought and Philosphy
6. Gandhiji, The Spiritual Seeker
7. Paramahamsa Sri Ramakrishna
8. Gandhiji, A Practical Philospher
9. Is not Gandhiji the Answer ?
10. Gandhiji's Triple Message
11. Saga of Satyagraha
12. Some States of Consciousness.

# ಲೋಕ ಶಿಕ್ಷಣ ಟ್ರಸ್ಟ

ಸಂಯುಕ್ತ ಕರ್ನಾಟಕ ದೈನಿಕ, ಕರ್ಮವೀರ ವಾರ ಪತ್ರಿಕೆ, ಕಸ್ತೂರಿ ಮಾಸ ಪತ್ರಿಕೆ ಮತ್ತು ವಿವಿಧ ಜನೋಪಯೋಗಿ ಪುಸ್ತಕಗಳನ್ನು ಪ್ರಕಾಶಗೊಳಿಸುತ್ತಿರುವ ಲೋಕ ಶಿಕ್ಷಣ ಟ್ರಸ್ಟ ಎಂಬ ಮಾತೃ ಸಂಸ್ಥೆ ಇದೀಗ ಕರ್ನಾಟಕದ ಉದ್ದಗಲಕ್ಕೂ ಬೆಳೆದಿದ್ದು ಇನ್ನೂ ಬೆಳೆಯುತ್ತಲೇ ಇದೆ. ಬೆಂಗಳೂರಿನಲ್ಲಿ ಈಗ ಪ್ರಧಾನ ಕಛೇರಿಯನ್ನು ಹೊಂದಿರುವ ಹಾಗೂ ಹುಬ್ಬಳ್ಳಿ, ಗುಲ್ಬರ್ಗಾ, ದಾವಣಗೆರೆ, ಮಂಗಳೂರು ಸೇರಿದಂತೆ ಐದು ಆವೃತ್ತಿಯ ಸಂಯುಕ್ತ ಕರ್ನಾಟಕ ಪ್ರಕಟಣೆಯನ್ನು ಈ ಟ್ರಸ್ಟ್ ಹೊಂದಿದೆ. ಬೆಂಗಳೂರಿನ ರೆಸಿಡೆನ್ಸಿ ರಸ್ತೆಯಲ್ಲಿ ದಿವಾಕರ ಭವನ ಮತ್ತು ಹುಬ್ಬಳ್ಳಿಯ ಕೊಪ್ಪಿಕರ ರಸ್ತೆಯಲ್ಲಿರುವ ಮೊಹರೆ ಭವನ ಈ ಟ್ರಸ್ಟಿನ ಆಡಳಿತ ಭವನಗಳಾಗಿವೆ. ಸುಮಾರು ೬೦೦ ಕ್ಕೂ ಮಿಕ್ಕಿ ನೌಕರರು ಈ ಟ್ರಸ್ಟಿನ ಅಡಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ಸುಮಾರು ಒಂದೂವರೆ ಸಹಸ್ರ ಪತ್ರಿಕಾ ಏಜೆಂಟರು ಪತ್ರಿಕೆ ವಿತರಣೆ ವ್ಯವಸ್ಥೆಯಲ್ಲಿ ಹಾಗೂ ಇನ್ನೂರಕ್ಕೂ ಮಿಕ್ಕಿ ಅರೆಕಾಲಿಕ ಸುದ್ದಿಗಾರರು ಈ ಪತ್ರಿಕಾ ಬಳಗಕ್ಕೆ ಸೇರಿದ್ದಾರೆ. ಅತ್ಯಾಧುನಿಕ ಯಂತ್ರೋಪಕರಣಗಳು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಪ್ರಾದೇಶಿಕ ಕಛೇರಿಗಳು ಇವುಗಳನ್ನೆಲ್ಲ ತೆರೆಯುವ ಮೂಲಕ ಟ್ರಸ್ಟು ತನ್ನ ಪತ್ರಿಕೆಗಳನ್ನು ಪೈಪೋಟಿಯ ಈ ದಿನಗಳಲ್ಲಿ ಇನ್ನಿಷ್ಟು ಎತ್ತರಕ್ಕೆ ಒಯ್ಯುವ ಕಾರ್ಯದಲ್ಲಿ ನಿರತವಾಗಿದೆ.

ಹುಬ್ಬಳ್ಳಿಯಲ್ಲಿ ೧೯೨೫ ಅಗಸ್ಟ ೧ ರಂದು ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟ ಎಂದು ನೊಂದಾಯಿಸಲಾಯಿತು. ಆಗ ಇದರ ಆಸ್ತಿ ಕೇವಲ ನಾಲ್ಕೂವರೆ ಸಾವಿರ ರೂಪಾಯಿ ಆಗಿತ್ತು. ಆದರೂ ಸಹ ಬೆಳಗಾವಿಯ ಕರ್ನಾಟಕ ಪ್ರಕಾಶನ ಮಂಡಳದವರಿಂದ ಕನ್ನಡ ದೈನಿಕ ಸಂಯುಕ್ತ ಕರ್ನಾಟಕವನ್ನು ವಹಿಸಿಕೊಂಡಿತು. ಇದಕ್ಕೂ ಮೊದಲು ಅಂದರೆ ದಿವಾಕರರು ೧೯೨೧ ಫೆಬ್ರುವರಿ ೧೫ ರಥಸಪ್ತಮಿ ದಿನ ಕರ್ಮವೀರ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಅದಕ್ಕೆ ಕಬ್ಬೂರ ಮತ್ತು ಆರ್. ಎಸ್. ಹುಕ್ಕೇರಿಕರ ಅವರು ಸಹಕಾರ ನೀಡಿದ್ದರು. ೧೯೨೪ ರ ಸುಮಾರಿಗೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಕಾರ್ಯಾಲಯ ಹಾಗೂ ಕರ್ಮವೀರ ಕಛೇರಿ ಧಾರವಾಡದ ಸುಭಾಸ ರಸ್ತೆಯ ಸಂಸ್ಕೃತ ಪಾಠಶಾಲೆ (ದತ್ತಾತ್ರೇಯ ದೇವಸ್ಥಾನ) ಬಳಿ ಇತ್ತು. ಬ್ರಿಟಿಷರ ವಿರುದ ಅವರಿಗೊಂದು

ಹೋರಾಟದ ಅಸ್ತ್ರ ಬೇಕಾಗಿತ್ತು. ೧೯೩೨ ರ ಸುಮಾರು ಕರ್ಮವೀರ ಪ್ರಕಟಣೆ ಸ್ಥಗಿತಗೊಂಡಿತು. ಪುಣೆ ಸಮೀಪದ ಯರವಡಾ ಜೇಲಿನಲ್ಲಿ ೧೯೨೪-೨೫ ರಲ್ಲಿ ಅವರು ಮತ್ತು ಮೊಹರೆ ಹನುಮಂತರಾಯರು ಇದ್ದಾಗ ವಾರ ಪತ್ರಿಕೆಯನ್ನು ಹೇಗೆ ಸದೃಢಗೊಳಿಸಬೇಕು ಹಾಗೂ ನಿರಂತರವಾಗಿ ಪತ್ರಿಕೆಗಳು ಕಾರ್ಯ ನಿರ್ವಹಿಸುವ ವ್ಯವಸ್ಥೆ ಬಗ್ಗೆ ಚರ್ಚಿಸಿದರು. ಜೇಲಿನಿಂದ ಬಿಡುಗಡೆಯಾದ ನಂತರ ೨೦ ಸಹಸ್ರ ರೂಪಾಯಿ ಹಣವನ್ನು ಸಂಗ್ರಹಿಸಬೇಕು ಎಂದು ನಿರ್ಧರಿಸಿದ್ದರು. ಆದರೆ ಸ್ವಾತಂತ್ರ್ಯ ಆಂದೋಲನಗಳ ತೀವ್ರತೆಯಿಂದಾಗಿ ಬರೀ ನಾಲ್ಕೂವರೆ ಸಾವಿರದಷ್ಟು ಹಣ ಮಾತ್ರ ಸೇರಿತ್ತು. ೧೯೨೯ ರಲ್ಲಿ ಬೆಳಗಾವಿಯಲ್ಲಿ ಮುಂಬೈ ಪ್ರಾಂತದ ಪತ್ರಕರ್ತರ ಸಮಾವೇಶ ಸೇರಿತ್ತು. ಮುಂಬೈಯಿಂದ ಪ್ರಕಟವಾಗುತ್ತಿದ್ದ ಬಾಂಬೆ ಕ್ರಾನಿಕಲ್ ಪತ್ರಿಕೆಯ ಸಂಪಾದಕ ಸಯ್ಯದ್ ಅಬ್ದುಲ್ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಮಾವೇಶದಲ್ಲಿ ಕನ್ನಡ ಪತ್ರಕರ್ತರು ಇಲ್ಲದಿರುವುದನ್ನು ನೋಡಿ ದಿವಾಕರರು ಖಿನ್ನರಾಗಿದ್ದರು. ಹೀಗಾಗಿ ೧೯೨೯ ವಿಜಯದಶಮಿ ದಿನದಂದು ಸಂಯುಕ್ತ ಕರ್ನಾಟಕ ವಾರ ಪತ್ರಿಕೆಯ ರೂಪ ತಾಳಿತು. ಆದರೆ ಕೆಲವೇ ದಿವಸಗಳಲ್ಲಿ ಬಂದ ಉಪ್ಪಿನ ಸತ್ಯಾಗ್ರಹದಲ್ಲಿ ಈ ಪತ್ರಿಕೆ ನಿಂತು ಹೋಯಿತು. ನಂತರ ಬೆಳಗಾವಿಯ ಧುರೀಣರಾದ ನಾರಾಯಣರಾವ್ ಜೋಶಿ, ಬಳವಂತರಾವ ದಾತಾರ, ಕೇಶವರಾವ್ ಗೋಖಲೆ ಇವರು ನಾಸಿಕ್ ಜೇಲಿನಲ್ಲಿ ೧೯೩೧-೩೨ ರಲ್ಲಿ ಇದ್ದರು. ಅವರು ಸಹ ಸುದೀರ್ಘವಾಗಿ ಚಿಂತನೆ ನಡೆಸಿ, ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ದೈನಿಕವಾಗಿ ತರಬೇಕೆಂದು ನಿರ್ಧರಿಸಿದರು. ಹೀಗಾಗಿ ೧೯೩೩ ಎಪ್ರಿಲ್ ೨೭ ಅಕ್ಷಯ ತೃತೀಯಾ ದಿನದಂದು ಸಂಯುಕ್ತ ಕರ್ನಾಟಕ ಪತ್ರಿಕೆ ಬೆಳಗಾವಿಯಲ್ಲಿ ಜನ್ಮ ತಳೆಯಿತು. ಶೇಷಾಚಾರ್ಯ ಕಟ್ಟಿ ಎಂಬ ವಕೀಲರು ಪತ್ರಿಕೆಯ ಪ್ರಥಮ ಸಂಪಾದಕರಾದರು.

ಆದರೆ ಈ ಪತ್ರಿಕೆ ಸಂಪಾದಕರಾಗಲಿ ಆಡಳಿತ ವರ್ಗದವರಾಗಲಿ ಈ ವ್ಯವಸಾಯದಲ್ಲಿ ನುರಿತವರಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟ ಹಾಗೂ ಜೊತೆಗೆ ಪತ್ರಿಕಾ ವ್ಯವಸಾಯ ಇರಬೇಕೆಂಬ ಧೋರಣೆ ಅವರದಿತ್ತು. ಅವರೆಲ್ಲರೂ ಸೇರಿ ಕರ್ನಾಟಕ ಪ್ರಕಾಶನ ಮಂಡಳವೆಂಬ ಸಂಸ್ಥೆಯನ್ನು ರಚಿಸಿಕೊಂಡಿದ್ದರು. ಕೆಲ ಹಣವನ್ನು ಸಂಗ್ರಹಿಸಿದ್ದರು. ಈ ಮೂಲಕವೇ ಅವರು ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಹೊರ ತರುತ್ತಿದ್ದರು. ಇದಕ್ಕೆ ಮಾನವ ಸಂಪನ್ಮೂಲತೆ ಆಗಲಿ ಆರ್ಥಿಕ ಬಲ ಇರಲಿಲ್ಲ. ಸಾಕಷ್ಟು ಚರ್ಚೆಯ ನಂತರ ಈ ಪತ್ರಿಕಾ ಪ್ರಕಟಣೆ ಹೊಣೆಯನ್ನು ರಂಗನಾಥ ದಿವಾಕರ ಅವರಿಗೆ ವಹಿಸಬೇಕೆಂದು ಹಾಗೂ ಸಾರ್ವಜನಿಕ ಟ್ರಸ್ಟ ಒಂದನ್ನು ನಿರ್ಮಿಸಿ ಅದನ್ನು ದಿವಾಕರರಿಗೆ ಒಪ್ಪಿಸಿ, ಪತ್ರಿಕೆಗಳು ನಿಯಮಿತವಾಗಿ ಹೊರ ಬರುವಲ್ಲಿ ಅವರು ಕಾರ್ಯೋನ್ಮುಖರಾಗಲು ವಿನಂತಿಸಬೇಕೆಂದು ನಿರ್ಧರಿಸಿದರು. ಆಗಲೇ ದಿವಾಕರ ಅವರು ರಾಷ್ಟ್ರೀಯ ವಾಙ್ಮಯ ಪ್ರಕಟಣಾ ಟ್ರಸ್ಟನ್ನು ರಚಿಸಿದ್ದರು. ಹಾಗೂ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ೦೧.೦೮.೧೯೩೫ ರಂದು ಅವರು ತಮ್ಮ ಆಧೀನಕ್ಕೆ ವಹಿಸಿಕೊಂಡರು. ತಮ್ಮ ಟ್ರಸ್ಟಿನ ಏಕಮೇವ ಟ್ರಸ್ಟಿಯೂ ಅವರಾಗಿದ್ದರು. ತಾಂತ್ರಿಕ ಕಾರಣಗಳಿಂದಾಗಿ ರಾಷ್ಟ್ರೀಯ ವಾಙ್ಮಯ

ಪ್ರಕಟಣಾ ಟ್ರಸ್ಟು ೧೯೪೭ ರಲ್ಲಿ ಲೋಕ ಶಿಕ್ಷಣ ಟ್ರಸ್ಟ ಎಂದಾಯಿತು. ದಿವಾಕರರು ೧೯೩೫ ರಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ವಹಿಸಿಕೊಂಡು ಬೆಳಗಾವಿಯಲ್ಲಿ ಅದು ಎರಡು ವರ್ಷ ನಡೆಯುವಂತೆ ನೋಡಿಕೊಂಡರು. ಆದರೆ ಭೌಗೋಳಿಕ ದೃಷ್ಟಿಯಿಂದ ಹುಬ್ಬಳ್ಳಿಯೇ ಸೂಕ್ತಸ್ಥಾನ ಎಂದು ಅನಿಸಿ ೧೯೩೭ ಅಕ್ಟೋಬರ್‌ನಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯ ಪ್ರಕಟಣೆಯನ್ನು ಹುಬ್ಬಳ್ಳಿಗೆ ತಂದರು. ಇದರಿಂದ ಪತ್ರಿಕೆಯ ವಿತರಣೆ ಸುಲಭವಾಯಿತು. ನಂತರ ಬಂದ ಎರಡನೇ ಮಹಾಯುದ ಹಾಗೂ ಚಲೇಜಾವ ಚಳುವಳಿಯಿಂದಾಗಿ ಜನರಲ್ಲಿ ಓದುವ ಕುತೂಹಲ ಹೆಚ್ಚಾಗತೊಡಗಿತು. ಅಪ್ರತ್ಯಕ್ಷವಾಗಿ ಪತ್ರಿಕೆಯ ಪ್ರಸಾರವು ಇದರಿಂದಾಗಿ ಹೆಚ್ಚ ತೊಡಗಿತು. ೧೯೪೦ ಜನೇವರಿ ೧ ರಿಂದ ಕರ್ಮವೀರ ವಾರ ಪತ್ರಿಕೆ  ಪುನರಾರಂಭಗೊಂಡಿತು. ೧೯೪೮ ರಲ್ಲಿ ಕರ್ಮವೀರ ದೀಪಾವಳಿಯ ಮೊಟ್ಟ ಮೊದಲ ವಿಶೇಷಾಂಕ ಹೊರ ಬಂದಿತು. ೧೯೫೩ ರಿಂದ ಕರ್ಮವೀರ ಸಂಯುಕ್ತ ಕರ್ನಾಟಕದಲ್ಲಿ ವಿಲೀನಗೊಂಡಿತು. ಪುನಃ ೧೯೫೯ ಜನೇವರಿ ೨೬ ರಿಂದ ಪ್ರತ್ಯೇಕ ವಾರ ಪತ್ರಿಕೆ ಪ್ರಕಟವಾಗಲಾರಂಭಿಸಿತು. ಆಗ ಕರ್ಮವೀರಕ್ಕೆ ಜೀವ ತುಂಬಿದವರು ಸಂಪಾದಕ ಹ.ರಾ. ಪುರೋಹಿತ. ೧೯೬೮ ರಲ್ಲಿ ಮತ್ತೆ ಕರ್ಮವೀರ ಪ್ರಕಟಣೆ ಸ್ಥಗಿತಗೊಳಿಸಿತು. ಆದರೆ ಸುದೀರ್ಘ ಸಮಯದ ನಂತರ ಅಂದರೆ ೧೯೭೨ ರ ನವೆಂಬರ್ ೧೨ ರಿಂದ ಪುನಃ ತನ್ನ ಪ್ರಕಟಣೆ ಪ್ರಾರಂಭಿಸಿತು.

ಬಿಹಾರದ ರಾಜ್ಯಪಾಲರಾಗಿ ಮರಳಿ ಬಂದ ನಂತರ ಸಂಯುಕ್ತ ಕರ್ನಾಟಕದ ಅಭಿವೃದಿ ಬಗ್ಗೆ ದಿವಾಕರರವರು ಬಲವಾಗಿ ಚಿಂತಿಸತೊಡಗಿದರು. ೧೯೫೮ ರಲ್ಲಿ ಮೊಹರೆ ಹನುಮಂತರಾಯರು ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಸ್ಥಾನದಿಂದ ನಿವೃತ್ತರಾದ ನಂತರ ದಿವಾಕರ ರಂಗರಾಯರು ಸಂಯುಕ್ತ ಕರ್ನಾಟಕ ಮತ್ತು ಕಸ್ತೂರಿಯ ಸಂಪಾದಕರಾಗಿ ೧೧.೦೮.೧೯೫೮ ರಂದು ಅಧಿಕಾರ ಸ್ವೀಕರಿಸಿದರು. ಹ.ರಾ. ಪುರೋಹಿತರು ಕರ್ಮವೀರ ಸಂಪಾದಕ ಸ್ಥಾನದಿಂದ ನಿವೃತ್ತರಾದ ನಂತರ ಆ ವಾರ ಪತ್ರಿಕೆಯ ಸಂಪಾದಕರೂ ಸಹ ದಿವಾಕರರೇ ಆದರು.

೧೯೫೯ ಜನೇವರಿ ೨೬ ರಿಂದ ಸಂಯುಕ್ತ ಕರ್ನಾಟಕ ಪತ್ರಿಕೆಯ ಬೆಂಗಳೂರ ಆವೃತ್ತಿ ಪ್ರಾರಂಭಗೊಂಡಿತು. ಆಗಿನ ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಜಯಚಾಮರಾಜೇಂದ್ರ ಒಡೆಯರು ಬೆಂಗಳೂರು ಆವೃತ್ತಿಯನ್ನು ಬಿಡುಗಡೆ ಮಾಡಿದ್ದರು. ಕನ್ನಡ ಪತ್ರಿಕಾ ರಂಗದಲ್ಲಿಯೇ ಹುಬ್ಬಳ್ಳಿ ಮತ್ತು ಬೆಂಗಳೂರುಗಳಿಂದ ಏಕ ಕಾಲಕ್ಕೆ ಪ್ರಕಟವಾಗುವ ಪತ್ರಿಕೆ ಸಂಯುಕ್ತ ಕರ್ನಾಟಕ ಒಂದೇ ಆಗಿದ್ದು ಇಲ್ಲಿ ಗಮನಾರ್ಹ.

೧೯೫೬ ಸೆಪ್ಟೆಂಬರ್ ತಿಂಗಳಿನಿಂದ ರೀಡರ್ಸ್ ಡೈಜೆಸ್ಟ ಇಂಗ್ಲೀಷ್ ಮಾಸ ಪತ್ರಿಕೆಯ ಮಾದರಿಯಲ್ಲಿ ಕಸ್ತೂರಿ ಪತ್ರಿಕೆ ತನ್ನ ಪ್ರಕಟಣೆಯನ್ನು ಪ್ರಾರಂಭಿಸಿತು. ತುಂಬಾ ಆಸಕ್ತಿ ವಹಿಸಿ ಸಂಯುಕ್ತ ಕರ್ನಾಟಕ, ಕರ್ಮವೀರ, ಕಸ್ತೂರಿ ಪತ್ರಿಕೆಗಳ ಸಂಪಾದಕ ಹಾಗೂ ಕಾರ್ಯ ನಿರ್ವಹಣೆಯಲ್ಲಿ ದಿವಾಕರರು ತೊಡಗಿದ್ದರು ಇದು ನಿರಂತರವಾಗಿರಲಿಲ್ಲ. ರಾಷ್ಟ್ರಮಟ್ಟದ

ವ್ಯಕ್ತಿತ್ವ ಹೊಂದಿದ್ದ ಅವರಿಗೆ ದಿನನಿತ್ಯದ ಪಾಲ್ಗೊಳ್ಳುವಿಕೆ ಅನಿವಾರ್ಯವಾಗಿತ್ತು. ಲೋಕಶಿಕ್ಷಣ ಟ್ರಸ್ಟದ ಪ್ರಧಾನ ಕಾರ್ಯಾಲಯ ಬೆಂಗಳೂರು ಆಗಿತ್ತು. ಕಾಲಾಂತರದಲ್ಲಿ ಅವರ ಏಕಮಾತ್ರ ಪುತ್ರ ಅನಂತ ದಿವಾಕರ ಅವರು ಪ್ರಾರಂಭಕ್ಕೆ ಸಹಾಯಕ ಕಾರ್ಯದರ್ಶಿಯಾಗಿ ಲೋಕ ಶಿಕ್ಷಣ ಟ್ರಸ್ಟ ತನ್ಮೂಲಕ ಪತ್ರಿಕಾ ಸಮೂಹದ ಆಡಳಿತದಲ್ಲಿ ಪಾಲ್ಗೊಳ್ಳತೊಡಗಿದರು. ಇದರಿಂದಾಗಿ ಕೆಲ ಸಮಯದ ವರೆಗೆ ಸರಸವಾಗಿ ವಾತಾವರಣ ಇದ್ದರೂ ತಿಂಗಳುಗಳು ಉರುಳಿದಂತೆ ವಿರಸ ಆಡಳಿತದಲ್ಲಿ ಮನೆ ಮಾತಾಯಿತು. ಇದರ ಜೊತೆಗೆ ದಿವಾಕರ ಅವರ ಸಂಚಾರ ಮತ್ತು ಬೇರೆ ಸಂಸ್ಥೆಗಳಲ್ಲಿಯ ಪಾಲ್ಗೊಳ್ಳುವಿಕೆಯಿಂದಾಗಿ ಅನಂತ ದಿವಾಕರರು ಹೆಚ್ಚು ಕಡಿಮೆ ಪತ್ರಿಕಾ ಬಳಗದ ಆಡಳಿತಾಧಿಕಾರಿಗಳು, ಸಂಪಾದಕೀಯ ವಿಭಾಗದ ಮುಖ್ಯಸ್ಥರಂತೆ ಕಾರ್ಯ ನಿರ್ವಹಿಸತೊಡಗಿದರು. ಇದೆಲ್ಲದರ ಪರಿಣಾಮ ಲೋಕ ಶಿಕ್ಷಣ ಟ್ರಸ್ಟಿನ ಆಡಳಿತದ ಮೇಲೆ ಪರಿಣಾಮ ಬೀರತೊಡಗಿತು. ಕೆಲ ನಿಷ್ಠಾವಂತ ಅಧಿಕಾರಿಗಳು ರಾಜೀನಾಮೆ ನೀಡಿದರೆ ಇನ್ನು ಕೆಲವರು ಹೊಟ್ಟೆ ಪಾಡಿಗಾಗಿ ನೌಕರಿ ಮಾಡ ತೊಡಗಿದರು. ಏತನ್ಮಧ್ಯೆ ಸಂಸ್ಥೆಯ ಆರ್ಥಿಕ ಬಲವು ತೀವ್ರ ಕುಸಿತಗೊಂಡಿತಲ್ಲದೇ ಪತ್ರಿಕೆ ಹೊರಡಿಸಲು ಬೇಕಾದ ಕಾಗದ ಖರೀದಿಸಲು ಮತ್ತು ನೌಕರರ ಸಂಬಳ ಕೊಡಲು ಹಣಕ್ಕೆ ಪರದಾಡುವಂತಾಯಿತು. ೧೯೬೨ ರಲ್ಲಿ ಎಮ್. ಎಚ್. ಕೌಜಲಗಿಯವರು ಲೋಕ ಶಿಕ್ಷಣ ಟ್ರಸ್ಟಿನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿ ಹೊರ ಬಂದ ಮೇಲೆ ೧೯೭೪ ರ ವರೆಗೆ ಅನಂತ ದಿವಾಕರ ಅವರ ಆಡಳಿತ, ಅಧಿಕಾರ, ಲೋಕ ಶಿಕ್ಷಣ ಟ್ರಸ್ಟಿಗೆ ಒಳಿತನ್ನು ಮಾಡಿರಲಿಲ್ಲ. ತೀರ ಕನಿಷ್ಟ ಮಟ್ಟಕ್ಕೆ ಬಂದಾಗ ರಂಗನಾಥ ದಿವಾಕರ ಅವರು ಸಂಯುಕ್ತ ಕರ್ನಾಟಕ ಕರ್ಮವೀರ ಕಸ್ತೂರಿ ಇದರ ಅಡಳಿತವನ್ನು ಆಗ ರಾಜ್ಯದ ಹಣಕಾಸು ಮಂತ್ರಿಗಳಾಗಿದ್ದ ಎಮ್. ವಾಯ್ ಘೋರ್ಪಡೆ ಅವರಿಗೆ ೧೯೭೪ ರಲ್ಲಿ ಹಸ್ತಾಂತರಿಸಿದರು. ಅವರು ಕರ್ನಾಟಕ ಪತ್ರಿಕಾ ಪ್ರೈವೇಟ್ ಲಿಮಿಟೆಡ್ (ಕೆ.ಪಿ.ಪಿ.ಎಲ್.) ಎಂಬ ಸಂಸ್ಥೆ ನಿರ್ಮಿಸಿ ಅದರ ಅಡಿಯಲ್ಲಿ ಮೂರು ಪತ್ರಿಕೆಗಳ ಪ್ರಕಟಣೆ ಪ್ರಾರಂಭಿಸಿದರು.

ಏತನ್ಮಧ್ಯೆ ಈ ಹಸ್ತಾಂತರವನ್ನು ವಿರೋಧಿಸಿ ನಂತರ ಲೋಕ ಶಿಕ್ಷಣ ಟ್ರಸ್ಟಿನ ಕಾರ್ಯದರ್ಶಿಗಳೂ ಆದ ಕೆ. ಶಾಮರಾವ್ ಮತ್ತಿತರರು ಚಾರಿಟಿ ಕಮೀಶ್ನರ್ ಮತ್ತು ಧಾರವಾಡ ಜಿಲ್ಲಾ ನ್ಯಾಯಲಯಗಳಲ್ಲಿ ಮೊಕದ್ದಮೆ ಹೂಡಿದ್ದರು. ಅವರ ವಾದವೆಂದರೆ ಲೋಕ ಶಿಕ್ಷಣ ಟ್ರಸ್ಟ್ ಸಾರ್ವಜನಿಕ ಟ್ರಸ್ಟ ಆಗಿದ್ದು ದಿವಾಕರರ ಖಾಸಗಿ ಟ್ರಸ್ಟ ಆಗಿರುವುದಿಲ್ಲ, ಹಾಗೂ ಟ್ರಸ್ಟಿನ ನಿಯಮಾವಳಿಗಳ ಮೂಲಕ ಇದನ್ನು ಇಂಥದೇ ಉದ್ದೇಶವಿದ್ದ ಬೇರೆ ಸಾರ್ವಜನಿಕ ಟ್ರಸ್ಟಿಗೆ ಹಸ್ತಾಂತರಿಸಲು ಬರುತ್ತದೆ ಎಂದು ವಾದ ಮಾಡಿದ್ದರು. ಸುಮಾರು ೧೨ ವರ್ಷಗಳ ಕಾಲ ಈ ವಿವಾದ ನಡೆಯಿತು. ೧೯೮೬ ರಲ್ಲಿ ರಾಜ್ಯ ಹೈಕೋರ್ಟ್ ತೀರ್ಪು ನೀಡಿ ಲೋಕ ಶಿಕ್ಷಣ ಟ್ರಸ್ಟು, ಸಾರ್ವಜನಿಕ ಟ್ರಸ್ಟಾಗಿದೆ

ಎಂದು ತಿಳಿಸಿತು. ೧೯೭೪ರಿಂದ ೧೯೮೬ ರ ಈ ಹನ್ನೆರಡು ವರ್ಷಗಳ ಅವಧಿಯಲ್ಲಿ ಸುಮಾರು ಏಳು ಆಡಳಿತ ವರ್ಗಗಳು ಬಂದು ಲೋಕ ಶಿಕ್ಷಣ ಟ್ರಸ್ಟಿನ ಆಸ್ತಿ ಮತ್ತು ಪತ್ರಿಕಾ ಸಮೂಹಗಳ ಪ್ರಕಟಣೆಗಳ ನಿರ್ವಹಣೆಯನ್ನು ಮಾಡಿದವು. ಹೈಕೋರ್ಟ್ ಐವರು ಧರ್ಮದರ್ಶಿಗಳನ್ನು ನೇಮಿಸಿ ಟ್ರಸ್ಟಿನ ವ್ಯವಹಾರಗಳನ್ನು ನೋಡಿಕೊಳ್ಳಲು ನಿರ್ದೇಶಿಸಿತು. ಇವರೆಂದರೆ ಮಾಜಿ ಉಪರಾಷ್ಟ್ರಪತಿ ಬಿ.ಡಿ. ಜತ್ತಿ, ಕರ್ನಾಟಕ ಬ್ಯಾಂಕಿನ ಹಿಂದಿನ ಅಧ್ಯಕ್ಷರಾಗಿದ್ದ ಕೆ. ಸೂರ್ಯನಾರಾಯಣ ಅಡಿಗ, ನಿವೃತ್ತ ಡಿ.ಐ.ಜಿ. ಆರ್. ಎ. ಮುಂಡಕೂರ, ನಿವೃತ್ತ ಚೀಫ್ ಇಂಜನೀಯರ್ ಎಸ್.ಪಿ. ಭಟ್, ಧಾರವಾಡದ ಹಿರಿಯ ನ್ಯಾಯವಾದಿ ಡಾ. ಜಿ. ಎಮ್. ಪಾಟೀಲ ಇವರೇ ಹೈಕೋರ್ಟ್ ನಿಯಮಿಸಿದ ಧರ್ಮದರ್ಶಿಗಳಾಗಿದ್ದರು. ಈ ಮಂಡಳಿಯ ಅಧ್ಯಕ್ಷರಾಗಿ ಬಿ.ಡಿ. ಜತ್ತಿಯವರು ಆಯ್ಕೆಗೊಂಡರು ಹಾಗೂ ೧೦.೦೩.೧೯೮೬ ರಂದು ಅದುವರೆಗೆ ಟ್ರಸ್ಟಿನ ಕಾರ್ಯ ನಿರ್ವಾಹಕರಾಗಿದ್ದ ಇಬ್ಬರು ಕೋರ್ಟ್ ರಿಸಿವರ್‌ಗಳಿಂದ ಅಧಿಕಾರ ವಹಿಸಿಕೊಂಡರು. ಇಲ್ಲಿಯವರೆಗೂ ಇದೇ ಉಪಕ್ರಮದಲ್ಲಿ ಲೋಕಶಿಕ್ಷಣ ಟ್ರಸ್ಟ್ ಮುಂದುವರೆಯುತ್ತಿದೆ. ೨೦೦೯ ರಲ್ಲಿ ಲೋಕ ಶಿಕ್ಷಣ ಟ್ರಸ್ಟಿನ ಧರ್ಮದರ್ಶಿಗಳಾಗಿದ್ದ ಡಾ. ಜಿ. ಎಮ್. ಪಾಟೀಲ ಹಾಗೂ ಹಿರಿಯ ಸ್ವಾತಂತ್ರ್ಯ ಯೋಧರೂ ಸಚಿವರೂ ಆಗಿದ್ದ ಹಾರನಹಳ್ಳಿ ರಾಮಸ್ವಾಮಿಯವರು ನಿಧನರಾದ ನಂತರ ಪ್ರಸ್ತುತ (೨೦೧೦) ಅವಧಿಯಲ್ಲಿ ರಾಜ್ಯದ ಅಡ್ವೋಕೇಟ್ ಜನರಲ್ ಆಗಿದ್ದ ಅಶೋಕ ಹಾರ್‍ನಹಳ್ಳಿಯವರು ಲೋಕಶಿಕ್ಷಣ ಟ್ರಸ್ಟಿನ ಅಧ್ಯಕ್ಷರಾಗಿದ್ದಾರೆ. ಈ ಟ್ರಸ್ಟಿನ ಉಳಿದ ನಾಲ್ವರು ಧರ್ಮದರ್ಶಿಗಳೆಂದರೆ ಕೇಂದ್ರದ ಹಿಂದಿನ ಸಚಿವ ಎಮ್.ವ್ಹಿ. ರಾಜಶೇಖರ, ಹಿರಿಯ ಕಾಂಗ್ರೆಸ್ ಧುರೀಣ ಉಮೇಶ ಭಟ್ಟ ಮತ್ತು ಬೆಂಗಳೂರಿನ ಉದ್ಯಮಿ ಯು.ಬಿ. ವೆಂಕಟೇಶ, ಹಾಗೂ ಧಾರವಾಡ ಲೋಕಸಭಾ ಸದಸ್ಯ ಪ್ರಹ್ಲಾದ ಜೋಶಿ.

■

# ಅಂತಿಮ ಪಯಣ

ರಂಗನಾಥ ದಿವಾಕರ ಅವರದ್ದು ತುಂಬು ಜೀವನದ ಅಮರ ವ್ಯಕ್ತಿತ್ವ. ಅವರು ವಿಶ್ರಮಿಸಿದ ದಿನಗಳೇ ಇಲ್ಲ ಎನ್ನಬಹುದು. ಆದರೆ ಅವರ ಸಾವು ಅವರಿಗೆ ಚಿರನಿದ್ರೆ ನೀಡುವ ಮೊದಲು ಕೆಲವು ದಿನಗಳ ಅಂಶಿಕ ವಿಶ್ರಾಂತಿಯನ್ನು ನೀಡಿತು. ಆದರೂ ಸಹ ಕೆಲವೇ ತಿಂಗಳುಗಳ ಮೊದಲು ಅವರು ಪಂಜಾಬಿಗೆ ತೆರಳಿದ್ದರು. ಆಗ ಪಂಜಾಬ ಭಯೋತ್ಪಾದಕರ ಅಗ್ನಿಕುಂಡವೆಂದೇ ಪ್ರಸಿದವಾಗಿತ್ತು. ದಿವಾಕರ ಅವರು ಒಬ್ಬರೇ ಹೋಗಿರಲಿಲ್ಲ, ಅವರೊಂದಿಗೆ ೫೩ ಜನ ಸರ್ವೋದಯ ಕಾರ್ಯಕರ್ತರೂ ಇದ್ದರು. ಅವರಿಗಿದ್ದ ಒಂದೇ ಆಸೆ ಎಂದರೆ ತಾವೇ ಸಿದಪಡಿಸಿದ್ದ ಪಂಚಶೀಲ ಎಂಬ ಶಾಂತಿ ಯೋಜನೆಯ ಮೂಲಕ ಭಯೋತ್ಪಾದಕರ ಮನಸ್ಸನ್ನು ಪರಿವರ್ತಿಸಬಹುದೆಂದು ನಂಬಿದ್ದರು. ಆ ಬಗ್ಗೆ ಪ್ರಯತ್ನವನ್ನೂ ನಡೆಸಿದರು. ನಂತರ ಪಂಜಾಬಿನಲ್ಲಿ ಶಾಂತಿ ನೆಲೆಸಿದ್ದು ಬೇರೆ ಮಾತು.

ಭಾರತದ ರಾಷ್ಟ್ರೀಯತೆ ಅವರಲ್ಲಿ ಏಕ ರಸವಾಗಿ ಇದ್ದಿತು. ಗಾಂಧೀಜಿ ತತ್ವಗಳು ಮಾರ್ಗದರ್ಶಿ ಸೂತ್ರಗಳು ಹಾಗೂ ಭಾರತೀಯ ಸಂಸ್ಕೃತಿ ಇವೆಲ್ಲವುಗಳನ್ನು ಮೈಗೂಡಿಸಿ ಕೊಂಡಿದ್ದ ಅವರ ಮನಸ್ಸು ಇದರ ಚೌಕಟ್ಟಿನಲ್ಲಿಯೇ ಪರಿಹಾರವನ್ನು ಬಯಸುತ್ತಿತ್ತು. ಅವರು ಸಾಯುವ ಕೆಲವೇ ದಿನಗಳ ಮೊದಲು ಕರ್ಮ ಎಂದರೆ ಏನು ಎಂಬ ಲೇಖನವನ್ನು ಬರೆದಿದ್ದರು. ಮೂಲತಃ ಅವರು ಒಬ್ಬ ನಿಷ್ಕಾಮ ಕರ್ಮಯೋಗಿ ಅಂದರೆ ತಪ್ಪಾಗಲಾರದು. ಅವರಿಗೆ ಬಹುಶಃ ತಮ್ಮ ಅಂತಿಮ ದಿನಗಳ ಕಲ್ಪನೆ ಇದ್ದೀತು. ಅದಕ್ಕೆಂದೇ ಅವರು ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿರುವ ಕರ್ನಾಟಕ ಆರೋಗ್ಯ ಧಾಮಕ್ಕೆ ತೆರಳಿ ಅಲ್ಲಿ ಚಿಕಿತ್ಸೆ ಪಡೆಯುವ ಮೂಲಕ ತಮ್ಮ ಅಂತಿಮ ದಿನಗಳನ್ನು ಕಳೆಯಲೆಂದೇ ಬಯಸಿದರು. ೧೯೯೦ ಜನೇವರಿ ೧೫ ರಂದು ರಾತ್ರಿ ೧೧.೧೫ ಕ್ಕೆ ಅವರ ದೇಹ ಕೊನೆಯುಸಿರೆಳೆಯಿತು. ಅವರ ನಿಧನಕ್ಕೆ ಆಗಿನ ರಾಷ್ಟ್ರಪತಿ ಆರ್. ವೆಂಕಟರಾಮನ್ ಸೇರಿದಂತೆ ಹಲವಾರು ಗಣ್ಯರು ತಮ್ಮ ಸಂತಾಪ ವ್ಯಕ್ತಪಡಿಸಿದರು. ವೆಂಕಟರಾಮನ್ ಅವರಂತೂ ದಿವಾಕರರನ್ನು ''ಅಗ್ರ ಪಂಕ್ತಿಯ ಸ್ವಾತಂತ್ರ್ಯ ಹೋರಾಟಗಾರ, ಸಮರ್ಥ ಆಡಳಿತಗಾರ, ಸಂಸದೀಯ ಪಟು'' ಎಂದು ವರ್ಣಿಸಿದರು. ಆಗಿನ ಉಪರಾಷ್ಟ್ರಪತಿ ಡಾ.

ಶಂಕರ ದಯಾಳ ಶರ್ಮಾ ಅವರು ತಮ್ಮ ಶೋಕ ಸಂದೇಶದಲ್ಲಿ ದಿವಾಕರ ನಿಧನದಿಂದ ಸ್ವಾತಂತ್ರ್ಯ ಹೋರಾಟ ಕಾಲದ ಮತ್ತು ಮಹಾತ್ಮಾ ಗಾಂಧೀ ಜೊತೆಗಿನ ಮತ್ತೊಂದು ಕೊಂಡಿ ಕಳಚಿದಂತಾಗಿದೆ ಎಂದು ದುಃಖಿಸಿದರು. ಕರ್ನಾಟಕದ ಆಗಿನ ರಾಜ್ಯಪಾಲ ಪಿ. ವೆಂಕಟಸುಬ್ಬಯ್ಯ, 'ದಿವಾಕರ ನಿಧನದಿಂದ ದೇಶ ಓರ್ವ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ' ಎಂದರು. ರಾಜ್ಯದ ಆಗಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು 'ದಿವಾಕರ ಅವರು ಕನ್ನಡ ನಾಡು ನುಡಿಗೆ ಸಲ್ಲಿಸಿದ ಸೇವೆ ಚಿರಸ್ಮರಣೀಯ' ಎಂದು ಸ್ಮರಿಸಿದರು.

ಮರುದಿನ ಜನೆವರಿ ೧೬ ರಂದು ಮುಂಜಾನೆ ೧೧.೩೦ ಕ್ಕೆ ಘಟಪ್ರಭಾದಿಂದ ದಿವಾಕರ ರವರ ಪಾರ್ಥಿವ ಶರೀರವನ್ನು ಸಕಲ ಸರಕಾರಿ ಮರ್ಯಾದೆಗಳೊಂದಿಗೆ ಬೆಂಗಳೂರಿಗೆ ಅಂತ್ಯ ಸಂಸ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು. ರಾಜ್ಯ ಸರ್ಕಾರದ ಪರವಾಗಿ ರಾಷ್ಟ್ರಧ್ವಜಾಲಂಕೃತವಾಗಿದ್ದ ದಿವಾಕರ ಅವರ ಪಾರ್ಥಿವ ಶರೀರದ ಮೇಲೆ ಬೆಳಗಾವಿಯ ಆಗಿನ ಜಿಲ್ಲಾಧಿಕಾರಿ ಜಿ. ಗುರುಚರಣ ಅಂತಿಮ ನಮನ ಸಲ್ಲಿಸಿದರು. ಪೊಲೀಸರು ಶೋಕ ವಂದನೆ ಸಲ್ಲಿಸಿದರು. ದಿವಾಕರ ಅವರ ಸೇವೆಯನ್ನು ಅವರ ನಿಧನದವರೆಗೂ ಮಾಡಿದ್ದ ಆರೋಗ್ಯಧಾಮದ ಹಿರಿಯ ಕಾರ್ಯಕರ್ತೆ ಶ್ರೀಮತಿ ವಿಮಲಾಬಾಯಿ ಮತ್ತು ಆರೋಗ್ಯ ಧಾಮದ ಮುಖ್ಯ ವೈದ್ಯಾಧಿಕಾರಿ ಡಾ. ಎಂ. ಕೆ. ವೈದ್ಯ ಅವರೂ ಸಹ ದಿವಾಕರರ ಬಗ್ಗೆ ಕಂಬನಿ ಮಿಡಿದರು. ದಿವಾಕರ ಅವರ ನಿಧನಕ್ಕೆ ಸಂತಾಪ ಸಲ್ಲಿಸಿದ ಇನ್ನುಳಿದ ಪ್ರಮುಖರೆಂದರೆ ಹಿಂದಿನ ಮುಖ್ಯಮಂತ್ರಿ ಕಡಿದಾಳ ಮಂಜಪ್ಪ ಮತ್ತು ಆರ್. ಗುಂಡೂರಾವ್ ಇತರರು.

ದಿನಾಂಕ ೧೬ ರಂದು ದಿವಾಕರರ ಪಾರ್ಥಿವ ಶರೀರವನ್ನು ಬೆಂಗಳೂರಿಗೆ ಕೊಂಡೊಯ್ಯುವ ಮಾರ್ಗದಲ್ಲಿ ಹುಬ್ಬಳ್ಳಿಗೆ ತರಲಾಯಿತು. ಅವರ ಕರ್ಮಭೂಮಿ ಮತ್ತು ವೀರಭೂಮಿ ಎರಡೂ ಆಗಿದ್ದ ಹುಬ್ಬಳ್ಳಿಯ ಕೊಪ್ಪೀಕರ ರಸ್ತೆಯಲ್ಲಿರುವ ಸಂಯುಕ್ತ ಕರ್ನಾಟಕದ ಎದುರು ಅವರ ಪಾರ್ಥಿವ ಶರೀರ ಬಂದಾಗ ಕಾರ್ಯಕರ್ತರು ಪತ್ರಿಕಾ ನೌಕರರು ಕಂಬನಿಗರೆದರು. ಲೋಕ ಶಿಕ್ಷಣ ಟ್ರಸ್ಟನ ಪರವಾಗಿ ಸಂಯೋಜನಾಧಿಕಾರಿ ವಿ.ಜಿ. ವೈದ್ಯ, ಕಾರ್ಮಿಕ ಸಂಘದ ಪರವಾಗಿ ಆಗಿನ ಕಾರ್ಯದರ್ಶಿ ಹನುಮಂತ ಕರಿಯರ, ಸಂಪಾದಕೀಯ ವಿಭಾಗದ ಪರವಾಗಿ ಆಗಿನ ಸಂಪಾದಕ ಆರ್.ಎ. ಉಪಾಧ್ಯೆ, ಆಗ ಮುಖ್ಯ ವರದಿಗಾರರಾಗಿದ್ದ ಈ ಪುಸ್ತಕದ ಲೇಖಕ ಮನೋಜ ಪಾಟೀಲ, ನಿವೃತ್ತ ಪತ್ರಕರ್ತರಾದ ಆರ್.ಕೆ. ಜೋಶಿ, ಸುರೇಂದ್ರ ದಾನಿ ಹಾಗೂ ನೇತ್ರ ವೈದ್ಯ ಡಾ. ಎಂ. ಎಂ. ಜೋಶಿ, ಸ್ವಾತಂತ್ರ್ಯಯೋಧರಾದ ವೆಂಕಟೇಶ ಮತ್ತು ಲೀಲಾವತಿ ಮಾಗಡಿ, ಶ್ರೀಮತಿ ನಾಗಮ್ಮ ಪಾಟೀಲ ಅನೇಕರು ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು. ನಂತರ ದಿವಾಕರರ ಪಾರ್ಥಿವ ಶರೀರವನ್ನು ಹುಬ್ಬಳ್ಳಿಯ ಮೂರುಸಾವಿರಮಠಕ್ಕೆ ತರಲಾಯಿತು. ಆಗಿನ ಮೂರುಸಾವಿರಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಪಾರ್ಥಿವ ಶರೀರದ ಮೇಲೆ ಪುಷ್ಪಗುಚ್ಛ ಇರಿಸಿದರು.

ದಿವಾಕರರ ಗೌರವಾರ್ಥ ಧಾರವಾಡದ ಜನತಾ ಶಿಕ್ಷಣ ಸಮಿತಿಯ ಸಂಸ್ಥೆಗಳು, ಹುಬ್ಬಳ್ಳಿ ದೇಶಪಾಂಡೆ ನಗರದ ಗರ್ಲ್ ಹೈಸ್ಕೂಲ್ ಮತ್ತು ನ್ಯೂ ಇಂಗ್ಲೀಷ್ ಸ್ಕೂಲ್ ರಜೆ ಘೋಷಿಸಿದ್ದವು.

ಜನೇವರಿ ೧೭ ರಂದು ಮಧ್ಯಾಹ್ನ ಬೆಂಗಳೂರಿನ ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ರಂಗನಾಥ ರಾಮಚಂದ್ರ ದಿವಾಕರರ ಚಿತೆಗೆ ಅವರ ಏಕಮೇವ ಪುತ್ರ ಅನಂತ ರಂಗನಾಥ ದಿವಾಕರರು ಅಗ್ನಿಸ್ಪರ್ಶ ಮಾಡಿದರು. ಅದಕ್ಕೂ ಮೊದಲು ಬೆಂಗಳೂರಿನಲ್ಲಿ ಅವರ ನಿವಾಸದಲ್ಲಿ ಅನೇಕ ಗಣ್ಯರು ಅವರ ಪಾರ್ಥಿವ ಶರೀರದ ಅಂತಿಮ ದರ್ಶನವನ್ನೂ ಪಡೆದರು.

ಕೇವಲ ಒಂದೂವರೆ ತಿಂಗಳ ಹಿಂದೆ ಬೆಳಗಾವಿ ಜಿಲ್ಲೆಯ ಘಟಪ್ರಭಾ ಆರೋಗ್ಯ ಧಾಮಕ್ಕೆ ತೆರಳುವ ಮೊದಲು ದಿವಾಕರ ರಂಗರಾಯರು ತಮ್ಮ ಆತ್ಮೀಯರೊಬ್ಬರ ಮುಂದೆ ಹೇಳಿದ್ದರಂತೆ ''ನಾನು ಇನ್ನು ಬೆಂಗಳೂರಿಗೆ ಹಿಂದಿರುಗುವುದಿಲ್ಲ ಎಂದು.''

ಉತ್ತರಾಯಣ ಪರ್ವ ಕಾಲ ಬರುವವರೆಗೂ ಕಾಯ್ದು ಭಗವದ್ಗೀತೆಯ ಉಕ್ತಿಯಂತೆ ಹರಿದ ವಸ್ತ್ರ ತ್ಯಜಿಸುವಂತೆ ದೇಹವನ್ನು ಅವರು (೧೮೯೪-೧೯೯೦) ತೊರೆದು ಹೋದರು.

■

## ರಂಗನಾಥ ದಿವಾಕರ ಅವರ ಜೀವನದ ಮಹತ್ವದ ಮೈಲುಗಲ್ಲುಗಳು

| | |
|---|---|
| ೩೦.೦೯.೧೮೯೪ | ಧಾರವಾಡದಲ್ಲಿ ಜನನ |
| ೧೯೦೫ | ಬೆಳಗಾವಿಯಲ್ಲಿ ಪ್ರಾಥಮಿಕ ಶಿಕ್ಷಣ |
| ೧೯೧೧ | ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ |
| ೧೯೧೬ | ಪುಣೆ ಫರ್ಗ್ಯೂಸನ್ ಕಾಲೇಜಿನಲ್ಲಿ ಇಂಗ್ಲೀಷ್ ಹಾಗೂ ಸಂಸ್ಕೃತ ವಿಷಯಗಳಲ್ಲಿ ಬಿ.ಎ. ಆನರ್ಸ್ ಪದವಿ. ಅದೇ ವರ್ಷ ಲೋಕಮಾನ್ಯ ಟಿಳಕರ ಸಂಗಡ ಮೊದಲ ಭೇಟಿ. |
| ೧೯೧೮ | ಮುಂಬೈ ವಿಶ್ವವಿದ್ಯಾಲಯದಿಂದ ಎಂ. ಎ. ಪದವಿ |
| ೧೯೧೮ | ವಿಜಾಪುರದ ರಾಧಾಬಾಯಿಯವರ ಸಂಗಡ ವಿವಾಹ |
| ೧೯೧೯ | ಎಲ್.ಎಲ್.ಬಿ. ಪದವಿ ಅದೇ ವರ್ಷ ಕೊಲ್ಹಾಪೂರ (ಮಹಾರಾಷ್ಟ್ರ) ರಾಜಾರಾಮ್ ಕಾಲೇಜದಲ್ಲಿ ಇಂಗ್ಲೀಷ್ ಶಿಕ್ಷಕ |
| ೧೯೨೦ | ಧಾರವಾಡದ ಆರ್ಟ್ಸ್ ಕಾಲೇಜದಲ್ಲಿ ಶಿಕ್ಷಕ |
| ೧೫.೦೭.೧೯೨೧ | ಕರ್ಮವೀರ ಪತ್ರಿಕೆ ಪ್ರಾರಂಭ |
| ೦೭.೦೬.೧೯೨೧ | ಧಾರವಾಡದಲ್ಲಿಯ ಗೋಳಿಬಾರ ಹಿನ್ನೆಲೆಯಲ್ಲಿ ಪೊಲೀಸ್ ಬಂಧನ. |
| ೦೫.೧೦.೧೯೨೧ | ಈ ಪ್ರಕರಣದಿಂದ ಬಿಡುಗಡೆ |
| ೦೬.೧೧.೧೯೨೨ | ವಿದ್ರೋಹದ ಭಾಷಣಕ್ಕೆ ಪೊಲೀಸರಿಂದ ಬಂಧನ. ನಂತರ ಒಂದು ವರ್ಷ ಶಿಕ್ಷೆ. ಯರವಡಾ ಜೇಲಿನಲ್ಲಿ ವಾಸ. ಅದೇ ಕಾಲಕ್ಕೆ ಅಲ್ಲಿದ್ದ ಗಾಂಧೀಜಿಯವರ ಸಂಗಡ ಭೇಟಿ. ಜೇಲಿನ ಅವಧಿಯಲ್ಲಿ ಉಪನಿಷತ್‌ಗಳ ಭಾಷಾಂತರ. |

| | |
|---|---|
| ೦೫.೧೧.೧೯೨೩. | ಜೇಲಿನಿಂದ ಬಿಡುಗಡೆ |
| ೧೯೨೩. | ನವಶಕ್ತಿ ಇಂಗ್ಲೀಷ ವಾರಪತ್ರಿಕೆ ಪ್ರಾರಂಭ |
| ೧೯೨೩. | ಡಿಸೆಂಬರ್‌ನಲ್ಲಿ ಎರಡು ವರ್ಷ ಕಠಿಣ ಶಿಕ್ಷೆ ಹಾಗೂ ೫೦೦ ರೂ. ದಂಡ ದೇಶಿ ದುಂದುಮೆ ಎಂಬ ಕವನ ಪ್ರಕಟಿಸಿದ್ದಕ್ಕೆ ಈ ಶಿಕ್ಷೆ. ಯರವಡಾ ಜೇಲಿನಲ್ಲಿ ವಾಸ. ಅದೇ ಕಾಲಕ್ಕೆ ಗೀತೆಯ ಗುಟ್ಟು ಪುಸ್ತಕ ಬರೆದದ್ದು. |
| ೦೬.೦೭.೧೯೨೫ | ಯರವಡಾ ಜೇಲಿನಿಂದ ಬಿಡುಗಡೆ ಹಾಗೂ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಾರ್ಯದರ್ಶಿಯಾಗಿ ನೇಮಕ. |
| ೧೯೨೯ | ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಆಯ್ಕೆ. |
| ೧೭.೦೪.೧೯೩೦ | ಧಾರವಾಡದಲ್ಲಿ ಉಪ್ಪಿನ ಸತ್ಯಾಗ್ರಹ. ಬಂಧನ. ಆರು ತಿಂಗಳ ಸಾದಾ ಶಿಕ್ಷೆ. ಬೆಳಗಾವಿಯ ಹಿಂಡಲಗಾ ಜೇಲಿನಲ್ಲಿ ವಾಸ. |
| ೧೯೩೧ | ದಿವಾಕರರ ಧಾರವಾಡದ ಮನೆ ಪೊಲೀಸರಿಂದ ಜಪ್ತಿ. |
| ೧೪.೦೯.೧೯೩೧ | ಪುತ್ರ ಅನಂತ ಜನನ ಹಾಗೂ ಅದೇ ತಿಂಗಳ ಅಂತ್ಯದಲ್ಲಿ ಪತ್ನಿ ರಾಧಾಬಾಯಿ ಸಾವು. |
| ೧೯೩೨ | ಕಾರವಾರ ಜಿಲ್ಲೆಯಲ್ಲಿ ಕರ ನಿರಾಕರಣೆ ಚಳುವಳಿ. ಇದರ ಅಂಗವಾಗಿ ಮೂರು ವರ್ಷ ಶಿಕ್ಷೆ. ಹಿಂಡಲಗಾ ಜೇಲಿನಲ್ಲಿ ವಾಸ. ಈ ಸಮಯದಲ್ಲಿ ವಚನಶಾಸ್ತ್ರರಹಸ್ಯ, ಅಂತರಾತ್ಮನಿಗೆ ಮತ್ತು ಕರ್ಮಯೋಗ ಪುಸ್ತಕಗಳ ರಚನೆ. ೧೯೩೪ ಆಗಷ್ಟನಲ್ಲಿ ಜೇಲಿನಿಂದ ಬಿಡುಗಡೆ |
| ೦೧.೦೮.೧೯೩೫ | ರಾಷ್ಟ್ರೀಯ ವಾಙ್ಮಯ ಪ್ರಕಟಣೆ ಟ್ರಸ್ಟ್ ರಚನೆ, ದಿವಾಕರ ಅದರ ಏಕಮೇವ ಟ್ರಸ್ಟಿ. ಈ ಮೂಲಕ ಸಂಯುಕ್ತ ಕರ್ನಾಟಕ ಪತ್ರಿಕೆ ಪ್ರಕಟಣೆ ಪ್ರಾರಂಭ. |
| ೧೯೩೮ | ಡಿಸೆಂಬರ್‌ನಲ್ಲಿ ಬಳ್ಳಾರಿಯಲ್ಲಿ ನಡೆದ ೨೩. ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನ |
| ೧೯೪೧ | ಫೆಬ್ರುವರಿಯಲ್ಲಿ ವ್ಯೆಯಕ್ತಿಕ ಸತ್ಯಾಗ್ರಹದ ಅಂಗವಾಗಿ ಬಂಧನ. ನಾಸಿಕ್ ಜೇಲಿನಲ್ಲಿ ವಾಸ. ಡಿಸೆಂಬರ್‌ನಲ್ಲಿ ಬಿಡುಗಡೆ. |
| ೦೯.೦೮.೧೯೪೨ | ಚಲೇಜಾವ್ ಚಳುವಳಿ ಪ್ರಾರಂಭ. ದಿವಾಕರ ಭೂಗತ |
| ೧೯೪೪ | ಭೂಗತರಿದ್ದಾಗಲೇ ಮುಂಬೈನ ಜುಹು ಬೀಚ್‌ನಲ್ಲಿ ಗಾಂಧೀಜಿಯವರ ಸಂಗಡ ಭೇಟಿ ಹಾಗೂ ಚರ್ಚೆ. ಗಾಂಧೀಜಿಯವರ ನಿರ್ದೇಶನದಂತೆ ಅಗಷ್ಟ ೮ ರಂದು ಹುಬ್ಬಳ್ಳಿಯಲ್ಲಿ ಪ್ರಕಟ. ಮರುದಿನ ಬಂಧನ. ನಂತರ ಹಿಂಡಲಗಾ |

| | |
|---|---|
| | ಜೇಲಿನಲ್ಲಿ ವಾಸ. ೨೫.೦೭.೧೯೪೫ ರಂದು ಜೇಲಿನಿಂದ ಬಿಡುಗಡೆ. |
| ೧೯೪೬ | ಘಟನಾ ಸಮಿತಿಗೆ ಆಯ್ಕೆ (ಇಟ್ಲಾಠಿಜತ್ಖಿಲ್ಲಿ ಆಅಖಿಜಿಚ್ಟಿಡ) |
| ೨೯.೧೨.೧೯೪೭ | ಕಾಸರಗೋಡಿನಲ್ಲಿ ನಡೆದ ೧೧ ನೇ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನದ ಅಧ್ಯಕ್ಷಸ್ಥಾನ |
| ೧೯೪೮ | ಪಂ. ಜವಾಹರಲಾಲ ನೆಹರು ಸಂಪುಟದಲ್ಲಿ ಸೇರ್ಪಡೆ. ವಾರ್ತಾ ಮತ್ತು ಬಾನುಲಿ ಖಾತೆ ಸಚಿವರಾಗಿ ನೇಮಕ. |
| ೧೯೫೨ | ಬಿಹಾರದ ರಾಜ್ಯಪಾಲರಾಗಿ ನೇಮಕ |
| ೧೯೫೭ | ರಾಜ್ಯಪಾಲರ ಅವಧಿ ಮುಕ್ತಾಯ ಹಾಗೂ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಆಯ್ಕೆ |
| ೧೧.೦೮.೧೯೫೮ | ಸಂಯುಕ್ತ ಕರ್ನಾಟಕ ಹಾಗೂ ಕಸ್ತೂರಿ ಪತ್ರಿಕೆಗಳ ಸಂಪಾದಕರಾಗಿ ಅಧಿಕಾರ ಸ್ವೀಕಾರ |
| ೧೯೫೯ | ಗಾಂಧೀ ಶಾಂತಿ ಪ್ರತಿಷ್ಠಾನ ಅಧ್ಯಕ್ಷ |
| ೧೯೬೦ | ಇಂಗ್ಲೆಂಡ್ ಅಮೇರಿಕೆಗೆ ಪ್ರವಾಸ |
| ೧೯೬೨ | ಅಮೇರಿಕೆ ಅಧ್ಯಕ್ಷ ಕೆನಡಿ ಭೇಟಿ ಹಾಗೂ ಅಣ್ವಸ್ತ್ರನಿಷೇಧಕ್ಕೆ ಆಗ್ರಹ |
| ೧೯೬೨-೬೮ | ರಾಜ್ಯ ಸಭೆ ಸದಸ್ಯರಾಗಿ ಮತ್ತೊಮ್ಮೆ ಆಯ್ಕೆ |
| ೧೯.೦೭.೧೯೬೪ | ಕರ್ಮವೀರ ಪತ್ರಿಕೆಯ ಸಂಪಾದಕರಾಗಿ ಅಧಿಕಾರ ಸ್ವೀಕಾರ |
| ೧೯೭೦ | ಸರ್ವಧರ್ಮ ಶಾಂತಿ ಪರಿಷತ್ತು ಉಪಾಧ್ಯಕ್ಷರ ಅಧಿಕಾರದಿಂದ ಜಪಾನಿಗೆ ಭೇಟಿ. |
| ೧೯೭೧ | ಮಲೇಷಿಯಾ, ಸಿಂಗಾಪೂರ ಸೇರಿದಂತೆ ೧೩. ದೇಶಗಳಿಗೆ ಭೇಟಿ. |
| ೧೯೭೩. | ಮಾರ್ಚನಲ್ಲಿ ಸ್ವಿಜರ್‌ಲೆಂಡ್‌ನಲ್ಲಿ ಮಹೇಶಯೋಗಿ ಸಂಗಡ ಭೇಟಿ. |
| ೧೯೭೩. | ಗಾಂಧೀ ಸ್ಮಾರಕ ನಿಧಿ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ ಇವುಗಳ ಅಧ್ಯಕ್ಷ ಸ್ಥಾನದಿಂದ ನಿವೃತ್ತಿ. |
| ೧೯೭೪ | ಅಕ್ಟೋಬರ್‌ನಲ್ಲಿ ಸಂಯುಕ್ತ ಕರ್ನಾಟಕ, ಕರ್ಮವೀರ, ಕಸ್ತೂರಿ ಈ ಪತ್ರಿಕೆಗಳನ್ನು ಹಿಂದಿನ ಸಚಿವ ಎಂ.ವಾಯ್ ಘೋರ್ಪಡೆ ನೇತೃತ್ವದ ಕರ್ನಾಟಕ ಪತ್ರಿಕಾ ಪ್ರೈ.ಲಿ. (ಕೆ.ಪಿ.ಪಿ.ಎಲ್.) ಸಂಸ್ಥೆಗೆ ಹಸ್ತಾಂತರ. |

| | |
|---|---|
| ೧೯೮೩. | ಭಾರತೀಯ ವಿದ್ಯಾಭವನದ ಪರವಾಗಿ ಅಮೇರಿಕೆ ಪ್ರವಾಸ |
| ೧೯೮೬ | ಲೋಕಶಿಕ್ಷಣ ಟ್ರಸ್ಟ್ ಸಾರ್ವಜನಿಕ ಸಂಸ್ಥೆ ಎಂದು ನ್ಯಾಯಾಲಯದಿಂದ ತೀರ್ಪು |
| ೧೯೮೭ | ಪಂಜಾಬಿಗೆ ಶಾಂತಿ ಯಾತ್ರೆ |
| ೧೯೮೮ | ಮುಂಬೈಯಲ್ಲಿ ನಡೆದ ಜಮುನಾಲಾಲ್ ಬಜಾಜ್ ಜನ್ಮಶತಾಬ್ದಿ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ |
| ೧೫.೦೧.೧೯೯೦ | ಬೆಳಗಾವಿ ಜಿಲ್ಲೆ ಘಟಪ್ರಭಾ ಆರೋಗ್ಯಧಾಮದಲ್ಲಿ ನಿಧನ. |

■